MYSORE LEGISLATIVE ASSEMBLY

FIFTEENTH DAY.

Wednesday, 18th March 1959.

The House met in the Assembly Hall, Vidhana Soudha, Bangalore, at One of the Clock.

MR SPEAKER (SRI S. R. KANTHI, B.A., LL.B.) in the Chair.

PAPERS LAID ON THE TABLE.

Sri K. F. PATIL (Minister for Agriculture).—I beg to lay on the Table the Mysore Public Service Commission (Consultation) Regulations, 1958 issued under clause (3) of article 320 of the Constitution of India.

Sri J. B MALLARADHYA.—(Nanjangud).—In regard to the Mysore Public Service Commission Rules, I want to know when these rules were made and why these rules are being published at such a distance of time. Will the Hon'ble Minister be pleased to say whether it is not binding on the Government that these rules should be placed on the Table as soon as they are published?

Mr. SPEAKER.—The copies of the Rules are laid on the Table of the House and they will also be distributed to the members. They can just read them. They can bring to my notice as to why there has been delay in publishing the rules, etc.

Sri K. F. PATIL.—I beg to lay on the Table the Mysore Residence of Ministers and Deputy Ministers (Charges for Consumption of Electricity) Rules, 1958 issued under Section 15 of the Mysore Ministers Salaries and Allowances, Act, 1956.

BUDGET FOR 1959-60—DEMANDS FOR GRANTS.

No. 13. General Administration.
No. 14. General Administration (State Legislature and Election Charges).

(*Debate continued*)

Mr. SPEAKER —Further discussion on voting of Demands for grants for the year 1959-60 will continue.

Sri G. VENKATAI GOWDA (Palaiyam).—Mr. Speaker, Sir, the Demand so far as the General Administration is concerned does not deserve our support for the simple reason that there is lack of efficiency in the administration, lack of integrity and utter failure on the part of the Government in not having been able to bring about economy in the administration. As a matter of fact, public administration has become an object of ridicule and criticism in the eyes of the public. Instead of efficiency creeping in day by day, unfortunately it has been deteriorating from bad to wors . No doubt, Mr, Gorwala has been asked to find out ways and means to secure efficiency in the administration and also to bring about economy and he has submitted his report. I think, Sir, by implementing some of the recommendations of Gorwala we can least expect to secure efficiency in the administration, unless there is determined will on the part of the officers concerned to do their job correctly and honestly without fear or favour in an unbiassed manner. Such an atmosphere is now necessary and they should inculcate in themselves the sense of duty, the sense of patriotism and more than anything else, a desire to serve the people of the State and secure the interest of the State to the best of their ability. But that we have not been finding today. I am not holding the view that all the officers of the State are like this. There are officers who have dedicated themselves to serve the interests of the State. But there are unfortunately other officers also who are swayed by communal, regional or parochial

(SRI G. VENKATAI GOWDA)

considerations more than anything else.

Sri H. M. CHANNABASAPPA (Minister for Public Works),—If the Hon'ble Member would kindly yield, I may state that such general remarks without instances and without specific instances will carry little weight.

Sri G. VENKATAI GOWDA.—There are several instances. Yesterday, my friend Sri Mallaradhya gave several instances. I am not arguing on flimsy ground or without any basis. After integration, the Government drafted certain provisional list containing the inter-State seniority. They have forwarded this list to the officers concerned for their objection. The Government also from time to time have issued orders and one of the orders dated 17th June 1957 runs like this:

> "However in respect of vacancies in Statewide cadres which are to be filled up by promotion and where provisional Inter-State Seniority lists have been published for objections on the part of the Government servants concerned, officiating promotions may be made on the basis of such lists on the understanding that the appointments will be liable to review if the position of an officer in the Inter-State Seniority list is altered."

That is the Government Order. But I would like to bring to the notice of the Government that the former Inspector General of Police has given promotions flouting the Government Order issued. He has promoted some people from Coorg and some people from Hyderabad who are really below some 200 members who ought to have received promotion according to the provisional list. That fact has been brought to the notice of the Chief Minister and he has assured to review the entire case.

Sri N. RACHIAH (Minister for Excise and Social Welfare).—In what cadres?

Sri G. VENKATAI GOWDA.—Sub-Inspectors of Police. They are not only non-graduates but persons who were non-matriculates. The Government rule has been violated. Is it not communalism? Is it not regionalism? I am not worried whether this man is promoted or whether that man is promoted. I am concerned with officers following the rule promulgated by the Government. The Chief Secretary has issued it. There is every reason to believe that the Chief Secretary must have been a party to this unjust treatment. They should have followed the provisional list. There is a Government order and I want to know why should they not follow it. Will it not have a bad effect on the administration? I suggest that these are things which have bad repercussions on the administration resulting in inefficiency and the like. Also, Sir, I am told that after integration of States, the Public Service Commission have selected candidates as per the rules of recruitment existing then to the various Second Division Clerks, posts; the Chief Secretary has recently flouted the rules and is stated to have issued a circular not to entertain those candidates selected by the Public Service Commission and if they are already entertained to treat them as local candidates. After all, the Public Service Commission is a judicial body. They have selected candidates and to treat them as local candidates, is there any justification? What effect would that be on the administration of the State? Such kind of attitude by the officers, I do not think will improve matters and that will go on the other hand to worsen the position as far as the efficiency is concerned. Recently I happened to meet an old gentleman who is 65-70 years old. He has seen the administration of old Mysore under so many Dewans. After discussing so many things, he told me "You can say anything about the Gevernment and in my view, and this is the view of the entire community at large, it has become a recommendatory Government."

ಇದು ಒಂದು ಶಿಪಾರ್ಸಿ ಸರ್ಕಾರವಾಗಿದೆ. ಜನಗಳ ಹಿತಸಾಧನೆ ಮಾಡುವುದಕ್ಕಾಗಿ ಈ ಸರ್ಕಾರ ಕೆಲಸ ಮಾಡುತ್ತಾ ಇಲ್ಲವೆಂದು ಅನೇಕ ದೊಡ್ಡ ಮನುಷ್ಯರು ಹೇಳಿದಮೇಲೆ, there must be some substance in that statement.

Sri H. M. CHANNABASAPPA.—Because he merely says that, you think there must be some substance.

Sri G. VENKATAI GOWDA.—Seeing all these things, it appears that it is recommendatory Government and nothing else. (Sri H. M Channabasappa.—What a great inference!) The gentleman is a ryot, he is not an officer. Also it has become a common saying that to be honest and sincere in the work has become a disqualification. That is the view that has been held by many of the officers. Such being the case, how could you expect efficiency in the administration ? Unless the officers do something to incur the favour of the Chief Secretary or somebody else, they cannot be in their good books. Yesterday many Hon'ble Members were saying that there is no necessity for an I.C.S. officer. He has not done anything for the last $2\frac{1}{2}$ years. Why should you be silent? After framing the general recruitment rules, I want the Government to scrutinise those rules and see whether those rules are consistent with the Constitutional safeguards given to us. The Constitutional safeguard so far as the Scheduled Castes are concerned is, certain reservation has got to be made to them. I want to know whether the general recruitment rules are consistent with the provisions of the Constitution and if not, would it not be *ultra vires* of the Government to give effect to the rules? I want the Government to go through the general recruitment rules and see whether they are consistent with the safeguard provi ions contained in the Constitution and whether they are able to push through the work efficiently and honestly. After 1st November 1956 after the new State came into being, so many appointments have been made in the Secretariat. Have they been able to observe these conditions or these requirements laid down that certain reservations have to be made for the Scheduled Castes? Have they been able to find out that the 18 per cent appointed are from the members of the Scheduled Castes ?

Sri H. M. CHANNABASAPPA.—Is it your idea that in any particular given set up, whether it is the Secretariat or elsewhere, the proportion must be introduced ?

Sri G. VENKATAI GOWDA.—As far as possible, in all the sectors this proportion must be introduced.

Mr. SPEAKER.—I think there is a Government circular in this respect.

Sri N. RACHIAH.—I may bring to the notice of the colleague of mine Sri H. M. Channabasappa and the members of the House that there is a Government directive of 1956-57 that whatever may be the service that comes under the State Government the reservation order and the Constitutional safeguards should be followed; and so far they are not followed strictly because they are mistaken. Ever since I have taken charge, I have already called for all the information from the Heads of departments and the Public Service Commission as to how far they have implemented the reservation orders and the Constitutional safeguards and I am yet to receive information. It should be implemented and it is nobody's charity and nobody's patronage.

Sri H. M. CHANNABASAPPA.—I wanted to know whether it is the idea.

Sri G. VENKATAI GOWDA.—I therefore request the Government to review the entire appointments made in the Secretariat from 1st November 1956 and see whether the safeguards are clearly maintained. Our Government are putting forward many pleas that they are not able to implement the several schemes under the Plan. They pointed out the integration of States and very many impediments came in the way. That is the reason why they were not able to implement the schemes. Let us concede that to some extent there were difficulties, but what have they done ? Have they been able to achieve uniformity touching all the matters concerning the administration of the State ? Have they been able to achieve uniformity in regard to the laws which would fetch revenue to the exchequer ? What about the various laws that have been vital ? What about the various rules under Labour Acts ? As many as 24 labour laws—Central

(SRI G. VENKATAI GOWDA)

Government Acts that are in operation in different areas and various rules prevailing here—are they able to codify them ?

Sri N. RACHIAH.—If the Hon'ble Member were to yield, I may bring to his notice that if there are not sufficient candidates for the higher cadre, to that extent even the lower cadre recuitment will have to be made among these classes. The Government have not reviewed the recommendations for 4-5 years. I have been examining them and I will see that every recommendation received from the Central Government and the Constitutional safeguards are implemented.

Sri G. VENKATAI GOWDA.—I see that Government are spending more on non-development works. Is this the way of bringing about economy ? When we are pleading that as far as possible non-development expenditure is to be cut down, they are giving room for inc easing the non-development expenditure. Even yesterday the U.P. Government took a decision that as far as possible, non-development expenditure is to be cut down because it does not yield any corresponding benefit. My friend Mr. Mallaradhya pointed out the inordinate delay caused in various matters. One instance I will give. In respect of land acquisition matters, thousands and thousands of applications have been pending for more than five years. There are a few cases where people have paid money. In spite of that, it has not been possible to implement things without delay. It has been pointed out that the procedure is somewhat cumbersome and complicated. Let them take two years ; but if they could not implement those things within two years, what should I say? I want to ask the Government why should they not simplify the procedure. When a party submits an application to acquire land, before notice is taken to the owner that person would have done something in the site; he might have dug a well with the result that it becomes impracticable for Government to proceed with the acquisition proceedings. That is the thing Government has not been able to do. They have to simplify the procedure governing land acquisition and also add another clause that if they feel necessary, as soon as notice is taken to the owner, there should also be a prohibitory notice to him prohibiting him from doing anything in the property till the matter is finally disposed of. Let him file an objection but Government should see that nothing is done so far as land acquisition matters are concerned when they are pending.

The Hon'ble Minister for Public Works vehemently defends Government when we say that there is a good lot of amount that remains unspent. Every year amounts are sanctioned for certain items and what is it that we see ? They are not spent. The other day I was telling that in 1957-58 two lakhs were allotted for Kollegal for Development Works. Not a pie has been spent.

Sri H. M. CHANNABASAPPA.—How is it relevant to General Administration?

Sri G. VENKATAI GOWDA.—It shows inefficiency.

Mr. SPEAKER.—I have already said it is relevant. If the Minister wants to meet the point he may meet it, not otherwise.

Sri H. M. CHANNABASAPPA.—We will meet it.

Sri G. VENKATAI GOWDA.–Not even a pie was spent in 1957-58 and the two lakhs was allowed to lapse. When we asked about it, it was replied that because it was an integrated area estimates could not be prepared. I wonder how is the preparation of estimate relevant or tenable ? My submission is that there might be difficulty in 1956-57 but after one long year if you say estimates are not prepared, that shows inefficiency in the officers concerned. Were not estimates prepared when Kollegal was part and parcel of Madras Government ?

Sri H. M. CHANNABASAPPA.—Do you mean to say that no amount was spent in 1957-58 ?

Sri G. VENKATAI GOWDA.—Not even a single pie was spent. You have given an answer.

Sri H. M. CHANNABASAPPA.—I shall give answer at the appropriate time.

Sri G. VENKATAI GOWDA.—Day before yesterday when the question was raised the Hon'ble Minister was pleased to say that during 1957-58 the amount was surrendered for want of sanction for the works. Like that even in 1958-59 the amount was allowed to lapse and no development works were attended to. That shows the inordinate delay or inefficiency in the administration or the lack of diligence or responsibility on the part of officers concerned. When the Hon'ble Minister Sri H. M. Channabasappa was on this side he vehemently criticised the way in which things were carried on. Now if we say that there is a lapse let him admit it wherever it is so.

Sir, I am given to understand that there is a proposal before the Government to disintegrate the Anti-Corruption Department, taking away some of the officers and making them work in Divisional Commissioner's Office to investigate cases relating to non-gazetted officers, and also to have a Central Agency at Bangalore under the supervision of Special Officer to investigate cases in respect of gazetted officers. I do not know who gave that proposal. In what way it is going to have the desired effect? My submission is that in spite of the Anti-Corruption Department existing for several years we are not able to root out corruption and to check the anti-social activities. Such being the case, if you disintegrate the very existence of the Anti-Corruption Department how can we expect better results to be achieved? By that the very object will be defeated. These Divisional Commissioners being the Heads of Revenue Department cannot do justice. Suppose an official of the Revenue Department is involved; there is a likelihood of their not punishing him. They have no judicial attitude. Therefore strengthen the hands of the officers of the Anti-Corruption Department. That would be the correct attitude. Make them as independent as possible; give them as much power as possible to exercise without fear or favour, thereby find some solution to root out corruption and nepotism.

There are several other matters to which I want to refer. My friends have been pleading for the abolition of Divisional Commissioners' posts because they are superficial. Things are being delayed because of the existence of Divisional Commissioners' Offices. As per the recommendations of Sri Gorwala it is better to re-organise the districts on the basis of area, work load and population and bring the number to 15 and there are so many Under Secretaries and Secretaries in the Secretariat and they can have direct contact with the Deputy Commissioners. Sir, there is a tendency growing in many of the offices that the rules prevailing in old Mysore State were good and that the rules prevailing in some parts of the new State are not good. Such a tendency is growing which will not do good so far as the administration is concerned. Therefore I request the Government to evolve common rules as far as possible. Take the best from any part of the country, whether it is from Madras area or Bombay area and see that your officers go on respecting the orders issued.

My friends Sri Mallaradhya and Sri Narasimhan have pleaded vehemently and given suggestions as to how the tours of the Ministers should be regularised. I do not say that they should not tour; but they should tour in undeveloped and underdeveloped areas. There is no use in going to Mysore City a dozen times; there is no use in going to Tumkur a dozen times or to Mangalore in South Kanara. Let them tour in undeveloped areas of the State, study the conditions and then try to do somethin for these people because you have not been able to raise the *per capita* income of these people.

The Hon'ble Member Sri Suryanarayana Rao said that there is no use in following a file. In spite of following the files there is delay in getting things done and you can imagine the position if we do not follow the files; it will take years and years to have anything done.

Sri K. S. SURYANARAYANA RAO (Mysore City).—So you justify following a file?

Sri G. VENKATAI GOWDA.—I am not saying that. I am stating the position. In the interest of the State you see that non-development expenditure is cut down and the *per capita* income is raised. But you are now allowing the rich to become richer and the poor to grow poorer. That is the result of this administration. Therefore it does not justify our support.

Thank you.

*ಶ್ರೀ ಎ. ಎಸ್. ಪಾಟೀಲ್ (ನರಗುಂದ).—ಸ್ವಾಮಿ ಅಧ್ಯಕ್ಷರೇ, ಈಗ ನಮ್ಮ ಸಭೆಯ ಮುಂದಿರತಕ್ಕ ಸಾಮಾನ್ಯ ಆಡಳಿತದ ಖರ್ಚು ವೆಚ್ಚಗಳ ಬಗ್ಗೆ ನಾನೀಗ ಕೆಲವು ವಿಚಾರಗಳನ್ನು ಸಭೆಯ ಮುಂದಿಡಲು ಬಯಸುತ್ತೇನೆ. ಈಗ ಮುಖ್ಯವಾಗಿ ಈ ನೌಕರವರ್ಗವೆಲ್ಲ ಅಂತರ ರಾಜ್ಯಗಳ ಸೀನಿಯಾರಿಟಿ ಲಿಸ್ಟ್ ಯಾವಾಗ ತಯಾರಾಗುತ್ತದೆಯೋ ಎಂದು ಅದನ್ನೇ ಎದುರು ನೋಡುತ್ತಾ ಕುಳಿತಿದೆ. ಆ ಸೀನಿಯಾರಿಟಿ ಲಿಸ್ಟೇನು ತಯಾರಾಗುತ್ತದೆಯೋ ಅಥವಾ ಇಲ್ಲವೇ ಇಲ್ಲವೋ ಎನ್ನತಕ್ಕ ಒಂದು ದೊಡ್ಡ ಸಂಶಯವೀಗ ಅವರಿಗೆ ಹತ್ತಲಿಕ್ಕೆ ಪ್ರಾರಂಭವಾಗಿದೆ. ಆದರೆ ಆ ಲಿಸ್ಟ್ ತಯಾರಾಗಲು ಇಷ್ಟೊಂದು ತಡವಾದುದಕ್ಕೆ ಅನೇಕ ಕಾರಣಗಳಿವೆ. ಮೊದಲನೆಯದಾಗಿ ಐದು ಬೇರೆಬೇರೆ ಭಾಗಗಳ ನೌಕರರನ್ನು ಒಂದು ಸಮೀಕರಣ ಮಾಡುವುದು ಬಹಳ ಕಷ್ಟದ ಮಾತಾಗಿದೆ. ಇದನ್ನು ಸುಗಮವಾಗಿ ನಡೆಸಲು ಐದು ಜನರ ಒಂದು ಸಮಿತಿಯನ್ನು ಮಾಡಿದ್ದಾರೆ. ಆದರೆ ಈ ಸಮಿತಿಯಲ್ಲಿ ಕೆಲಸ ಮಾಡತಕ್ಕ ಸದಸ್ಯರು ತಮ್ಮ ಒಂದು ಭಾಗದ ನೌಕರ ಮಂದಿಗೆ ಹೆಚ್ಚಿನ ಹಿತ ಮಾಡಬೇಕು, ಅವರಿಗೆ ಹೆಚ್ಚಿನ ಸೌಲಭ್ಯಗಳನ್ನೊದಗಿಸಬೇಕು ಎನ್ನತಕ್ಕ ಅಭಿಪ್ರಾಯಗಳಿಗೆ ಎಡೆಕೊಡದೆ ಅವರು ಯೋಗ್ಯ ವಿಚಾರಗಳನ್ನು ಮಾತ್ರ ತಮ್ಮ ಮುಂದಿಟ್ಟುಕೊಂಡು ಅವರು ವಿಮರ್ಶೆ ಮಾಡುವುದಾದರೆ ಈ ವಿಚಾರದಲ್ಲಿ ತೀವ್ರ ಒಂದು ತೀರ್ಮಾನಕ್ಕೆ ಬರಲು ಸಾಧ್ಯವಾಗುತ್ತದೆಯೆಂಬುದಾಗಿ ನನಗೆ ಅನಿಸುತ್ತಿದೆ.

1-30 P.M.

ಎರಡನೆಯದಾಗಿ ಆಡಳಿತದ ದಕ್ಷತೆಯ ಬಗ್ಗೆ ನನ್ನ ಅನೇಕ ಮಿತ್ರರು ಅನೇಕ ವಿಚಾರಗಳನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ದಕ್ಷತೆ ಬರಬೇಕಾದರೆ ಮೊದಲು ಒಂದು ತರಹ, ರಿಕ್ರೂಟ್‌ಮೆಂಟ್ ಕಡೆ ಹೆಚ್ಚು ಲಕ್ಷ್ಯ ಅವಶ್ಯಕ. ಸೆಕ್ರೆಟರಿ, ಅಸಿಸ್ಟೆಂಟ್ ಸೆಕ್ರೆಟರಿ, ಫಸ್ಟ್ ಡಿವಿಷನ್ ಗುಮಾಸ್ತೆ, ಎರಡನೆ ದರ್ಜೆಗುಮಾಸ್ತೆ, ಹೀಗೆ ಎಲ್ಲರನ್ನೂ ನೇಮಕ ಮಾಡುವಾಗಲೂ ಅವರು ಎಂಥವರಿರುತ್ತಾರೆ, ಯಾವಯಾವ ಪರೀಕ್ಷೆಗಳಲ್ಲಿ ಪಾಸ್ ಮಾಡಿದ್ದಾರೆ, ಅವರ ಕ್ವಾಲಿಫಿಕೇಷನ್ ಏನು ಇವುಗಳ ಕಡೆಗೆ ಲಕ್ಷ್ಯ ಕೊಡಬೇಕು. ಒಬ್ಬ ಪದವೀಧರನನ್ನು ಕೆಲಸಕ್ಕೆ ನೇಮಕ ಮಾಡಿಕೊಂಡರೂ ಸಹ ಟ್ರೈನಿಂಗ್ ಇಲ್ಲದೆ ಕೆಲಸ ಮಾಡುವುದಕ್ಕೆ ಜಾಣ್ಮೆ ಇರುವುದಿಲ್ಲ. ಆ ರೀತಿ ಅನುಭವವಿದ್ದಂಥಾ ಜನರನ್ನು ತೆಗೆದುಕೊಳ್ಳುವ ವ್ಯವಸ್ಥೆ ಮಾಡಬೇಕು.

ಮುಂಬೈ, ಹೈದರಾಬಾದ್, ಕೊಡಗು, ಮದ್ರಾಸ್ ಮತ್ತು ಹಳೆಯ ಮೈಸೂರು, ಈ ಎಲ್ಲ ಕಡೆಗಳಿಂದ ಬಂದಂಥ ಗುಮಾಸ್ತರು, ಅಸಿಸ್ಟೆಂಟ್ ಸೆಕ್ರೆಟರಿ ಮೊದಲಾದವರಿಗೆ ನಾನಾ ತರಹ, ಹೆಚ್ಚು ಕಡಮೆಯಾದ ಭಿನ್ನಭಿನ್ನವಾದ ಸ್ಕೇಲುಗಳಿವೆ. ಅವನ್ನೆಲ್ಲ ಒಂದೇರೀತಿಯಲ್ಲಿ ಸಮೀಕರಣ ಮಾಡುವುದು ಬಹಳ ಕಠಿಣವಿದೆ. ಅದು ಎಲ್ಲರಿಗೂ ಗೊತ್ತಿರುವ ವಿಚಾರ. ಆ ಸ್ಕೇಲುಗಳನ್ನು ಮಾಡುವ ಕಾಲಕ್ಕೆ ಹೈದರಾಬಾದಿನ ಸೂಪರ್‌ವೈಜರಿ ಕ್ಲಾರ್ಕ್‌ಗಳನ್ನು (ಫಸ್ಟ್ ಡಿವಿಷನ್ ಕ್ಲಾರ್ಕ್ ದರ್ಜೆಯವರನ್ನು) ಮುಂಬೈನಿಂದ ಬಂದಂಥ 320, 440, 600 ಈ ಸ್ಕೇಲಿನಲ್ಲಿದ್ದಂಥ ಸೂಪರಿಂಟೆಂಡೆಂಟರೊಡನೆ ಒಂದೇ ಸಮ ಎಂದು ಪರಿಗಣಿಸಲಾಗಿದೆ. ಇದು ಪೂರ್ಣ ತಪ್ಪು ಇದೆ. ಸೂಪರ್‌ವೈಜರಿ ಕ್ಲಾರ್ಕ್ಸ್ ಎಂದು ಹೈದರಾಬಾದಿನಿಂದ ಬಂದವರನ್ನು, first division clerkನಷ್ಟು ದರ್ಜೆಯವರನ್ನು, ಮುಂಬೈನಿಂದ ಬಂದಂಥಾ ಸೂಪರಿಂಟೆಂಡೆಂಟರ ದರ್ಜೆಗೆ ಅನುಸರಿಸಿ ಅವರನ್ನು ಸಮನ್ವಯ ಮಾಡಿರುವುದು ಬಹಳ ತಪ್ಪು. ಇದರಿಂದ ಮುಂಬೈ ಭಾಗದಿಂದ ಬಂದಂಥ ಸೂಪರಿಂಟೆಂಡೆಂಟರಿಗೆ ಬಹಳ ಅಸಂತೋಷವಾಗಿದೆ. ಮುಂಬೈ ಭಾಗದಿಂದ ಬಂದಂಥ Superintendent Under Secretaries ಅವರುಗಳಿಗೂ ಸರಿಯಾದ ಸ್ಥಾನವು ಸಿಕ್ಕುವಂತೆ ಮಾಡಬೇಕು. ಇದೇರೀತಿಯಲ್ಲಿ ಉಳಿದ ಪ್ರಾಂತಗಳಿಂದ ಬಂದಂಥವರಿಗೂ ಸಾಕಷ್ಟು ವ್ಯವಸ್ಥೆ ಮಾಡಬೇಕೆಂದು ಸೂಚನೆ ಮಾಡುತ್ತೇನೆ.

ಇಲ್ಲಿ Under Secretaries ಎಂದು ಪನಿದ್ದಾರೆ, ಆ ಸ್ಥಾನಗಳಿಗೆ ಪ್ರಮೋಷನ್ ಕೊಡುವಾಗ ಮುಂಬೈ ಪ್ರಾಂತದೊಳಗೆ ಮತ್ತು ಮದ್ರಾಸ್ ಪ್ರಾಂತದೊಳಗೆ ಸೆಕ್ರೆಟೇರಿಯಟ್ ಸಿಬ್ಬಂದಿಗೆ ಪ್ರಮೋಷನ್ ಕೊಡುತ್ತಾರೆ. ಆದರೆ ಇಲ್ಲಿ ಶೇಕಡ ಐವತ್ತು ಭಾಗ ಜಾಗಗಳಿಗೆ ಹೊರಗಡೆಯಿಂದ ಎಂದರೆ ರೆವಿನ್ಯೂ ಇಲಾಖೆಯಿಂದ ಜನರನ್ನು ತೆಗೆದುಕೊಂಡು ಬಂದು ನೇಮಿಸುವ ಪದ್ಧತಿ ಇದೆ. ನೂರಕ್ಕೆ ಐವತ್ತರಷ್ಟು ಭಾಗ ಹೊರಗಡೆಯಿಂದ ಬಂದರೆ, ಸೆಕ್ರೆಟೇರಿಯಟ್ಟಿನಲ್ಲಿ ಕೆಲಸ ಮಾಡುವವರಿಗೆ ನಿರಾಶೆ ಭಾವನೆ ಮೂಡುತ್ತದೆ. ದಕ್ಷತೆಯಿಂದ ದುಡಿದು ಕೆಲಸ ಮಾಡಿದವರಿಗೆ ಯಾವ ಪ್ರತಿಫಲವೂ ಇಲ್ಲದೆ, ಹೊರಗಿನಿಂದ ಬಂದ ಅಸಿಸ್ಟೆಂಟ್ ಕಮಿಷನರ್ ದರ್ಜೆಯವರು ಅಂಡರ್ ಸೆಕ್ರೆಟರಿಗಳಾಗುವುದಕ್ಕೆ ಅವಕಾಶವಾಗಿರುವುದರಿಂದ, ಅನುಭವವಿದ್ದ ಜನರಿಗೆ chance ಸಿಕ್ಕದೆ, ಅಲ್ಲಿಯೇ ಕೊಳೆಯತಕ್ಕ ಪ್ರಸಂಗ ಬರುತ್ತದೆ. ಹೊರಗಡೆಯಿಂದ ತರಬೇಕಾದರೆ ಹೆಚ್ಚಿಗೆ ಜನರನ್ನು ತರಬಾರದು. ಮುಂಬೈ ಮತ್ತು ಮದ್ರಾಸ್ ರಾಜ್ಯಗಳಲ್ಲಿ ಸೆಕ್ರೆಟೇರಿಯಟ್ಟಿನಲ್ಲಿದ್ದವರಿಗೆ ಪ್ರಮೋಷನ್ ಸಿಕ್ಕುತ್ತದೆ. ಹೊರಗಿನಿಂದ ತೆಗೆದುಕೊಳ್ಳುವುದು ಬಹಳ ವಿರಳವಿದೆ. ಹೊರಗಿನಿಂದ ತೆಗೆದುಕೊಳ್ಳುವವರ ಪರಿಮಿತಿಯನ್ನು ಕಡಮೆ ಮಾಡಬೇಕು. ಕೆಲವು ಸ್ಥಾನಗಳಿಗೆ ನೇಮಕ ಮಾಡುವಾಗ young blood ಬರಬೇಕು, ಹೊರಗಿನಿಂದ ತರುಣರು ಬರಬೇಕು, ಇದಕ್ಕೆ ಅವಕಾಶವಿರುವಂತೆ direct recruitmentಗೆ ಕೆಲವು ಪರಿಮಿತಿಯಲ್ಲಿ ಸ್ಥಾನಗಳನ್ನು ಇಡಬೇಕು. ಇದೇ ಅಭಿಪ್ರಾಯವನ್ನು ಶ್ರೀ ಎ. ಡಿ. ಗೊರವಾಲಾ

*Asterisk indicates that the remarks or speeches have not been revised by the Member concerned.

ಅವರೂ ಹೇಳಿದ್ದಾರೆ. ಆ ಪ್ರಕಾರ ಸೆಕ್ರೆಟರಿ, ಅಸಿಸ್ಟೆಂಟ್ ಸೆಕ್ರೆಟರಿ, ಇಂಥ ಜಾಗಗಳಿಗೆ ಹೊರಗಿನಿಂದ recruit ಮಾಡಬೇಕು ಎನ್ನುವಂಥ ಸೂಚನೆಯನ್ನು ಸಹಿತ ಈ ಸಭೆಯ ಮುಂದೆ ಇಡುತ್ತಿದ್ದೇನೆ.

ಮುಂಬೈ, ಮದ್ರಾಸ್ ಮತ್ತು ಇತರ ಭಾಗಗಳಿಂದ ಬಂದಂಥ ಸೂಪರಿಂಟೆಂಡೆಂಟರಿಗೆ ಸರಿಯಾದ ಪ್ರಮೋಷನ್ ಸಿಕ್ಕದೆ ಹೋಗಿರುವುದರಿಂದ ಮತ್ತು ಅವರ ಕೂಡ ಇದ್ದವರಿಗೆ ಮುಂಬೈರಾಜ್ಯದೊಳಗೆ ಸೀನಿಯರ್ ಸೂಪರಿಂಟೆಂಡೆಂಟ್ ಇದ್ದವರು ಈಗ ಅಸಿಸ್ಟೆಂಟ್ ಸೆಕ್ರೆಟರಿ, ಅಂಡರ್ ಸೆಕ್ರೆಟರಿಯಾಗಿ ಕೆಲಸ ಮಾಡಲಿಕ್ಕೆ ಹತ್ತಿದ್ದಾರೆ. ಅವರು ಈಗ ಒಂದು ವರ್ಷದಿಂದ ಅಸಿಸ್ಟೆಂಟ್ ಸೆಕ್ರೆಟರಿಯಾಗಿ ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಕಾರಣ ಕೆಳದರ್ಜೆಯವರ ಕೂಡ ಮುಂಬೈನಿಂದ ಬಂದಂಥವರನ್ನು ಸಮನ್ವಯ ಮಾಡಿರುವುದೇ ಆಗಿದೆ.

ಕಾಗದ ಪತ್ರಗಳ ವ್ಯವಹಾರದಲ್ಲಿ ದಕ್ಷತೆ ಇಲ್ಲ. ಎಷ್ಟೋ ಕಾಗದ ಪತ್ರಗಳು ಎರಡು ಮೂರು ವರ್ಷಗಳಿಂದ ಇತ್ಯರ್ಥವಾಗದೆ ಉಳಿದಿವೆ. ಕಾಗದ ಪತ್ರಗಳ ವಿಲೇವಾರಿಯಲ್ಲಿ ಬಹಳ ತಡವಾಗುತ್ತಿದೆ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ನಮ್ಮ ಕಾಂಗ್ರೆಸ್ ಆಡಳಿತ ಆ ಪ್ರಕಾರವಿದೆ ಎನ್ನುವಂಥ ಟೀಕೆ ಇದೆ. ಅದರಂತೆಯೇ ವಿರೋಧಪಕ್ಷದವರಲ್ಲಿಯೂ ಇದೆ. ಕೆಲವು ಕಚೇರಿಗಳಲ್ಲಿ ಕೆಲಸ ಕಾರ್ಯಗಳು ಎಲ್ಲಿ ಹೆಚ್ಚಾಗಿಲ್ಲವೋ ಅಲ್ಲಿ ಹೆಚ್ಚಿನ ಸಿಬ್ಬಂದಿ ಇದೆ. ಅವರುಗಳು ಕೆಲಸವಿಲ್ಲದೆ ನೊಣಹೊಡೆಯುತ್ತ ಕಾಲಕಳೆಯುತ್ತಾರೆ ಹೆಚ್ಚಿಗೆ ಕೆಲಸವಿರುವ ಕಡೆ ಇಬ್ಬರು ಮಾತ್ರ ಕೆಲಸ ಮಾಡುತ್ತಿರುತ್ತಾರೆ. ಇದನ್ನು re-organise ಮಾಡುವುದಕ್ಕೆ, ಎಲ್ಲಿ ಹೆಚ್ಚಿಗೆ ಕೆಲಸವಿದೆಯೋ ಅಲ್ಲಿ ಹೆಚ್ಚು ಜನರಿರಬೇಕು, ಎಲ್ಲಿ ಕಡಮೆ ಕೆಲಸವಿದೆಯೋ ಅಲ್ಲಿ ಕಡಮೆ ಜನರಿರಬೇಕು ಎಂಬ ರೀತಿಯಲ್ಲಿ ಮಾಡಿ ಸಿಬ್ಬಂದಿಯನ್ನು ನೇಮಿಸುವುದು ಸೂಕ್ತವೆಂದು ನನಗನ್ನಿಸುತ್ತದೆ.

ಮುಂಬೈನಲ್ಲಿ Inspections Secretariat ಎಂದು ಇತ್ತು. ಈ ಸೆಕ್ರೆಟರಿ ಪ್ರತಿಯೊಂದು ರೆವೆನ್ಯೂ ಕಚೇರಿಗೂ ಹೋಗಿ ಏನೇನು ಕೆಲಸ ಕಾರ್ಯಗಳಾಗಿವೆ, ಯಾವ ಯಾವ ಕಾಗದಪತ್ರಗಳು ವಿಳಂಬವಾಗಿವೆ ಎಂಬುದನ್ನು ತನಿಖೆಮಾಡಿ ಇಲಾಖೆಯಲ್ಲಿ ಹೆಚ್ಚು ದಕ್ಷತೆ ಬರಲಿಕ್ಕೆ ಪ್ರಯತ್ನ ಮಾಡುವಂಥಾದ್ದು ಅಲ್ಲಿತ್ತು. ಈ ರಾಜ್ಯದಲ್ಲಿ ಆ ರೀತಿ ಇದ್ದಂತೆ ಕಾಣುವುದಿಲ್ಲ. Inspections Secretariat ಒಂದು ಇದ್ದು ಜಿಲ್ಲಾ ಕಚೇರಿಗೆ ಡಿವಿಷನ್ ಕಚೇರಿಗೆ ಹೋಗಿ ಯಾವ ಕಾಗದ ಪತ್ರಗಳು ಬಹಳ ದಿವಸ ತಡವಾಗಿ ಬಿದ್ದಿವೆ, ಏನು ಕಾರಣದಿಂದ ಹಾಗೆ ಬಿದ್ದಿವೆ ಎನ್ನುವುದನ್ನೆಲ್ಲ ಪರಿಶೀಲಿಸಿದೆಯೇ ಎಂಬುದು ನಮ್ಮ ಗಮನಕ್ಕೆ ಬಂದಿಲ್ಲ. ಇದರ ಬಗ್ಗೆ ಸರ್ಕಾರದವರು ಪರಿಶೀಲನೆ ಮಾಡಿ Inspections Secretariat ಒಂದನ್ನು ಪ್ರಾರಂಭಮಾಡಿ, ಅದಕ್ಕೆ ಬೇಕಾದ ಸಿಬ್ಬಂದಿಯನ್ನು ಕೊಡಲಿ. ಆಗ ಇವರು ಜಿಲ್ಲೆಗಳಿಗೆ ಹೋಗಿ ಜಿಲ್ಲಾ ಮಟ್ಟದಲ್ಲಿ ಕಾಗದ ಪತ್ರಗಳ ವಿಳಂಬ ಹೆಚ್ಚಾಗಿದೆಯೇ ಎಂಬುದನ್ನೂ ಜಿಲ್ಲೆಯವರು ತಾಲ್ಲೂಕಿಗೆ ಹೋಗಿ ಅಲ್ಲಿ ಏನಾದರೂ ವಿಳಂಬವಾಗಿದೆಯೇ ಎನ್ನುವುದನ್ನೂ ತನಿಖೆ ಮಾಡಲು ಸಹಾಯವಾಗುತ್ತದೆ. ಎಲ್ಲೆಲ್ಲಿ ಕಾಗದಪತ್ರಗಳು ತಡವಾಗುತ್ತಿವೆ, ಎಲ್ಲೆಲ್ಲಿ ಕಾಗದ ಪತ್ರಗಳು ಕೊಳೆ ಬೀಳುತ್ತವೆ, inefficiency ಇದೆ, ಆಡಳಿತದಲ್ಲಿ ಲೋಪದೋಷಗಳಿವೆ, ಇವೆಲ್ಲ ನಿಲ್ಲಬೇಕಾದರೆ ಈ ಪ್ರಕಾರ inspection ಬಗ್ಗೆ ಒಂದು ಇಲಾಖೆ Secretariat levelನಲ್ಲಿ ಇರತಕ್ಕದ್ದು, ಅದರಂತೆಯೇ District levelನಲ್ಲಿ ಇರತಕ್ಕದ್ದು ಒಳ್ಳೆಯದು ಮತ್ತು ಇದರಿಂದ ಸಹಾಯವಾಗುತ್ತದೆಂದು ನನ್ನ ಆಶಯ.

ಸ್ಕೇಲ್ಸ್ ಬಗ್ಗೆ ಒಂದು ವಿಚಾರವನ್ನು ಈ ಸಭೆಯ ಮುಂದೆ ಇಡಬೇಕೆಂದು ನನ್ನ ಆಶಯ. ನಮ್ಮ ರಾಜ್ಯದೊಳಗೆ ಪಿ.ಡಬ್ಲ್ಯೂ.ಡಿ. ಖಾತೆ, ವ್ಯವಸಾಯ ಖಾತೆ, ಹೀಗೆ ಬೇರೆಬೇರೆ ಆಫೀಸುಗಳು ಪ್ರತಿಯೊಂದಕ್ಕೂ ಇರಬೇಕಾದರೆ ಒಟ್ಟು ರಾಜ್ಯದ ಸಾಮಾನ್ಯ ಆಡಳಿತದೊಳಗೆ ಸರಿಯಾದ ಸ್ಕೇಲುಗಳನ್ನು ನೌಕರರಿಗೆ ಕೊಟ್ಟಿಲ್ಲವೆಂದು ಕಾಣುತ್ತದೆ. ಈ ಸಂಬಂಧದಲ್ಲಿ ಕೇಂದ್ರ ಸರ್ಕಾರದವರು ಕೊಡುವಂತೆ ಸಂಬಳಸಾರಿಗೆಗಳನ್ನು ಕೊಡಲು ಸಾಧ್ಯವಾಗದೆ ಇದ್ದರೂ ಸಹಿತ ಇತರ ರಾಜ್ಯಗಳಲ್ಲಿರತಕ್ಕ ಸಾಮಾನ್ಯ ಸ್ಕೇಲುಗಳನ್ನಾದರೂ ನಾವು adopt ಮಾಡಬೇಕು. ನಮ್ಮ ರಾಜ್ಯದಲ್ಲಿ ಅನೇಕ ಜನ ಕೆಲಸ ಮಾಡುತ್ತಿಲ್ಲ. ಅವರೆಲ್ಲ ಮುಂಬೈ ಕಡೆ ಹೋಗುತ್ತಾರೆ. ಆದ್ದರಿಂದ ನಮ್ಮ ನೌಕರರಿಗೆ ಹೆಚ್ಚಿನ ಸ್ಕೇಲನ್ನು ಕೊಡುವ ವ್ಯವಸ್ಥೆಯನ್ನು ಮಾಡಿದ ಹೊರತು, ನಮ್ಮಲ್ಲಿ ಕೆಲಸ ಮಾಡಲು ಜನ ಸಿಕ್ಕಲಿಕ್ಕಿಲ್ಲ. ಮತ್ತು ಸರಿಯಾದ pay scales ಇಲ್ಲದ ಹೊರತು ಇಲ್ಲಿ ಕೆಲಸ ಮಾಡುವುದಕ್ಕೆ ಮನಸ್ಸು ಕೊಡಲಾರರು, ಜನಗಳೂ ಸಿಕ್ಕಲಾರರು ಎಂದು ಹೇಳುತ್ತೇನೆ.

ಸೆಕ್ರೆಟೇರಿಯಟ್ ಲೆವಲ್‌ನಲ್ಲಿ ಮುಂಬೈನಿಂದ ಬಂದಿರುವಂಥ ಅಂಡರ್ ಸೆಕ್ರೆಟರಿಗಳಿಗೆ ಮುಂದೆ 650-1,100, ಗ್ರೇಡ್ ಸಿಕ್ಕುವುದಕ್ಕೆ ಅವಕಾಶವಿತ್ತು. ಆದರೆ ಇಲ್ಲಿ ಅಂಥ ಅವಕಾಶವಿಲ್ಲ. Reorganisation Act ಪ್ರಕಾರ ಇವರ ಸಂಬಳ ಸಾರಿಗೆ, ಸ್ಕೇಲು ಇವುಗಳನ್ನು ಕಾಪಾಡಬೇಕು ; ಅವರಿಗೆ ರಕ್ಷಣೆ ಸಿಕ್ಕಬೇಕು. ಆ ಕಾಯಿದೆ ಪ್ರಕಾರ ಹೆಚ್ಚಿನ ಸ್ಕೇಲ್ ಅವರಿಗೆ ಸಿಕ್ಕತಕ್ಕದ್ದು ಉಚಿತ, ಅವರ ಹಕ್ಕು ಬಾಧ್ಯತೆಗಳು ನಷ್ಟವಾಗದಂತೆ ಅವರಿಗೆ ದೊರೆಯಬೇಕಾದ ಸ್ಥಾನಗಳು ದೊರೆಯಬೇಕೆಂದು ಈ ಸಭೆಯ ಎದುರಿಗೆ ಇಡುತ್ತಿದ್ದೇನೆ.

ತಾಲ್ಲೂಕು ಕಚೇರಿಗಳಿಗೆ ಹೊರಗಡೆಯಿಂದ ಹೋಗುವಂಥ ರೈತ ಜನರಿಗೆ, ಮತ್ತು ಇತರರಿಗೆ ಕೂಡಲಿಕ್ಕೆ ಏನೂ ವ್ಯವಸ್ಥೆ ಇಲ್ಲ. ಬಿಸಿಲಿನಲ್ಲಿ ಹೊರಗಡೆ ನಿಂತು ತಮ್ಮ ಊರುಗಳಿಗೆ ಹೋಗಬೇಕು. ಆದುದರಿಂದ ಪ್ರತಿಯೊಂದು ತಾಲ್ಲೂಕಿನೊಳಗೂ ಹೊರಗಡೆಯಿಂದ ಬಂದಂಥ ಜನರು ಕೂಡಲು shelters ನಿರ್ಮಾಣ ಮಾಡುವಂಥ ವ್ಯವಸ್ಥೆಯಾಗಬೇಕೆಂದು ನಾನು ಹೇಳುತ್ತೇನೆ.

ಇಷ್ಟನ್ನು ಹೇಳಿ, ಸಾಮಾನ್ಯ ಆಡಳಿತ ವಿಚಾರದಲ್ಲಿ ನಾನು ಹೇಳಿರುವ ವಿಷಯಗಳನ್ನು ಪರಿಶೀಲಿಸಿ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಚಾಮಯ್ಯ (ಪಾಂಡವಪುರ).—ಮಾನ್ಯ ಅಧ್ಯಕ್ಷರೇ, ಈ ಜನರಲ್ ಅಡ್ಮಿನಿಸ್ಟ್ರೇಷನ್ನಿನ ವಿಷಯವಾಗಿ ಕೆಲವು ವಿಷಯಗಳನ್ನು ಸರಕಾರದ ಗಮನಕ್ಕೆ ತರಲು ಇಚ್ಛೆಪಡುತ್ತೇನೆ.

ಸ್ವಾಮಿ, ಈ ಮಂತ್ರಿವರ್ಯರುಗಳ ಖರ್ಚು ಎನ್ನುವುದು ವರ್ಷೇ ವರ್ಷೇ ಹೆಚ್ಚಾಗುತ್ತಿದೆ. 1957-58ರಲ್ಲಿ 4,200 ಸಾವಿರ ರೂಪಾಯಿಗಳಿದ್ದದ್ದು ಈಗ ಸುಮಾರು ಐದು ಲಕ್ಷ ಚಿಲ್ಲರೆಯಷ್ಟಕ್ಕೆ ಏರುತ್ತಿದೆ. ಇನ್ನು Contingencyಯಿಂದ ಉಳಿಸಿದ್ದದ್ದು ಈಗ 90 ಸಾವಿರದಷ್ಟಕ್ಕೆ ಇಳಿದಿದೆ. ಈ ರೀತಿಯಾಗಿ ದೇಶಕ್ಕಾಗಿ ಒದಗಿಸಿರತಕ್ಕ ಹಣವನ್ನು ವೃಥಾ ಖರ್ಚು ಮಾಡುವುದರಿಂದ ದೇಶಾಭಿವೃದ್ಧಿಯಾಗುವುದಿಲ್ಲ.

(ಶ್ರೀ ಬಿ. ಚಾಮಯ್ಯ)

ಇದರ ಬಗ್ಗೆ ಹೆಚ್ಚಿಗೆ ಗಮನಕೊಟ್ಟು ಆದಷ್ಟು ಖರ್ಚನ್ನು ಕಡಮೆಮಾಡಬೇಕಾಗಿದೆ. ತಾವು ದೇಶಸೇವೆ ಮಾಡುವಾಗ ಸ್ವಲ್ಪ sacrifice ಅನ್ನಾದರೂ ಮಾಡಿ ಬೇರೆ ಡೆವೆಲಪ್‌ಮೆಂಟು ಕೆಲಸಗಳಿಗೆ ಒದಗಿಸಿಕೊಡಿ.

Sri C. J. MUCKANNAPPA (Gubbi).—Sir, I have brought to your notice several times that when the Demands are being discussed in this House, at least the Minister who moved the Demand should be present. The Chief Minister, who is in charge of the General Administration, is absent. This is the fourth or fifth time this sort of thing is happening. The Chair was also pleased to say that the Minister concerned ought to be present.

Sri H. M. CHANNABASAPPA.—Immediately after finishing his work in the Legislative Council, the Chief Minister would come here after taking his food.

Sri T. SUBRAMANYA (Minister for Law, Labour and Local Self-Government).—I placed the demands to the House and I am here

Sri G. E. HOOVER (Chickpet).—The Chief Minister holds so many portfolios and he is absent from the House.

Mr. SPEAKER.—I have gone through the whole question and I do not agree with the Hon'ble Members when they say that the Chief Minister is always absent or is absent on many occasions. He has been with us very often. I know his difficulties. I do not know if the Upper House has risen and it is not fair that we should not allow him a morsel of food. I am really pained to find such questions are often raised. Unless there is a valid reason, I request Hon'ble Members not to raise such issues.

ಶ್ರೀ ಬಿ. ಚಾಮಯ್ಯ.—ಮಂತ್ರಿಗಳ ಟೂರಿನ ವಿಷಯದಲ್ಲಿ ಸ್ವಲ್ಪ ಹೇಳಬೇಕಾಗಿದೆ. ಟೂರನ್ನು ಮಂತ್ರಿಗಳು ಮಾಡಬಾರದು ಎಂದು ಹೇಳುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಮಂತ್ರಿಗಳು ಟೂರನ್ನು ಮಾಡಲೇಬೇಕಾದ ಅಗತ್ಯವಿದೆ. ಉದಾಹರಣೆಯಾಗಿ ನಮ್ಮ ಮರಾಮತ್ತು ಶಾಖೆಯ ಮಂತ್ರಿಗಳು ಟೂರನ್ನು ಮಾಡದೇಹೋದರೆ ಅವರಿಗೆ ಸ್ಥಳದ ವಿದ್ಯಮಾನ ಗೊತ್ತಾಗುವುದಿಲ್ಲ. ಯಾವ ಯಾವ ಕಡೆ ಕೆರೆ ಕಟ್ಟಿಕೊಡಬೇಕು ಎನ್ನುವುದರ ಮಾಹಿತಿ ಆಗುವುದಿಲ್ಲ. ಕೆಲವು ಮಂತ್ರಿಗಳು ಅಗತ್ಯವಾಗಿ ಟೂರು ಮಾಡಬೇಕಾಗುತ್ತದೆ. ಆದರೆ ಈ ರೀತಿ ಟೂರು ಮಾಡುವುದರ ಬದಲು ಇಲ್ಲಿಂದ ಸುಮ್ಮನೆ ಮೈಸೂರಿಗೆ, ಮೈಸೂರಿನಿಂದ ಮಂಡ್ಯಕ್ಕೆ ಹೀಗೆಟ ಊರುಮಾಡಿದರೆ ಏನು ಪ್ರಯೋಜನ ? ಇಂಟೀರಿಯರ್ ಪ್ಲೇಸುಗಳಿಗೆ ಟೂರು ಮಾಡಿ ಅಲ್ಲಿನ ಜನರ ಸ್ಥಿತಿಗತಿಗಳನ್ನು ಅರಿತುಕೊಂಡು ಅವರಿಗೇನು ಕಷ್ಟವಾಗಿದೆ, ಅವನ್ನು ಹೇಗೆ ನಿವಾರಣೆ ಮಾಡಬೇಕೆನ್ನುವ ಬಗ್ಗೆ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಬೇಕೇಹೊರತು, ಸುಮ್ಮನೆ ಅಲ್ಲಿ ಇಲ್ಲಿ ಹೋಗಿ ಹೂವಿನ ಹಾರಗಳನ್ನು ಹಾಕಿಸಿಕೊಂಡು ಟೀಯನ್ನು ಕುಡಿದುಕೊಂಡು ಬರುವುದು ನ್ಯಾಯವಲ್ಲ. ಆದಕಾರಣ ಇನ್ನು ಮುಂದೆ ಇಂಟೀರಿಯರ್ ಪ್ಲೇಸುಗಳಿಗೆ ಹೋಗಿ ಅಲ್ಲಿನ ಜನತೆಯ ಕಷ್ಟಗಳೇನಿವೆ ಎನ್ನುವುದನ್ನು ತಿಳಿದು ಅದಕ್ಕೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಮಂತ್ರಿವರ್ಯರಲ್ಲಿ ಹೇಳುತ್ತಿದ್ದೇನೆ.

ಇನ್ನು ನಮ್ಮ ಸೆಕ್ರೆಟೇರಿಯಟ್ಟಿನಲ್ಲಿ ಎಲ್ಲ ಜಾತಿಯವರೂ, ಸೆಕ್ರೆಟರಿಗಳಾಗಿ, ಡೆಪ್ಯುಟೀ ಸೆಕ್ರೆಟರಿಗಳಾಗಿರುವುದಕ್ಕೆ ತಾವೆಲ್ಲ ಸ್ವಲ್ಪ ಪ್ರಯತ್ನ ಮಾಡಬೇಕು. ಒಂದೇ ಕಮ್ಯೂನಿಟಿಯವರೇ ಹೆಚ್ಚಾಗಿ predominate ಆಗಿರುವವರೇ ಎಲ್ಲ ಇಲಾಖೆಗಳಲ್ಲೂ ತುಂಬಿದ್ದಾರೆ. ಎಲ್ಲ ಜಾತಿಗಳವರೂ ಇರಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಜಾತಿಗಳೆಷ್ಟಿವೆ ?

ಶ್ರೀ ಬಿ. ಚಾಮಯ್ಯ.—ಸರಕಾರದ ಆಡಳಿತದಲ್ಲಿ ನೀವು ಒಂದು ಜವಾಬ್ದಾರಿಸ್ಥಾನವನ್ನು ಗಳಿಸಿದ್ದೀರಿ. ನಿಮಗೇ ಅದು ಗೊತ್ತಿಲ್ಲವೇ ?

ಅಧ್ಯಕ್ಷರು.—ಸರಕಾರಕ್ಕೆ ಜಾತಿ ಗೊತ್ತಿಲ್ಲ. ಆದರೆ ಮಂತ್ರಿಗಳಿಗೆ ಗೊತ್ತಿದೆ. (ನಗು).

ಶ್ರೀ ಬಿ. ಚಾಮಯ್ಯ.—ನಿನ್ನೆ ದಿವಸ I.P.S. ಮತ್ತು I.A.S. ಕೇಡರುಗಳ ದರ್ಜೆಗಳ ಪ್ರಶ್ನೆಗಳ ಬಗ್ಗೆ ಜವಾಬು ಕೊಡುವಾಗ ಯಾವ ಯಾವ ಕೋಮುಗಳಲ್ಲಿ ಎಷ್ಟೆಷ್ಟು ಜನರಿದ್ದಾರೆ ಎಂದು ಹೇಳಿರುವುದನ್ನು ನೋಡಿದರೆ ಸರಕಾರದಲ್ಲಿ ಒಂದೇ ಜಾತಿಯವರ ಪ್ರಮಾಣವೇ predominate ಆಗಿರುವುದು ತಿಳಿದು ಬರುತ್ತದೆ. ಹೀಗಿರುವುದು ಸರಿಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದನ್ನು ಸರಿಪಡಿಸುವುದಕ್ಕೆ ಏನು ಮಾಡೋಣ ? ಮಾನ್ಯ ಸದಸ್ಯರು ಒಂದೇ ಕಮ್ಯೂನಿಟಿಯವರನ್ನೇ ರಾಜ್ಯಭಾರ ವಹಿಸಿಕೊಳ್ಳಬೇಕೆಂದು ಹೇಳುತ್ತೀರಾ ?

ಶ್ರೀ ಬಿ. ಚಾಮಯ್ಯ.—ನೀವು ನಿಮ್ಮ conclusionನನ್ನು ಯಾವರೀತಿ draw ಮಾಡಬೇಕೆಂದು ಯೋಚಿಸಿ ಇದನ್ನೆಲ್ಲ ಸರಿಪಡಿಸುವ ಪ್ರಯತ್ನ ಮಾಡಬೇಕೇ ವಿನಾ ನಿಮ್ಮ ಇಷ್ಟ ಬಂದಹಾಗೆ ಮಾಡಬಾರದು. ತಾವೂ ಮುಖ್ಯಮಂತ್ರಿಗಳೂ ಪರಿಶೀಲಿಸಿ ಪ್ರತಿಯೊಂದು ಜಾತಿಯವರಿಗೂ ಸರಿಯಾದ ಪ್ರಾತಿನಿಧ್ಯ ದೊರಕಿಸಬೇಕು. ಆಡಳಿತದ ಸ್ಥಾನದಲ್ಲಿರುವವರು ಈ ರೀತಿ ಜವಾಬು ಕೊಡುವುದು ಅಷ್ಟು ಸಮಂಜಸವಾಗಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ಎನ್ನುವ ಘೋಷಣೆಯನ್ನು ಮೊದಲಿನಿಂದ ಮಾಡುತ್ತಿದ್ದೀರಿ. ಆದರೆ ತಾವು ಯಾವ ದಾರಿಯಲ್ಲಿ ಹೋಗುತ್ತಿದ್ದೀರಿ? ನಮ್ಮ ರಾಜ್ಯದಲ್ಲಿ Chief Secretaryಗೆ ಮೂರುಸಾವಿರ ರೂಪಾಯಿಗಳಷ್ಟು ತಿಂಗಳಿಗೆ ಸಂಬಳ ಕೊಡುತ್ತಿದ್ದೀರಿ, ಮತ್ತು ಸೆಕ್ರೆಟರಿಗಳಿಗೆ ಎರಡು ಸಾವಿರದಷ್ಟು ಕೊಡುತ್ತಿದ್ದೀರಿ. ಇದರ ಜೊತೆಗೆ Special pay ಎಂದು ಬೇರೆ 250 ರೂಪಾಯಿಗಳನ್ನು ಒಬ್ಬೊಬ್ಬ ಸೆಕ್ರೆಟರಿಗೂ 75 ರೂಪಾಯಿಗಳನ್ನು, Under Secretaryಗಳಿಗೂ ತಾವು ಕೊಡುತ್ತಿದ್ದೀರಿ. ಆದರೆ ನಮ್ಮ N.G.O.ಗಳು ಸ್ವಲ್ಪ ಸಂಬಳ ಹೆಚ್ಚಿಸಿಕೊಡಿ ಎಂದು ಕೇಳಿದರೆ ನಮ್ಮಲ್ಲಿರುವ ಸಾಧನ ಸಂಪತ್ತುಗಳ ಅಭಿವೃದ್ಧಿಗೆ ಖರ್ಚು

ಮಾಡಬೇಕಾಗಿದೆ, ನಮ್ಮಲ್ಲಿ ದುಡ್ಡಿಲ್ಲ ಎನ್ನುತ್ತೀರಿ. ಅವರನ್ನು ತೃಪ್ತಿಪಡಿಸಲು ಯಾವ ಪ್ರಯತ್ನವನ್ನೂ ಮಾಡದೆ ಇರುವುದು ಸರಿಯಲ್ಲ. ತಾವು ಈ ರೀತಿ ಅವರಿಗೆಲ್ಲ Special pay ಕೊಡುವುದು ಸರಿಯಲ್ಲ. ಒಂದಕ್ಕೆ ಹತ್ತರಷ್ಟು ಪ್ರಮಾಣದಲ್ಲಿ ಸಂಬಳವನ್ನು ಜಾರಿಗೆ ತರುತ್ತೇವೆಂದು, ಹೋದ ಸಾರಿ ಮಾನ್ಯ ಮಂತ್ರಿಗಳಾದ ಮರಿಯಪ್ಪನವರು ತಮ್ಮ ಭಾಷಣದಲ್ಲಿ ಹೇಳಿದ್ದರು. ಆ ದಾರಿಯಲ್ಲಿ ಹೋಗಿದ್ದೀರಾ? ಪ್ರಯತ್ನವನ್ನಾದರೂ ಮಾಡಿದ್ದೀರಾ ? ನೂರು ರೂಪಾಯಿಗಳಿಗಿಂತ ಕಡಮೆ ಸಂಬಳವಿರಕೂಡದು ಮತ್ತು ಒಂದು ಸಾವಿರಕ್ಕಿಂತ ಹೆಚ್ಚಿರಕೂಡದು ಎನ್ನುವ ವಿಚಾರದಲ್ಲಿ ಇವೊತ್ತಿನ ದಿನ ಏನು ಪ್ರಯತ್ನ ಮಾಡಿದ್ದೀರಿ? ಆ ರೀತಿ ಎಷ್ಟು ಪ್ರಯತ್ನ ನಡೆದಿದೆ ಎನ್ನುವುದನ್ನು ತಮ್ಮನ್ನು ಈಗ ಕೇಳುತ್ತಿದ್ದೇನೆ.

ಇನ್ನು Divisional Commissioners ಹೋಗಬೇಕೆಂದು ಅನೇಕ ಮಹನೀಯರು ಈಗಾಗಲೇ ಹೇಳಿದ್ದಾರೆ. ನಾನೂ ಸಹ ಹೋದಸಾರಿ ಈ Divisional Commissioners ಹೋಗಬೇಕೆಂದೂ ಮತ್ತು ಈ ಹುದ್ದೆಗಳು ಸುಮ್ಮನೆ ಅಲಂಕಾರಕ್ಕೋಸ್ಕರ ಇವೆಯೆಂದೂ ಹೇಳಿದ್ದೆ. ಇದರಿಂದೇನೂ ಉಪಯೋಗವಿಲ್ಲ. ನೀವು ಇದಕ್ಕೋಸ್ಕರ ಸುಮಾರು ಎಂಟು ಲಕ್ಷ ಚಿಲ್ಲರೆಯಷ್ಟು ಬಡ್ಜೆಟ್ಟಿನಲ್ಲಿರುವ ದುಡ್ಡಿನಲ್ಲಿ ಖರ್ಚು ಮಾಡುತ್ತಿದ್ದೀರಿ. ಇದು ನ್ಯಾಯವಲ್ಲ. ಇನ್ನು District Administrationನಲ್ಲಿ ಎಷ್ಟು ಚೆನ್ನಾಗಿ ಕೆಲಸ ನಡೆಯುತ್ತಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಹೋದಸಾರಿ ನಮ್ಮ ಮಾನ್ಯ ರೆವೆನ್ಯೂ ಮಂತ್ರಿಗಳು surprise visitನ್ನು ನಮ್ಮ ತಾಲ್ಲೂಕು ಆಫೀಸಿಗೆ ಕೊಟ್ಟಿದ್ದರು. ಆಗ ಅಲ್ಲಿ 1956ರಿಂದ ಇದ್ದ ಕಾಗದಪತ್ರಗಳೂ ಕೂಡ ಈಚೆಗೆ ಬಂದಿರಲಿಲ್ಲ. ಅದಕ್ಕೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಎಚ್ಚರಿಸಿದರು ನಮ್ಮ ಆಡಳಿತದ ವ್ಯವಸ್ಥೆಗಳಲ್ಲಿ ನಮಗೆ ಪ್ರೋತ್ಸಾಹವಿಲ್ಲ, ಸಹಾನುಭೂತಿಯಿಲ್ಲ ಎಂದು ಹೇಳುವಾಗ ನಿಮ್ಮ ಆಡಳಿತದಲ್ಲಿ ದಕ್ಷತೆ ಎಷ್ಟು ಮಟ್ಟಿಗಿದೆ ನಿಮ್ಮಲ್ಲಿನ ಆಡಳಿತ ಎಷ್ಟು ಬಿಗಿಯಿಂದ ನಡೆಯುತ್ತಿದೆ ಎನ್ನುವುದಕ್ಕಾಗಿ ಇಲ್ಲಿ ಹೇಳುತ್ತಿದ್ದೇನೆ.

Sri H. M. CHANNABASAPPA.—I am glad the Revenue Minister was efficient enough to inspect and set matters right.

ಶ್ರೀ ಬಿ. ಚಾಮಯ್ಯ.—ಮಾನ್ಯ ಅಧ್ಯಕ್ಷರೇ, ಈ ಸಾರಿ ಎಲ್ಲೋ ಅಕಸ್ಮಾತ್ತಾಗಿ ಹೋಗಿ ನೋಡಿದರೆ ಆಯಿತೇ? ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಲ್ಲಿ ಸರಿಯಾದ ಅಧಿಕಾರಿಗಳನ್ನು strong men, ಹಾಕಿದರೇನೇ ಎಲ್ಲಾ ಸರಿಯಾಗಿ ಕೆಲಸಗಳು ನಡೆದಾವು. ಡೆಪ್ಯುಟಿ ಕಮೀಷನರ ಇನ್ಸ್‌ಪೆಕ್ಷನ್ ಎಂದು ಹೇಳಿ ಯಾರೋ ಒಬ್ಬ ಕ್ಲಾರ್ಕ್ ಹೋಗಿ ಇನ್ಸ್‌ಪೆಕ್ಷನ್ ಮಾಡುತ್ತಾನೆ. ಆ ಕ್ಲಾರ್ಕನ್ನು ಮೊದಲೇ ಎಲ್ಲಾ ಸರಿ ಮಾಡಿಕೊಂಡಿರುತ್ತಾರೆ. ಅವನು ಬರೆದುಕೊಂಡು ಬಂದುದಕ್ಕೆ ಡೆಪ್ಯುಟಿ ಕಮಿಷನರು ರುಜು ಹಾಕುತ್ತಾರೆ. ಹೀಗಾದರೆ ಆಡಳಿತ ಸರಿಯಾಗಿ ನಡೆಯುತ್ತದೆಯೇ ?

Sri H. M. CHANNABASAPPA.—It is a good suggestion.

ಶ್ರೀ ಬಿ. ಚಾಮಯ್ಯ.—I.C.S. ಅಧಿಕಾರಿಗಳನ್ನು ನಮ್ಮ ದೇಶಕ್ಕೆ import ಮಾಡಿಕೊಳ್ಳಬೇಕೆಂದು ನಮ್ಮ ಪಾರ್ಟಿ ಲೀಡರು ಹೇಳಿದರು. ಅದು ಸರಿಯಲ್ಲ. ನಮ್ಮ ದೇಶದ ಆಡಳಿತ ಮತ್ತು ಸೆಕ್ರಿಟೇರಿಯಟ್ಟಿನ ಕೆಲಸ.........

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿಮ್ಮ ಪಾರ್ಟಿ ಲೀಡರ್ ಹೇಳಿದ್ದೂ ಸರಿಯಲ್ಲವೆಂದು ತಿಳಿದುಕೊಳ್ಳೋಣವೇ ?

ಶ್ರೀ ಬಿ. ಚಾಮಯ್ಯ.—I.C.S. ಅಧಿಕಾರಿಗಳಿಲ್ಲದೆ ನಮ್ಮ ದೇಶ ಎಷ್ಟೋ ಚೆನ್ನಾಗಿ ಆಡಳಿತ ನಡೆಸಿತು. ಪೂಜ್ಯ ಮಹಾತ್ಮಾ ಗಾಂಧಿಯವರು ಇಲ್ಲಿಗೆ ಬಂದು ಮೈಸೂರು ರಾಜ್ಯ ರಾಮರಾಜ್ಯ ಎಂದು ಹೊಗಳಿ ಹೋದರು ! ಆಗ್ಗೆ I.C.S. ಅಧಿಕಾರಿಗಳಿದ್ದರೆ? ಈಗೇಕೆ ? ಒಂದುಸಾರಿ ಸರ್ ರಾಮಸ್ವಾಮಿ ಮೊದಲಿಯಾರ್‌ರವರು ಭಾಷಣ ಮಾಡುತ್ತಾ ನಮ್ಮ ಮೈಸೂರು ಸೆಕ್ರಟೇರಿಯಟ್ಟು ಡೆಲ್ಲಿ ಸೆಕ್ರಟೇರಿಯಟ್ಟಿಗಿಂತ ಯಾವ ರೀತಿಯಲ್ಲೂ inferior ಆಗಿಲ್ಲವೆಂದು ಹೇಳಿದರು. ಇವತ್ತಿಗೂ ಅದು ಚೆನ್ನಾಗಿದೆ. ಆದರೆ ಮಾತ್ರ ಚೀಫ್ ಸೆಕ್ರಟೆರಿಯವರನ್ನು ಹೊರಡಿಸಬೇಕು. ಅವರಿಂದ ದೇಶದಲ್ಲಿ ಅನಾಹುತ ನಡೆಯುತ್ತಿದೆ. ಮಂತ್ರಿಗಳೆಲ್ಲಾ ಈ ಚೀಫ್ ಸೆಕ್ರಟೆರಿಯವರ ಕೈಗೊಂಬೆಗಳಾಗಿದ್ದಾರೆ. ಹೇಗೆ ತಿರುಗಿಸಿದರೆ ಹಾಗೆ ತಿರುಗುತ್ತಾರೆ. ನಮ್ಮ ಮಾನ್ಯ ಸ್ನೇಹಿತರಾದ ಶ್ರೀ ವೆಂಕಟೇಗೌಡರು, ಇವರು ಯಾವ ರೀತಿ ಒಂದು ಸರ್ಕ್ಯುಲರನ್ನು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಿಗೆ ಹೊರಡಿಸಿದ್ದಾರೆಂದು ಹೇಳಿದ್ದಾರೆ. ಆ ರೀತಿ ಎಲ್ಲವೂ ಆಗುತ್ತದೆ. ಇದಕ್ಕೆಲ್ಲಾ ಅವಕಾಶ ಕೊಡದಂತೆ ತಾವು ದಯವಿಟ್ಟು ಈ ಐ.ಸಿ.ಎಸ್. ಅಧಿಕಾರಿಗಳನ್ನು ಹೊರಗೆ ಕಳುಹಿಸುವುದಕ್ಕೆ ಪ್ರಯತ್ನ ಮಾಡಿ ನಮ್ಮ ದೇಶಕ್ಕೆ ಅನುಕೂಲ ಮಾಡಬೇಕೆಂದು ಹೇಳುತ್ತೇನೆ.

ಆಮೇಲೆ ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈಗ ಕೆಲವರು ಹೇಳಿದರು, ನಮ್ಮಲ್ಲಿನ ಡಿಸ್ಟ್ರಿಕ್ಟುಗಳನ್ನು ಕಡಮೆ ಮಾಡಬೇಕೆಂದು.

Sri H. M. CHANNABASAPPA.—You are afraid Mandya will be merged.

ಶ್ರೀ ಬಿ. ಚಾಮಯ್ಯ.—ಅದು ನ್ಯಾಯವಲ್ಲ. ಹಾಗೆ ಮಾಡಿದರೆ ಜನರಿಗೆ ನ್ಯಾಯ ಬೇಗ ಸಿಕ್ಕುವುದಿಲ್ಲ. 19 ಡಿಸ್ಟ್ರಿಕ್ಟ್‌ಗಳಿರುವುದನ್ನು 15 ಮಾಡುತ್ತೇವೆಂದು ಖರ್ಚು ಕಡಮೆ ಮಾಡುವ ಪ್ರಯತ್ನಕ್ಕೆ ಹೋಗಬೇಡಿ. ಖರ್ಚು ಕಡಮೆ ಮಾಡುವುದಕ್ಕೆ ಬೇರೆ ಎಷ್ಟು ಮಾರ್ಗಗಳಿವೆ. ಜನರಿಗೆ ತೊಂದರೆ ಮಾಡುವುದಕ್ಕೆ ಈ ರೀತಿ ಪ್ರಯತ್ನ ಮಾಡಬೇಡಿ.

ಇನ್ನು ಲೆಜಿಸ್ಲೇಚರ್ ವಿಷಯದಲ್ಲಿ, ನಮ್ಮ ಲೆಜಿಸ್ಲೇಟಿವ್ ಮೆಂಬರುಗಳ ಯೋಗಕ್ಷೇಮದ ವಿಷಯದಲ್ಲಿ ಸ್ವಲ್ಪ ಹೆಚ್ಚಿನ ಗಮನ ಕೊಡಬೇಕಾಗಿದೆ. ತಾವೀಗ ಕಟ್ಟುತ್ತಿರುವ ಲೆಜಿಸ್ಲೇಟಿವ್ ಹೋಮ್ ಜಾಗ್ರತೆಯಾಗಿ ತಯಾರಾಗಬೇಕು. ಅಲ್ಲಿ ಒಬ್ಬೊಬ್ಬ ಮೆಂಬರಿಗೂ ಒಂದೊಂದು ರೂಮ್ ಕೊಡುವಂತೆ ಕಟ್ಟಬೇಕು. ಈಗ ತಾವು ಎರಡು-ಮೂರು ಜನರನ್ನು ಒಂದೊಂದು ರೂಮಿಗೆ ಹಾಕುತ್ತಿದ್ದೀರಿ. ಒಬ್ಬೊಬ್ಬರೂ ತಮ್ಮ ತಮ್ಮ ಸ್ನೇಹಿತರುಗಳನ್ನು ಕರೆದುಕೊಂಡು ಬರುತ್ತಾರೆ. ನಿಂತುಕೊಳ್ಳುವುದಕ್ಕೂ ಜಾಗವಿರುವುದಿಲ್ಲ. ಶ್ರೀ ಚನ್ನಬಸಪ್ಪನವರ ಪೋರ್ಟ್‌ಫೋಲಿಯೋವಿಗೆ ಇದು ಸೇರಿದ್ದು. ಅವರು ಈ ವಿಷಯಗಳಿಗೆಲ್ಲಾ ಗಮನಕೊಟ್ಟು ಜಾಗ್ರತೆ ಮಾಡಿಸಬೇಕೆಂದು ಹೇಳುತ್ತೇನೆ.

Sri H. M. CHANNABASAPPA.—Single room and double beds.

ಅಧ್ಯಕ್ಷರು.—ಇದಕ್ಕೇ 16 ಲಕ್ಷ ರೂಪಾಯಿಗಳು ಖರ್ಚಾಗುತ್ತವೆ. ಯೋಚನೆಮಾಡಿ ಹೇಳಿ.

ಶ್ರೀ ಬಿ. ಚಾಮಯ್ಯ.—ಇನ್ನೊಂದು ವಿಷಯ. ನೀವುಗಳು ಈಗ ಮೆಂಬರುಗಳಿಗಾಗಿ ಫರ್ನೀಚರನ್ನು ದುಬಾರಿ ಬಾಡಿಗೆ ಕೊಟ್ಟು ಒದಗಿಸುತ್ತಿದ್ದೀರಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರಿಗೆ ಗೊತ್ತಿರಬಹುದು, ಈಗಾಗಲೇ ಈ ಬಗ್ಗೆ ಕಾರ್ಯಕ್ರಮ ತಗೆದುಕೊಂಡು ಹೊಸದಾಗಿ ಎಲ್ಲವನ್ನೂ ಮಾಡುತ್ತಿದ್ದೇವೆ. ಬಾಡಿಗೆಗೆ ತೆಗೆದುಕೊಳ್ಳುವ ಅಭಿಪ್ರಾಯವನ್ನು ಬಿಟ್ಟುಬಿಡಬೇಕೆಂಬುದೇ ನಮ್ಮ ಆಶೆ.

ಶ್ರೀ ಬಿ. ಚಾಮಯ್ಯ.—ಈಗ ಫ್ಯಾನ್‌ಗಳನ್ನು ಮೆಂಬರುಗಳಿಗೆ ಕೊಟ್ಟಿದ್ದೀರಿ. ಒಂದೊಂದಕ್ಕೂ ತಿಂಗಳಿಗೊಂದಕ್ಕೆ ಬಾಡಿಗೆ 20-30 ರೂಪಾಯಿ ಕೊಡುತ್ತಿದ್ದೀರಿ. ಒಂದು ಸೆಷನ್ನಿಗೆ, ಅಥವಾ ಎರಡು ಸೆಷನ್ನಿಗೆ ಈ ಬಗ್ಗೆ ಆಗುವ ಖರ್ಚನ್ನು ಕೊಟ್ಟರೆ ಒಂದು ಹೊಸ ಫ್ಯಾನನ್ನೇ ಕೊಂಡುಕೊಳ್ಳಬಹುದು. ಹಾಗೇಕೆ ಮಾಡಕೂಡದು ? ತಾವು ಜೇಬಿನಿಂದ ಹಣ ಕೊಡುವುದಾಗಿದ್ದರೆ ಇದನ್ನೆಲ್ಲಾ ಯೋಚನೆಮಾಡುತ್ತಿದ್ದೀರಿ.

Sri H. M. CHANNABASAPPA.—We are at it.

ಶ್ರೀ ಬಿ. ಚಾಮಯ್ಯ.—ದೇಶದ ದುಡ್ಡನ್ನು ಸರಿಯಾಗಿ ಖರ್ಚುಮಾಡಬೇಕೆಂದು ಹೇಳುತ್ತೇನೆ.

*ಶ್ರೀ ಎಸ್. ಆರ್. ರಾಮಯ್ಯ (ಹೊಸಕೋಟೆ).—ಮಾನ್ಯ ಅಧ್ಯಕ್ಷರೆ, ಸಾಮಾನ್ಯ ಆಡಳಿತ ಬಾಬಿನ ಬೇಡಿಕೆಯ ವಿಚಾರದಲ್ಲಿ ಮಾತನಾಡುತ್ತಾ, ಈಗ ಆಡಳಿತದ ದಕ್ಷತೆ ಎಷ್ಟರಮಟ್ಟಿಗಿದೆ, ಆಡಳಿತದಲ್ಲ ದಕ್ಷತೆಯಿದೆಯೇ ಇಲ್ಲವೇ ಎಂದು ನೋಡಬೇಕಾದರೆ ಸಾಮಾನ್ಯವಾಗಿ ಗ್ರಾಮಾಂತರಗಳಿಂದ ಬರುವ ಕಾಗದ ಪತ್ರಗಳಿಗೆ ಸರಿಯಾದ ಉತ್ತರಗಳು ತಲಪಿ ಅಲ್ಲಿ ಕೆಲಸಕಾರ್ಯಗಳು ನಡೆಯುತ್ತಿವೆಯೇ ಎಂಬುದನ್ನು ನೋಡಬೇಕು. ನಡೆಯುತ್ತಿದ್ದರೆ, ಚೆನ್ನಾಗಿ ನಡೆಯುತ್ತಿವೆಯೆಂದು ಹೇಳಬಹುದು. ಆದರೆ ಈಗ ನಮಗೆ ಕಾಣಿಸುವುದೇನೆಂದರೆ, ಸರ್ಕಾರಕ್ಕೆ ತಲೆ ಭಾರವಾದಂತೆ, ಅದರ ಶರೀರ ಸಣ್ಣಗಾಗುತ್ತಿದೆ. ಹೀಗಾಗಿ ಶರೀರ ತಲೆಯನ್ನು ಹೊತ್ತುಕೊಳ್ಳುವುದಕ್ಕೆ ಶಕ್ತಿಯಿಲ್ಲದಾಗಿ ಎಂದೋ ಒಂದು ದಿವಸ ಕುಸಿದು ಬೀಳುತ್ತದೆಂದು ಕಾಣುತ್ತದೆ. ಈಗ ಏನು ಮಾಡುತ್ತಿದ್ದಾರೆಂದರೆ, ಯಾವುದಾದರೂ ಒಂದು ಇಲಾಖೆ ಹೊಸದಾಗಿ ಏನಾದರೂ ಮಾಡಬೇಕು ಎಂದರೆ, ಮುಂಚೆ ದೊಡ್ಡ ದೊಡ್ಡ ಅಧಿಕಾರಿಗಳ, I.A.S. ಮುಂತಾದ ಹೆಚ್ಚು ಹೆಚ್ಚು ಸಂಬಳದ ಅಧಿಕಾರಿಗಳಿಂದ ಶುರುವಾಗುತ್ತದೆ. ಯಾವ ಯೋಜನೆಗಳನ್ನು ಹಾಕಲಿ, ಅವನ್ನು ಕಾರ್ಯರೂಪಕ್ಕೆ ತರಬೇಕೆನ್ನುವುದಕ್ಕೆ ಮುಂಚೆಯೇ ಆಡಳಿತದಲ್ಲಿರತಕ್ಕ ಅಧಿಕಾರಿಗಳು ಒಬ್ಬೊರಿಗೊಬ್ಬರಿಗೆ ಕಾಗದ ಪತ್ರಗಳನ್ನು ಓಡಾಡಿಸುವುದರಲ್ಲೇ ಪೂರೈಸಿ ವರ್ಷದ ಕಾಲ ಮುಗಿದು ಕೋಟ್ಯಾಂತರ ರೂಪಾಯಿಗಳು ಲ್ಯಾಪ್ಸ್ ಆಗುತ್ತವೆ. ಹೋದವರ್ಷ ಇಷ್ಟೊಂದು ಹಣ ಲ್ಯಾಪ್ಸ್ ಆಗುವುದಕ್ಕೆ. ಕಾರಣವೇನೆಂದರೆ ಆಡಳಿತವನ್ನು ಸರಿಯಾಗಿ ಒಬ್ಬರಿಗೊಬ್ಬರು ಅರ್ಥಮಾಡಿಕೊಂಡು ನಡೆಸದಿರುವುದೇ ಕಾರಣವೆಂದು ಗೊತ್ತಾಗುತ್ತದೆ.

2 P.M.

ಅನೇಕ ಯೋಜನೆಗಳು ಇಲ್ಲಿಂದ ಹೊರಟು ಮುಗಿಯುವುದರೊಳಗೆ ದುಡ್ಡು ಲ್ಯಾಪ್ಸ್ ಆಗಿ, ನಮ್ಮ ಬಡ್ಜೆಟ್ಟಿನಲ್ಲಿ ಬರುತ್ತದೆ. ಗೋರ್‌ವಾಲಅವರು ಕೂಲಂಕಷವಾಗಿ ಪರಿಶೀಲಿಸಿ ಹೇಳಿರುವುದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಜಾಗ್ರತೆ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನಮ್ಮ ಬೆಂಗಳೂರು ಜಿಲ್ಲೆಯ ವಿಚಾರ ಹೇಳಬೇಕಾದರೆ, ಈಗಿರತಕ್ಕಂಥ ಜಿಲ್ಲೆಗಳ ಪೈಕಿ, ಇದೇ ದೊಡ್ಡ ಜಿಲ್ಲೆ. ಇಲ್ಲಿ ಜನಸಂಖ್ಯೆ ಜಾಸ್ತಿಯಾಗಿದೆ. ಮೇಲಾಗಿ ಬೆಂಗಳೂರು ರಾಜ್ಯದ ಕ್ಯಾಪಿಟಲ್ ಆಗಿರುವುದರಿಂದ, ಇಲ್ಲಿ ಅನೇಕ ಸಮಸ್ಯೆಗಳಿವೆ.

ಅಧ್ಯಕ್ಷರು.—ವಿಸ್ತೀರ್ಣದಲ್ಲಿ ಬಿಜಾಪುರ ಜಿಲ್ಲೆ ದೊಡ್ಡದು.

ಶ್ರೀ ಎಸ್. ಆರ್. ರಾಮಯ್ಯ.—ವಿಸ್ತೀರ್ಣದಲ್ಲಿರಬಹುದು. ಆಡಳಿತ ದೃಷ್ಟಿಯಿಂದ ಬೆಂಗಳೂರು ಜಿಲ್ಲೆ ದೊಡ್ಡದೆಂದು ಹೇಳಬಹುದು. ಸಿಟಿಯನ್ನು ಸೇರಿಸಿಕೊಂಡರೆ ಇಲ್ಲಿಯ ಜನಸಂಖ್ಯೆ 21 ಲಕ್ಷಕ್ಕೆ ಮೇಲ್ಪಟ್ಟಾಗುತ್ತದೆ. ಈ ಒಂದು ಜಿಲ್ಲೆಯಲ್ಲಿ ಅನೇಕ ವಿಧವಾದ ಸಮಸ್ಯೆಗಳು ಇರುತ್ತವೆ. ಒಬ್ಬ ಜಿಲ್ಲಾಧಿಕಾರಿಗಳು ಆಡಳಿತ ನಡೆಸಬೇಕಾದರೆ ಕಷ್ಟ. ಹಿಂದೆ ಈ ಬೆಂಗಳೂರು ಜಿಲ್ಲೆಯನ್ನು ಎರಡು ಭಾಗವಾಗಿ ಮಾಡಿತ್ತು. ಈಗಲೂ ಕೂಡ ಎರಡು ಭಾಗವಾಗಿ ಮಾಡುವುದು ಒಳ್ಳೆಯದು. ಬೆಂಗಳೂರುನಗರ ಮತ್ತು ಅದರ ಸುತ್ತಮುತ್ತಲೂ ಇರುವ ಪ್ರದೇಶಕ್ಕೆ ಒಬ್ಬ ಜಿಲ್ಲಾಧಿಕಾರಿಗಳನ್ನೂ, ಗ್ರಾಮಾಂತರ ಪ್ರದೇಶಗಳಿಗೇ ಪ್ರತ್ಯೇಕವಾಗಿ ಒಬ್ಬ ಜಿಲ್ಲಾಧಿಕಾರಿಗಳನ್ನೂ ನೇಮಿಸುವುದು ಒಳ್ಳೆಯದು. ಹೀಗೆ ಮಾಡುವುದರಿಂದ ಬೆಂಗಳೂರು ಜಿಲ್ಲೆಯ ಗ್ರಾಮಾಂತರ ಪ್ರದೇಶದ ಪ್ರಜೆಗಳಿಗೆ ಸೌಕರ್ಯ ಒದಗಿಸಿದ ಹಾಗಾಗುತ್ತದೆ; ಪ್ರತ್ಯೇಕವಾಗಿ ಜಿಲ್ಲಾಧಿಕಾರಿಗಳಿದ್ದರೆ ಸಮಸ್ಯೆಗಳನ್ನು ಜಾಗ್ರತೆಯಾಗಿ ಬಿಡಿಸುವುದಕ್ಕೆ ಅನುಕೂಲವಾಗುತ್ತದೆ. ಬೆಂಗಳೂರು ಬಹಳ ಮುಖ್ಯವಾದ ನಗರವಾದ್ದರಿಂದ ಅತಿಥಿಗಳು ಇಲ್ಲಿಗೆ ಆಗಿಂದಾಗ್ಗೆ ಬರುತ್ತಿರುತ್ತಾರೆ. ಬೆಂಗಳೂರಿನ ಜಿಲ್ಲಾಧಿಕಾರಿಗಳಿಗೆ ಅವರನ್ನು ಬರಮಾಡಿಕೊಂಡು ಕಳುಹಿಸಿಕೊಡುವುದರಲ್ಲಿಯೇ ಅರ್ಧ ಕಾಲವಾಗುತ್ತದೆ. ಬೆಂಗಳೂರಿನಲ್ಲಿ ಅನೇಕ ಕೈಗಾರಿಕೆಗಳಿವೆ. ಜಿಲ್ಲಾಧಿಕಾರಿಗಳಿಗೆ ಇದಕ್ಕೆ ಸಂಬಂಧಪಟ್ಟ ಆಡಳಿತವಿರುವುದರಿಂದ, ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕಂಥ ಜನಗಳ ಅಹವಾಲುಗಳನ್ನು ಕೇಳುವುದಕ್ಕೂ ಸಿಗುವುದಿಲ್ಲ. ಜಾಗ್ರತೆಯಾಗಿ ನಾನು ಹೇಳಿರುವುದನ್ನು ಪರಿಶೀಲಿಸಿ, ಈಗಿರುವ ಬೆಂಗಳೂರು ಜಿಲ್ಲೆಯನ್ನು ಎರಡು ಜಿಲ್ಲೆಯಾಗಿ ಮಾಡಬೇಕೆಂದು ಸರ್ಕಾರದಲ್ಲಿ ಬಿನ್ನೈಸಿಕೊಳ್ಳುತ್ತೇನೆ.

ನನ್ನ ಮಾನ್ಯ ಮಿತ್ರರಾದ ಚಾಮಯ್ಯನವರು ಜಿಲ್ಲೆಗಳ ಸಂಖ್ಯೆಯನ್ನು ಕಡಿಮೆಮಾಡಕೂಡದೆಂದು ಹೇಳಿದರು. ಆದರೆ ಈಗಿರುವ 19 ಜಿಲ್ಲೆಗಳ ಸಂಖ್ಯೆಯನ್ನು ಹತ್ತಕ್ಕೆ ಇಳಿಸಿದರೆ ಸಾಕೆಂದು ನಾನು ಹೇಳುತ್ತೇನೆ. ಮಂಡ್ಯ ಜಿಲ್ಲೆ ಮತ್ತು ಬಿಜಾಪುರ ಜಿಲ್ಲೆ ವಿಸ್ತೀರ್ಣದಲ್ಲಿ ಜಾಸ್ತಿ ಇದ್ದರೂ ಕೂಡ, ಜನಸಂಖ್ಯೆಯಲ್ಲಿ ಕಡಮೆ ಇವೆ. ಜನಸಂಖ್ಯೆಗೆ ಅನುಸಾರವಾಗಿ ಜಿಲ್ಲೆಗಳ ಸಂಖ್ಯೆಯನ್ನು ನಿರ್ಧರಿಸಬಹುದು. ಈಗಿರುವ ಜಿಲ್ಲೆಗಳನ್ನು ಆದಷ್ಟು ಕಡಮೆಮಾಡಿ, ಇವುಗಳನ್ನು ವ್ಯವಸ್ಥಿತ ರೂಪದಲ್ಲಿಟ್ಟುಕೊಂಡರೆ, ಖಂಡಿತವಾಗಿಯೂ ಒಳ್ಳೆಯದಾಗುತ್ತದೆ. ಜಿಲ್ಲೆಗಳನ್ನು ಲೆಕ್ಕದಲ್ಲಿ ದೊಡ್ಡದಾಗಿ ಮಾಡುತ್ತಾ ಹೋದರೆ, ನಮ್ಮ ಆಡಳಿತದ ಖರ್ಚು ಜಾಸ್ತಿಯಾಗುತ್ತದೆ. ಬೆಂಗಳೂರು ನಗರದಲ್ಲಿ ಬೆಂಗಳೂರು ಜಿಲ್ಲಾಧಿಕಾರಿಗಳ ಸಮಸ್ಯೆಗಳು ಜಾಸ್ತಿಯಾಗಿವೆ. ಬೇರೆ ಕಡೆಗಳಲ್ಲಿ ಅಷ್ಟು ಸಮಸ್ಯೆಗಳಿಲ್ಲ. ಅದೂ ಅಲ್ಲದೆ ಇಷ್ಟು ದಿವಸಗಳವರೆಗೆ ಜಿಲ್ಲಾಧಿಕಾರಿಗಳಿಗೆ ನಾನಾ ರೂಪದಲ್ಲಿ ಕೆಲಸವಿರುತ್ತಿತ್ತು. ಅಗ್ರಿ

ಕಲ್‌ಚರಲ್, ಫಾರೆಸ್ಟ್ ಇಲಾಖೆಗಳಲ್ಲಿ ಕೂಡ ಅಧಿಕಾರಿಗಳಿಗೆ ಬೇಕಾದಷ್ಟು ಅವಕಾಶ ಕೊಟ್ಟು, ಅವರ ಪ್ರದೇಶಗಳನ್ನು ನಿಗದಿಮಾಡಿದ್ದಾರೆ, ಆ ಪ್ರದೇಶಗಳಲ್ಲಿ ಕೆಲಸ ಚೆನ್ನಾಗಿ ನಡೆಯುತ್ತಿದೆ. ಸುಮ್ಮನೆ ಸೆಕ್ರೆಟೇರಿಯಟ್ ಲೆವಲ್ಲಿನಲ್ಲಿ ವ್ಯವಸ್ಥೆಮಾಡಿಕೊಂಡರೆ, ಜಿಲ್ಲಾಧಿಕಾರಿಗಳ ಸಮಸ್ಯೆ ಬಗೆಹರಿಯುತ್ತದೆಯೇ? ಹಿಂದಕ್ಕೆ ರೆವಿನ್ಯೂ ಇಲಾಖೆ ಒಂದು ಮಾತ್ರ ಸ್ಥಾನದಲ್ಲಿತ್ತು. ಅದರಿಂದ ಎಲ್ಲ ಕೆಲಸವೂ ನಡೆಯಬೇಕಾಗಿತ್ತು. ಸೇಲ್ಸ್ ಟ್ಯಾಕ್ಸ್ ಆದಿಯಾಗಿ, ಯಾವ ಹಣದ ಕಲೆಕ್ಷನ್ನೇ ಆಗಲಿ, ಪ್ರತಿಯೊಂದನ್ನು ರೆವಿನ್ಯೂ ಇಲಾಖೆಗೆ ಒಪ್ಪಿಸುತ್ತಾ ಇದ್ದರು. ಉದಾಹರಣೆಗೆ ಹೇಳುವುದಾದರೆ ಈಗ ಕೋ-ಆಪರೇಟೀವ್ ಡಿಪಾರ್ಟ್‌ಮೆಂಟಿನವರು ಅವರೇ ಸ್ವತಃ ತಮ್ಮ ವಸೂಲು ಕಾರ್ಯಗಳನ್ನು ನಡೆಸುತ್ತಿದ್ದಾರೆ. ಇನ್‌ಕಂಟ್ಯಾಕ್ಸ್ ಡಿಪಾರ್ಟ್‌ಮೆಂಟಿನವರು ಅವರ ಕೆಲಸ ನಡೆಸಿಕೊಳ್ಳುತ್ತಾರೆ. ಹರಾಜು ಆಗಬೇಕಾಗಿದ್ದರೆ ಮಾತ್ರ ರೆವಿನ್ಯೂ ಡಿಪಾರ್ಟ್‌ಮೆಂಟಿನವರ ನೆರವು ತೆಗೆದುಕೊಳ್ಳಬೇಕಾಗುತ್ತದೆ. ಅಂತಮೇಲೆ ರೆವಿನ್ಯೂ ಇಲಾಖೆಯನ್ನು ಏಕೆ ಇಷ್ಟು ದೊಡ್ಡದಾಗಿಟ್ಟುಕೊಳ್ಳಬೇಕೋ ಎನ್ನುವುದು ಅರ್ಥವಾಗದ ವಿಚಾರ.

ತಾಲ್ಲೂಕು ಕಚೇರಿಗಳಲ್ಲಿ ಕೆಲಸಗಳು ಬಗೆಹರಿಯದೇ ಇರುವುದು ತುಂಬ ವಿಷಾದಕರವಾದ ಸಂಗತಿ. ನೀವು ಸೆಕ್ರೆಟೇರಿಯಟ್ಟಿನಲ್ಲಿ ಕೆಲಸ ಚೆನ್ನಾಗಿ ನಡೆಯುತ್ತಿದೆಯೆಂದು ಹೇಳಿಕೊಂಡರೂ ಕೂಡ, ತಾಲ್ಲೂಕು ಕಚೇರಿಗಳಿಗೆ ಬಂದ ಅರ್ಜಿಗಳು ವಿಲೇವಾರಿಯಾಗದೆ ರೈತರ ಸಮಸ್ಯೆಗಳು ಬಗೆಹರಿಯುವುದಿಲ್ಲ. ಹಳ್ಳಿಯವರು ದಿನಗಟ್ಟಲೆ ತಾಲ್ಲೂಕು ಆಫೀಸುಗಳಲ್ಲಿ ಕಾದರೂ ಅವರ ಕೆಲಸ ಆಗುವ ಹಾಗಿಲ್ಲ. ತಮ್ಮ ತಮ್ಮ ಕೆಲಸಗಳನ್ನು ಬಿಟ್ಟು ತಾಲ್ಲೂಕು ಹೆಡ್‌ಕ್ವಾರ್ಟರಿನಲ್ಲಿ ನಿತ್ಯಜೀವನ ನಡೆಸುವುದು ಅವರಿಗೆ ಬಹಳ ಕಷ್ಟ. ಎಲ್ಲಿಯವರೆಗೆ ತಾಲ್ಲೂಕು ಮಟ್ಟದಲ್ಲಿ ಸರಿಯಾದ ವ್ಯವಸ್ಥೆ ಇರುವುದಿಲ್ಲವೋ, ಎಲ್ಲಿಯವರೆಗೆ ತಾಲ್ಲೂಕು ಆಫೀಸಿನಲ್ಲಿ ಅರ್ಜಿಗಳು ವಿಲೇವಾರಿಯಾಗುವುದಿಲ್ಲವೋ, ಎಲ್ಲಿಯವರೆಗೆ ತಾಲ್ಲೂಕು ಮಟ್ಟದಲ್ಲಿ ಜಾಗ್ರತೆ ವಿಲೇವಾರಿಯಾಗುವುದಕ್ಕೆ ಯೋಚನೆ ಮಾಡುವುದಿಲ್ಲವೋ, ಅಲ್ಲಿಯವರೆಗೆ ಸೆಕ್ರೆಟೇರಿಯಟ್ ಬೆಳೆಯುತ್ತಿರುತ್ತದೆ, ದೊಡ್ಡದಾಗುತ್ತದೆ. ಒಂದು ಉದಾಹರಣೆ ಕೊಡುತ್ತೇನೆ. ಗ್ರಾಮಾಂತರ ಬಡಾವಣೆಗಳ ಅರ್ಜಿಗಳನ್ನು ತೆಗೆದುಕೊಂಡರೆ, ಐದು-ಆರು ವರ್ಷಗಳಾದರೂ ಬಗೆಹರಿಯುವುದಿಲ್ಲ. ಹೊಸಕೋಟೆ ವಿಚಾರವನ್ನೇ ಹೇಳುತ್ತೇನೆ. ಆಲ್-ಇಂಡಿಯಾ ರೇಡಿಯೋ ಸ್ಟೇಷನ್ನಿಗೆ 60 ಎಕರೆ ಜಮೀನು ತೆಗೆದುಕೊಂಡರು. ಇವತ್ತಿನವರೆಗೂ ಅದಕ್ಕೆ ಕಾಂಪೆನ್ಸೇಷನ್ ಕೊಟ್ಟಿಲ್ಲ. ಅದನ್ನು ಬಗೆಹರಿಸುವುದಕ್ಕೆ ಪ್ರಯತ್ನಪಟ್ಟಿಲ್ಲ. ನಾಲ್ಕೈದು ವರ್ಷಗಳಾದರೂ ಈ ವಿಷಯವನ್ನು ಇತ್ಯರ್ಥಮಾಡದೆ ತಡಮಾಡಿದರೆ, ಆ ಜಮೀನಿನವರ ಗತಿ ಏನು, ಅವರು ಜೀವನ ನಡೆಸುವುದು ಹೇಗೆ? ಜಮೀನನ್ನೇ ಜೀವನಾಧಾರವಾಗಿ ಅವಲಂಬಿಸಿರುವವರ ವಿಚಾರ ಯೋಚನೆಮಾಡದೆ ಹೀಗೆ ವಿಳಂಬಮಾಡಿದರೆ, ನಿಜವಾಗಿಯೂ ಇಂಥ ತಾಲ್ಲೂಕು ಆಫೀಸುಗಳಲ್ಲಿ ಇದ್ದೂ ಏನೂ ಪ್ರಯೋಜನವಿಲ್ಲ. ಜಿಲ್ಲಾಧಿಕಾರಿಗಳು, ಡಿವಿಜನಲ್ ಕಮಿಷನರು ಬಂದಾಗ ಅರ್ಜಿ ಅವರ ಆಫೀಸಿನಲ್ಲಿಯೇ ಇದೆ ಎಂದು ಹೇಳುತ್ತಾರೆ. ಅವರು ಹೋಗಿ ಪುನಃ ಆ ತಾಲ್ಲೂಕಿಗೆ ಬರುವ ತನಕ ಆ ಅರ್ಜಿ ಅಲ್ಲಿಯೇ ಇರುತ್ತದೆ. ಯಾವುದೋ ಕ್ವೆರಿ ಹಾಕಿ ಅರ್ಜಿಯನ್ನು ಮೇಲಕ್ಕೆ ಕೆಳಕ್ಕೆ ಒಡಾಡಿಸಿದರೆ ನಮ್ಮ ಗತಿ ಏನು? ಆಗಿಂದಾಗ್ಗೆ ಕ್ವೆರಿಗಳನ್ನು ಹಾಕಿ, ಕೆಲವು ಗುಮಾಸ್ತರುಗಳು ಒಂದೇ ತಾಲ್ಲೂಕು ಆಫೀಸಿನಲ್ಲಿ ಮನೆಮಾಡಿಕೊಂಡು ಬಿಟ್ಟಿರುತ್ತಾರೆ. ಜಿಲ್ಲಾಧಿಕಾರಿಗಳು ಬಂದು ಕೇಳಿದಾಗ, "ಇಲ್ಲ, ಸ್ವಾಮಿ, ಕ್ವೆರಿ ಹಾಕಿತ್ತು; ಕಾಗದ ತಮ್ಮ ಆಫೀಸಿನಲ್ಲಿಯೇ ಇದೆ" ಎಂದು ಗುಮಾಸ್ತರು ಹೇಳುತ್ತಾರೆ. ಈ ದೋಷವನ್ನು ತಪ್ಪಿಸುವುದಕ್ಕೆ ಸರಿಯಾದ ವ್ಯವಸ್ಥೆ ಮಾಡಿಲ್ಲ. ಕಾಗದಗಳು ಅಮಲ್ದಾರರ ಆಫೀಸಿನಿಂದ ಹಿಂದಕ್ಕೆ ಮುಂದಕ್ಕೆ ಓಡಾಡುತ್ತಿರುತ್ತವೆ. ತಾಲ್ಲೂಕು ಆಫೀಸಿಗೆ ಬಂದ ಡೆಪ್ಯುಟೀ ಕಮಿಷನರಿಗೇ ಅಲ್ಲ, ಮಂತ್ರಿಗಳಿಗೂ ಕೂಡ ಇಂಥ ಜವಾಬು ಹೇಳಿ ಕಳಿಸುತ್ತಾರೆ. ಸ್ಥಳದಲ್ಲಿಯೇ ಕೂತುಕೊಂಡು ಏಕೆ ಈ ಅರ್ಜಿಗಳನ್ನು ವಿಲೇವಾರಿಮಾಡುವುದಿಲ್ಲ? ಕಾಗದಗಳು ವರ್ಷಾನುಗಟ್ಟಲೆ ಹಿಂದೆ ಮುಂದೆ ಓಡಾಡುವುದರಿಂದ, ಗ್ರಾಮಾಂತರ ಜೀವನದಲ್ಲಿ ಅಪ್ರಮಾಣಿಕತೆ ಹುಟ್ಟುತ್ತದೆ. ಇಲ್ಲದ ಲಿಟಿಗೇಷನ್ ವ್ಯಾಜ್ಯ ಶುರುವಾಗಿದೆ. ಕೋರ್ಟುಗಳ ಕೆಲಸ ಜಾಸ್ತಿಯಾಗುತ್ತದೆ. ಬಸ್ಸುಗಳಿಗೆ ದೊಡ್ಡ ಆದಾಯವಾಗುತ್ತದೆ. ಹೋಟಲ್‌ನವರಿಗೆ, ಪೋಲೀಸಿನವರಿಗೆ ಅನುಕೂಲವಾಗುತ್ತದೆ. ಜಗಳಗಳು ಬೆಳೆಯುವುದಕ್ಕೆ ನಾವೂ ನೀವೂ ಒಂದು ಅವಕಾಶ ಮಾಡಿಕೊಳ್ಳುತ್ತೇವೆ. ಯಾವಾಗ ಸಮಸ್ಯೆಗಳು ಬಗೆಹರಿಯುವುದಿಲ್ಲವೋ, ಆವಾಗ ಇಲಾಖೆಗಳೂ ಬೆಳೆಯುತ್ತವೆ. ಈ ರೀತಿ ಸಮಸ್ಯೆಗಳು ಬೆಳೆಯುತ್ತಾ ಬಂದರೆ ಅಭಿವೃದ್ಧಿ ಕಾರ್ಯಗಳು ನಡೆಯುವುದಕ್ಕೆ ಸಾಧ್ಯವಿಲ್ಲ. ಪ್ರತಿಯೊಂದು ಕಡೆಯೂ ಹೋಗಿ ನೋಡಿ; ವ್ಯಾಜ್ಯಗಳಿವೆ. ರಸ್ತೆಗಳನ್ನು ಮಾಡಬೇಕೆಂದರೆ, ಅಲ್ಲಿ ಆಗಲೇ ವ್ಯಾಜ್ಯ ಹೂಡುತ್ತಾರೆ. ಈ ದುಷ್ಪರಿಣಾಮಗಳಿಂದ ಹಳ್ಳಿಯ ಜೀವನ ಕಲಕಿಹೋಗಿ, ಯಾವ ಅಭಿವೃದ್ಧಿ ಕಾರ್ಯವೂ ಆಗದೆ, ಜನಗಳಿಗೆ ಬಹಳ ತೊಂದರೆಯಾಗಿದೆ. ಜನಗಳಿಗೆ ಹಳ್ಳಿಯ ಜೀವನವೇ ತುಂಬ ಜುಗುಪ್ಸೆಯಾಗಿದೆ; ನಿರಾಶಾದಾಯಕವಾಗಿದೆ. ನಾನು ಐದು-ಆರು ತಿಂಗಳ ಹಿಂದೆ ನಮ್ಮ ಹೋಬಳಿ ಗ್ರಾಮ ಪಂಚಾಯಿತಿಯ ಲೋಪದೋಷಗಳ ವಿಚಾರದಲ್ಲಿ ಕಾಗದ ಬರೆದಿದ್ದೆ. ಇವತ್ತಿನವರೆಗೂ ಆ ತೊಂದರೆಗಳು ನಿವಾರಣೆಯಾಗಿಲ್ಲ. ಸರ್ಕಾರದವರು, ಆ ಲೋಪದೋಷಗಳನ್ನು ತಡೆಗಟ್ಟುವುದಕ್ಕೆ, ಕಂಡುಹಿಡಿಯುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆಂದು ಇಷ್ಟು ದಿವಸವಾದರೂ ತಿಳಿಸಿಲ್ಲ. ಇಲ್ಲಿಯೇ ಹೀಗಾದರೆ, ಪರಸ್ಥಳಗಳಲ್ಲಿ ಏನೇನು ನಡೆಯುತ್ತಿದೆ ಎನ್ನುವುದನ್ನು ನೋಡುವವರು ಯಾರು? ಇದು ದೊಡ್ಡ ಸಮಸ್ಯೆಯಾಗಿದೆ. ಅನೇಕ ವಿಧವಾದ ಸಮಸ್ಯೆಗಳಿರುವಾಗ, ಈ ಯೋಜನೆಗಳಿಗೆ ಎಷ್ಟು ಹಣ ಖರ್ಚು ಮಾಡಬಹುದು ಎನ್ನುವುದನ್ನು ಯೋಚನೆಮಾಡಬೇಕು. ಇವತ್ತಿನ ದಿವಸ ಎನ್.ಇ.ಎಸ್. ಬ್ಲಾಕುಗಳಿವೆ. ಯಾವ ಕಾರ್ಯಕ್ರಮವೇ ಆಗಲಿ ಜನರ ಸಹಕಾರದಿಂದ ನಡೆಯಬೇಕು. ಈ ಸಹಕಾರ ದೊರೆಯಬೇಕಾದರೆ, ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ತೊಡಕುಗಳು ಆಗಿಂದಾಗ್ಗೆ ಪರಿಹಾರವಾಗಬೇಕು. ಇದು ಪರಿಹಾರವಾಗಬೇಕಾದರೆ, ಕೆಳಮಟ್ಟದಲ್ಲಿ ಸರಿಯಾದ ವ್ಯವಸ್ಥೆ ಮತ್ತು ದಕ್ಷತೆ ಇರಬೇಕು. ಸೆಕ್ರೆಟೇರಿಯಟ್ಟಿನಲ್ಲಿ ಕುಳಿತುಕೊಂಡು, ಐ.ಎ.ಎಸ್. ಅವರು ಮಾಡುವುದನ್ನಿ ತೂಕಮಾಡಿಬಿಟ್ಟರೆ ಸ್ಥಳದಲ್ಲಿ ಕುಸಿದು ಬೀಳುತ್ತಿರುವ ಆಡಳಿತ ಸರಿಯಾಗಿ ನಡೆಯುವುದಕ್ಕೆ ಅವಕಾಶವಿರುವುದಿಲ್ಲ. ಸೆಕ್ರೆಟೇರಿಯಟ್ ಲೆವಲ್ಲಿನಲ್ಲಿ ಕೆಲಸ ಮಾಡಿಕೊಂಡು, ಕೆಲಸವನ್ನೂ ಅಧಿಕಾರವನ್ನೂ ವಿಕೇಂದ್ರೀಕರಣಮಾಡಿಕೊಂಡು, ಕೆಳಗಡೆ ಇರುವ ಆಫೀಸುಗಳ ಕೆಲಸಕ್ಕೆ ಹೆಚ್ಚುಗಮನ ಕೊಡಬೇಕೆಂದು ಹೇಳಿ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

Sri B. R. SUNTHANKAR (Belgaum City).—Sir, I am in full agreement with

(SRI B. R. SUNTHANKAR)

the remarks passed by my Hon'ble friend, Sri Mallaradhya, yesterday regarding the general feeling of the people towards the general administration of the Government. There is a general discontent and a widespread dissatisfaction against the administration. Nobody is happy in this State, leave us Maharashtrians apart, because it is natural we are unhappy here as we want to go back to Bombay State and we are not allowed to do so. But what about others? Everybody in the new Mysore State seems to be unhappy and dissatisfied. The old Mysoreans and the new Mysoreans and also the services are disgruntled.

Sri K. PUTTASWAMY (Mysore).—Then what does it matter? You can still stay on in Mysore.

Sri B. R. SUNTHANKAR.—There seems to be all round frustration with the formation of Karnatak. It is unfortunate that this disillusionment has come. Why? Because Government could not fulfil the expectations of the people. There is inefficiency; there is corruption; it is rampant and it is growing. There is favouritism; there is communalism; no speedy disposal of matters and papers; inordinate delay in the disposal of matters and papers; correspondence is not replied and even acknowledged.

Sri C. M. ARUMUGHAM (Kolar Gold Fields).—There is acknowledgment for every letter.

Sri B. R. SUNTHANKAR.—About two years back one of the Hon'ble Members very rightly put it that there was one way traffic in this administration. No replies are sent to applications. That state of affairs still continues in this State. Very little improvement has been effected even after the lapse of so many months. There is complacency all round.

Sri B. D. JATTI (Chief Minister).—With reference to which branch you are making these remarks? The Hon'ble Member says that delay is rampant everywhere; these are sweeping remarks. Is it with reference to your own district?

Sri B. R. SUNTHANKAR.—From my own district I will give instances where a Head Constable had made Rs. 60,000 and built buildings.

Sri B. D. JATTI.—Is it a matter of delay? You are now shifting to corruption.

Sri B. R. SUNTHANKAR.—I said corruption is rampant and there are a number of matters which I can point out to you. There are no sincere efforts in that direction, and that is why interests of the common man are neglected. There is more of power seeking, power grabbing. What the people want is good administration. Government has not given that and hence there is frustration and disillusionment. The bureaucratic attitude still prevails. I can give an instance of a reply given by one of the officers of the Inspectorate. A grievance was referred to that officer and after repeated reminders and telegrams he was kind enough to reply.

(Sri K. S. Suryanarayana Rao was seen sitting in the seat of a Minister).

Sri T. PARTHASARATHY (Malleswaram).—On a point of order, Sir. Sri K. S. Suryanarayana Rao has been appointed as eleventh Minister! Is it correct? (*Laughter*)

Mr. SPEAKER.—I am not aware of Sri Suryanarayana Rao being appointed as the eleventh Minister, let alone a Minister.

Sri G. VENKATAI GOWDA.—Is it open to him to sit always in the Treasury Benches?

Mr. SPEAKER.—If the Minister gives way, what can I do? (*Laughter*) He has gone outside for food.

Sri G. N. PUTTANNA (Tumkur).—Budding Minister.

Sri B. R. SUNTHANKAR.—Sir, I was referring to a grievance represented by the Consumers, Association at Belgaum The officer after repeated reminders and telegrams was kind enough to reply that that particular grievance was not put forth by any person, and as it was put forth by an organisation he was not willing to take it into consideration. That is the attitude, ureaucratic attitude in the administration. With these remarks, I

turn to some of the items in the Demand.

All the big leaders have been asking people to make sacrifices. Even the Finance Minister in his speech has said:—

> "It is, therefore, necessary that the present generation should tighten their belts and make as much sacrifice as possible with a view to find resources for larger investments so that the standard of living of the people may be raised in a measurable distance of time and ensure happiness both of the present and the coming generation."

Very fine sentiments. He is asking the people to tighten their belts and make as much sacrifice as possible. I would humbly say "Physician, heal thyself". I will refer to the expenditure under "A. C. Ministers" to which my Hon'ble friend Sri Narasimhan has made reference. This expenditure is increasing every year from Rs. 4,20,000 in 57-58 to Rs. 5 lakhs in 59-60. This excludes some of the items like Official residences and so some more thousands have been excluded. Similarly, under "Contingencies" it has increased from Rs. 44,000 to one lakh. So there is an increase under the head "A. C. Ministers". His Excellency the Governor has set a fine example by surrendering his salary; so also the President of our Union has foregone a percentage of his salary; one of the members of our Legislature Hon ble Sri Hoover has surrendered the whole of his salary. So I would request the Hon ble Ministers to follow this noble example and voluntarily cut their expenditure. There is need for economy and the Hon'ble Ministers would do well to cut their expenditure. The Hon'ble the Finance Minister has asked for unstinted co-operation of all the Hon'ble Members. I doubt very much the attitude of Government, whether they really want co-operation from the members of the Opposition. Sir, I may give an example.

I have been elected as a member of this august House for the last two years and more, but I am still not a member of the District Development Board of my District. I have been denied the opportunity to work in the Development work. I do not know why? I have not been invited to any of the meetings of that Board and I do not know how long this state of affairs is going to continue.

Sri K. S. SURYANARAYANA RAO.—Perhaps the Hon'ble Member is more busy as an agitator.

Sri B. R. SUNTHANKAR.—I was never invited to any meeting of the District Development Board. I think a member of the Legislature becomes automatically a member of the District Development Board.

Mr. SPEAKER.—Then you are automatically a member of that Board.

Sri B. D. JATTI.—The Hon'ble Member is automatically a member of the District Development Board, Belgaum. He has no time and so he is not attending its meetings. That is the difficulty.

Sri B. R. SUNTHANKAR.—The Board is to be constituted by the Government. The old Board was continuing there.

Sri B. D. JATTI.—What the Hon'ble Member says was correct some time back, but today that has been rectified and he is a regular member of the District Development Board. He is not attending it. That is my grievance.

Sri B. R. SUNTHANKAR.—I have not been intimated to that effect. I have never been invited to any of the meetings of the District Development Board.

Mr. SPEAKER.—So your grievance is not against the Government itself but against the Chairman of the District Development Board.

Sri B. R. SUNTHANKAR.—In my District, it is our bitter experience that the District Congress Committee is interfering too much in the administrative affairs. At times we doubt whether the Government and the District Officers are ruling the District or the District Congress Committee, because at times we find that officers are transferred at the sweet will of the District Congress Committee.

Sri B. D. JATTI.—Can you quote one instance ?

Sri B. R. SUNTHANKAR.—I can quote the instance of the previous D. S. P. of Belgaum. He was not wanted by the Congress Committee and so he was transferred.

Sri B. D. JATTI.—That is not correct. The M.E.S people wanted a nice man and so we have posted this man.

Sri M. C. NARASIMHAN (Kolar Gold Fields).—Is that the policy that if the M.E.S. demands, you post such a D.S.P. ?

Sri B. D. JATTI.—That is not the policy.

Sri B. R. SUNTHANKAR —Then, I come to the Information Department. The Information Department in the State is found to be in a state of infancy. It will have to be reorganised and its scope widened because this department has to serve as a liaison between the Government and the people, but our Information Department falls far short of the requirements. There is the Mysore Information Bulletin, but it serves, as my friend has rightly put it, only as Ministers' Gazette. Because only tour programmes and functions attended by the Ministers are given publicity along with their photographs, as if it wants cajole the Ministers and Deputy Ministers. That is the general impression that is created. There ought to be a thorough scrutiny of the various criticisms in the newspapers.

Sir, I was referring to the scrutiny of criticisms in newspapers. There are many grievances and complaints which appear in newspapers. They will have to be scrutinised and sent to the respective departments. I do not know how the matter stands here. My impression is that it is not very satisfactory.

Then I come to language papers. We have got only one section and that is the Kannada section. The minority languages are the worst sufferers, because there are no arrangements for minority languages like Urdu, Telugu, Tamil and Marathi.

Sri D. ABDUL RASHEED (Kolar).—In respect of Urdu, we have all facilities in old Mysore.

Sri B. R. SUNTHANKAR.—The criticisms in minority language papers like Urdu, Telugu and Marathi should be scrutinised and the information translated and sent to the respective departments. To my knowledge there is no such arrangement for Marathi. There is the Marathi Press in my District. 7 or 8 periodicals are published in Marathi in my District at Belgaum and other places, but there is absolutely no arrangement for translating and sending abstracts to the concerned departments of Government.

Coming to Reporters, it is unfortunate that there is no Marathi Reporter in this House. Some arrangement was made in the first session, but afterwards it was dropped.

Mr. SPEAKER.—I will tell you what happened. Government is not responsible for that. The thing is, only two members from the Samithi were speaking in Marathi. All the rest of your members were speaking in English. That is the reason why I discontinued that arrangement.

Sri B. R. SUNTHANKAR.—The thing is that every word that is spoken in this House must be recorded. That is our right.

Mr. SPEAKER.—That is not so. In the case of Marathi, if a number of Hon'ble Members were speaking in Marathi I could have made some arrangements or could have continued the old arrangement, but I found from experience that only two members were speaking in Marathi and the rest of them were speaking in English. That is why I had discontinued the arrangement. Government did not tell me to discontinue, but I myself discontinued it because there were only two members speaking in Marathi.

So far as the right of members for their speechs to be recorded, I must say that it is not possible and practicable. In the case of languages other than Kannada there is a real difficulty and that is why there is the other rule that so as far as possible members who speak in languages other than Kannada should give a summary of their speech.

Sri B. R. SUNTHANKAR.--If we speak in Marathi we have to submit a summary. That is our handicap.

Mr. SPEAKER.—What about Sri Sham Sunder, Mahomed Sait and others who speak in Urdu? They are giving a summary.

Sri B. R. SUNTHANKAR.—Provision for reporting their speeches also should be made because there are a large number of Urdu speakers in this House.

There are tall talks and loud professions about safeguarding the interests of linguistic minorities, but the professions are not followed by practice. That is our difficulty.

2-30 P.M.

Sir, 'Mysore Vani' is published regularly in Kannada. I suggest that section of translations in all minority languages, like Tamil, Telugu and Marathi, should be added and, a gist of Government's activities should be made available to them. Another handicap is the fact that all publicity literature is published in Kannada.

Sri B. D. JATTI.—And also in English.

Sri B. R. SUNTHANKAR.—I am speaking about the Indian languages. The masses do not know English and it is very necessary that all the publicity literature, particularly in regard to development and planning, should be published in the language o' the minorities.

There is one commercial publicity section. The work of this section is to give advertisements to the newspapers. I was surprised to find that this Government is sending advertisements through an advertising agency in Madras. I have seen the bills with my own eyes. The Belgaum papers receive advertisements through a private agency situated in Madras. When there is a commercial publicity section, I wonder why the Government should not send advertisements direct to the respective newspapers. Why should they pay commission to a private agency and that too outside the State?

About the Press Advisory Committee I wish to submit that there is no such body in this State. It is very necessary in the interest of the Press and the Government I request the Government to institute a Press Advisory Body as early as possible.

*ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಈ ಸಭೆಯ ಮುಂದಿರತಕ್ಕ ಡಿಮ್ಯಾಂಡಿನ ವಿಚಾರದಲ್ಲಿ ನಾಲ್ಕು ಮಾತುಗಳನ್ನಾಡಬೇಕೆಂದು ನಾನು ಇಚ್ಛಿಸುತ್ತೇನೆ. ಮೊದಲನೆಯದಾಗಿ ರಾಜ್ಯಪಾಲರ ಸಿಬ್ಬಂದಿಯ ವಿಚಾರವಾಗಿ ಒಂದು ಮಾತನ್ನು ಹೇಳಬೇಕಾಗಿದೆ. ರಾಜ್ಯಪಾಲರು ಸಂಬಳ ಮತ್ತು ಸಾರಿಗೆ (Sumptuary allowance) ಇದಾವುದನ್ನೂ ತೆಗೆದುಕೊಳ್ಳುತ್ತಿಲ್ಲ. ಇದಕ್ಕಾಗಿ ನಾವು ನಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳನ್ನರ್ಪಿಸಬೇಕಾಗಿದೆ. ಅವರ ಸಿಬ್ಬಂದಿಯಲ್ಲಿ ಆಗುತ್ತಿರುವ ಖರ್ಚನ್ನು ಖೋತಾ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ ಎನ್ನುವುದನ್ನು ಈ ಸಮಯದಲ್ಲಿ ಸೂಚಿಸಲು ಇಚ್ಛೆಪಡುತ್ತೇನೆ. ಆ ಸಿಬ್ಬಂದಿಗೆ ಐದುಲಕ್ಷಕ್ಕೆ ಮೇಲ್ಪಟ್ಟು ಹಣವನ್ನೊದಗಿಸಿದೆ. ಸಂಸ್ಥಾನದ ಆಡಳಿತವನ್ನು ನಡೆಸುತ್ತಿರತಕ್ಕ ಎಲ್ಲ ಜವಾಬ್ದಾರಿಯನ್ನೂ ಹೊತ್ತು ಸಮರ್ಪಕವಾಗಿ ಆಡಳಿತವನ್ನು ನಡೆಸಿದರೂ ಕೂಡ ಈ ಸಭೆಯ ವಿರೋಧಪಕ್ಷದ ಸದಸ್ಯರ ಆಕ್ಷೇಪಣೆಗೆ, ನಿಂದನೆಗೆ, ಒಳಗಾಗಿರತಕ್ಕ ಮಂತ್ರಿಗಳಿಗೆ ಇಲ್ಲಿ ಒದಗಿಸಿರತಕ್ಕ ಐದುಲಕ್ಷ ಚಿಲ್ಲರೆ ರೂಪಾಯಿಗಳ ವಿಚಾರದಲ್ಲಿ ಬಹು ಕಟುವಾಗಿ ಟೀಕೆ ಮಾಡುತ್ತಾ ಬಂದಿದ್ದಾರೆ. ಅವರು ಟೀಕೆ ಮಾಡುವುದು ಸರಿಯಲ್ಲವೆಂದು ಹೇಳುವುದಿಲ್ಲ. ಅವರಿಗೆ ಟೀಕೆ ಮಾಡುವುದಕ್ಕೆ ಸ್ವಾತಂತ್ರ್ಯವಿದೆ. ಆದರೆ ಟೀಕೆಯ ದೃಷ್ಟಿಯಿಂದ ರಾಜ್ಯಪಾಲರ ಸಿಬ್ಬಂದಿಗೆ ಒದಗಿಸಿರತಕ್ಕ ಐದುಲಕ್ಷ ರೂಪಾಯಿಗಳನ್ನು ಅಳತೆಮಾಡಿ ನೋಡುವುದಾದರೆ ಅದರಲ್ಲಿ ಖೋತಾ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ ಎಂದು ಹೇಳುವುದಕ್ಕೆ ಸಂಕೋಚವೇನೂ ಆಗುವುದಿಲ್ಲ. ಈ ಟೀಕೆ ರಾಜ್ಯಪಾಲರ ವ್ಯಕ್ತಿತ್ವಕ್ಕಾಗಲೀ, ಅವರಮೇಲಿನ ಆಕ್ಷೇಪಣೆ ಎಂದಾಗಲಿ ಮಾನ್ಯ ಸ್ನೇಹಿತರುಗಳು ಯಾರೂ ಭಾವಿಸಬಾರದೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ. ಅವರಿಗೆ ಈ ಸಭೆಯವರು ಒದಗಿಸತಕ್ಕ ಸಿಬ್ಬಂದಿಯಿಂದಲೇ ಅವರ ಸ್ಥಾನಮಾನವನ್ನು ಉಳಿಸಿಕೊಳ್ಳಬೇಕಾದ ಸ್ಥಿತಿಯಲ್ಲಿ ಅವರೇನೂ ಇಲ್ಲ. ಆದುದರಿಂದ ಸರ್ಕಾರದವರು ಈ ವಿಚಾರದಲ್ಲಿ ಪರಿಶೀಲನೆ ಮಾಡಿ ಅವಶ್ಯಕವಾದಕಡೆ ಅವಕಾಶವಿದ್ದರೆ ಖೋತಾ ಮಾಡುವುದು ಒಳ್ಳೆಯದೆಂದು ಈ ಸಮಯದಲ್ಲಿ ನಾನು ನಮ್ರತೆಯಿಂದ ಸೂಚಿಸಲು ಇಚ್ಛೆಪಡುತ್ತೇನೆ.

ಎರಡನೆಯದಾಗಿ ಈ ಸಭೆಯ ಹಕ್ಕು ಬಾಧ್ಯತೆಗೆ, ಸಭೆ ತನ್ನ ಕಾರ್ಯವನ್ನು ನೆರವೇರಿಸುವುದಕ್ಕೆ ಅವಕಾಶವಾಗದೆ ಇರತಕ್ಕ ಒಂದೆರಡು ಅಂಶಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಹೋದವರ್ಷ 1957-58 ನೆಯ ಸಾಲಿನ ಸಪ್ಲಿಮೆಂಟರಿ ಡಿಮ್ಯಾಂಡಿನ ಮೇಲೆ ಮಾತನಾಡುವಾಗ ನಾನು ಸರ್ಕಾರದ ಗಮನವನ್ನು ಈ ವಿಚಾರದ ಕಡೆಗೆ ಎಳೆದೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯ ವರದಿ ಈ ಸಭೆಗೆ ಬಂದು ಚರ್ಚೆಯಾಗಿ ಬಹಳ ವರ್ಷಗಳಾಗಿ ಹೋದವು. ನನಗೆ ಜ್ಞಾಪಕವಿರುವಹಾಗೆ 1955 ರಲ್ಲಿ ಚರ್ಚೆಯಾಯಿತೋ ಏನೋ. ಆಗಿದ್ದರೂ ಆಗಿರಬಹುದು. 1950 ರಲ್ಲಿ ಆದ ಹಾಗೆ ಕಾಣಲಿಲ್ಲ. ವಿಶಾಲ ಮೈಸೂರು ಆದ ಮೇಲೆ, ರಾಜ್ಯಪುನರ್ವಿಂಗಡಣೆಯಾದಮೇಲೆ ಈ ತಹಲ್ ವರೆಗೂ ಕೂಡ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ವರದಿ ನಮ್ಮ ಮುಂದೆ ಬಂದಿಲ್ಲ. ಈ ವಿಚಾರವನ್ನು ನಾನು ಹೋದವರ್ಷ ಪ್ರಸ್ತಾಪ ಮಾಡಿದಾಗ ಮಾನ್ಯ ಹಣಕಾಸಿನ ಸಚಿವರು ಇದು ಸರ್ಕಾರದ ಜವಾಬ್ದಾರಿಯಲ್ಲ,

(ಶ್ರೀ ಕೆ. ಪುಟ್ಟಸ್ವಾಮಿ)

ಸಭೆಯ ಅಧ್ಯಕ್ಷರು ಪಬ್ಲಿಕ್ ಅಕೌಂಟ್ಸ್ ಸಮಿತಿಗೆ ಬೇರೆ ಒಬ್ಬ ಅಧ್ಯಕ್ಷರನ್ನು ನೇಮಿಸಿ ಅವರಿಂದ ವರದಿಯನ್ನು ತರಿಸತಕ್ಕ ಜವಾಬ್ದಾರಿಯನ್ನು ಹೊಂದಿರುತ್ತಾರೆಂದು ಹೇಳಿದರು. ಸರ್ಕಾರವೇ ಆಗಲಿ, ಅಧ್ಯಕ್ಷರೇ ಆಗಲಿ, ಅಥವಾ ಈ ಸಭೆಯವರೇ ಆಗಲಿ, ಯಾರೇ ಆಗಲಿ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ವರದಿಯು ಈ ಸಭೆಯ ಮುಂದೆ ಬರದೆ ಇದ್ದರೆ, ಅದರ ಪರಿಣಾಮವೇನೆಂಬುದನ್ನು ಆಲೋಚನೆ ಮಾಡಬೇಕೆಂದು ವಿಜ್ಞಾಪನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಅವರು ಕೆಲಸವನ್ನು ಪೂರ್ತಿಮಾಡಿದ್ದಾರೆ. ಇಷ್ಟರಲ್ಲಿಯೇ ವರದಿಯು ತಮ್ಮ ಮುಂದೆ ಬರುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿ.—ಪಬ್ಲಿಕ್ ಅಕೌಂಟ್ಸ್ ಕಮಿಟಿ ಮತ್ತು ಎಸ್ಟಿಮೇಟ್ಸ್ ಕಮಿಟಿ ಈ ಎರಡು ಕಮಿಟಿಗಳ ವರದಿಗಳೂ ಬಹಳ ಪ್ರಾಮುಖ್ಯವಾದುವು. ಈ ಸಭೆಯು ಸರ್ಕಾರಕ್ಕೆ ಒದಗಿಸತಕ್ಕ ಹಣ ಸರಿಯಾದ ರೀತಿಯಲ್ಲಿ ಖರ್ಚಾಗುತ್ತಿದೆಯೋ, ಅದು ದುರ್ವ್ಯಯವಾಗುತ್ತಿದೆಯೋ ಅಥವಾ ಸದ್ವಿನಿಯೋಗವಾಗುತ್ತಿದೆಯೋ ಎನ್ನುವ ವಿಚಾರವನ್ನು ಈ ಸಭೆಗೆ ವರದಿ ಮಾಡತಕ್ಕ ಈ ಎರಡು ಪ್ರಾಮುಖ್ಯವಾದಂಥ ಸಮಿತಿಗಳು ತಮ್ಮ ವರದಿಯನ್ನು ನಮ್ಮ ಸಭೆಯ ಮುಂದೆ ಇಡುವುದಕ್ಕೆ ಆಗಿಲ್ಲ. ಪಬ್ಲಿಕ್ ಅಕೌಂಟ್ಸ್ ಕಮಿಟಿಯ ವಿಚಾರದಲ್ಲಿ ನಾನು ಏನು ಆಕ್ಷೇಪಣೆಯನ್ನು ಹೇಳುತ್ತಿದ್ದೇನೆಯೋ ಅದು ಎಸ್ಟಿಮೇಟ್ಸ್ ಕಮಿಟಿಯ ವಿಚಾರದಲ್ಲಿಯೂ ಅನ್ವಯವಾಗುತ್ತದೆ. ಎಸ್ಟಿಮೇಟ್ಸ್ ಕಮಿಟಿಯ ವರದಿ 1955–56 ನೆಯ ಸಾಲಿನಲ್ಲಿ ಈ ಸಭೆಯ ಮುಂದೆ ಬಂದಿತ್ತು. ಅಲ್ಲಿಂದೀಚೆಗೆ ನಾವು ಒದಗಿಸಿದಂಥ ಹಣ ಸರಿಯಾಗಿ ವಿನಿಯೋಗವಾಗಿದೆಯೇ, ಯಾವ ಯಾವ ರೀತಿಯಲ್ಲಿ ವಿನಿಯೋಗವಾಗಿದೆ ಎನ್ನುವ ವಿಚಾರದಲ್ಲಿ ಎಸ್ಟಿಮೇಟ್ಸ್ ಕಮಿಟಿ ನಮಗೆ ವರದಿಯನ್ನು ಕೊಡುವುದಕ್ಕೆ ಆಗಿಲ್ಲ. ನಾನು ಸಭೆಯ ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುವುದು ಸಾಧ್ಯವಾದಷ್ಟು ಮಟ್ಟಿಗೂ ಕೂಡಲೇ ಈ ಅಧಿವೇಶನದಲ್ಲಿಯೇ ಎರಡು ಸಮಿತಿಗಳ ವರದಿಗಳೂ ಕೂಡ ನಮ್ಮ ಮುಂದೆ ಬರುವುದಷ್ಟೇ ಅಲ್ಲ, ಬಂದಮೇಲೆ ಅವುಗಳ ಮೇಲೆ ಚರ್ಚೆ ಮಾಡುವುದಕ್ಕಾದರೂ ಕಾಲವನ್ನು ಒದಗಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ಪಬ್ಲಿಕ್ ಅಕೌಂಟ್ಸ್ ಕಮಿಟಿ ರಿಪೋರ್ಟ್ ಬರುತ್ತದೆ. ಈ ಅಧಿವೇಶನದಲ್ಲಿಯೇ ಅದರ ಮೇಲಿನ ಚರ್ಚೆಗೆ ಒಂದು ದಿವಸವನ್ನು ಕೊಡಬೇಕೆಂದು ಮಾಡಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಅನೇಕ ರಿಪೋರ್ಟುಗಳು ಸಭೆಯ ಮುಂದೆ ಏನೋ ಒಂದು ರೀತಿಯ ಔಪಚಾರಿಕವಾಗಿ ಬರುತ್ತಿರುವಂತೆ ನನಗೆ ಭಾಸವಾಗುತ್ತದೆ. ಪಬ್ಲಿಕ್ ಸರ್ವಿಸ್ ಕಮಿಷನ್ ವರದಿಯ ವಿಚಾರವನ್ನು ನಿನ್ನೆಯ ದಿನ ವಿರೋಧಪಕ್ಷದ ಸದಸ್ಯರಾದ ಶ್ರೀಮಾನ್ ಕೆಂಚಪ್ಪನವರು ಈ ಸಭೆಯ ಗಮನಕ್ಕೆ ತಂದರು. ಪಬ್ಲಿಕ್ ಅಕೌಂಟ್ಸ್ ಕಮಿಟಿ ರಾಜ್ಯಾಂಗಕ್ಕನುಗುಣವಾಗಿ ಪ್ರತಿ ಸಾಲಿನಲ್ಲಿಯೂ ಕೂಡ ಅವರು ಮಾಡಿರುವುದನ್ನು ತಿಳಿಸಬೇಕಾಗಿದೆ. ಅದು ಅದರ ಕರ್ತವ್ಯ. ರಾಜ್ಯಾಂಗದಲ್ಲಿ ಅಡಗಿರತಕ್ಕ ಕಾನೂನಿಗೆ ವಿರುದ್ಧವಾಗಿ ಮೂರು ವರ್ಷಗಳಿಂದ ನಮಗೆ ರಿಪೋರ್ಟು ಬಂದಿಲ್ಲ. ಇದು ಸರಿಯೇ ? ಇದಕ್ಕಾಗಿ ಸರ್ಕಾರದವರು ಏನು ಮಾಡಿದ್ದಾರೆ ? ಕಾನ್ಸ್ಟಿಟ್ಯೂಷನಲ್ ಆಬ್ಲಿಗೇಷನ್ ಇದೆ. ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ಅದನ್ನು ತಿರಸ್ಕಾರ ಮಾಡಿದರೆ ಅದರಮೇಲೆ ನಮಗೆ ಏನು ಹಿಡಿತ ಇದೆ ಎನ್ನುವುದನ್ನ ಪರಿಶೀಲನೆ ಮಾಡಬೇಕಾಗಿದೆ. ಕಳೆದ ಅಧಿವೇಶನದಲ್ಲಿ ನಾನು 1955-56ರ ಪಬ್ಲಿಕ್ ಸರ್ವಿಸ್ ಕಮೀಷನ್ ರಿಪೋರ್ಟ್ ಚರ್ಚೆ ಆಗಬೇಕು ಎಂದು ತಮಗೆ ಒಂದು ನೋಟೀಸ್ ಕೊಟ್ಟಿದ್ದೆನು. ಅದನ್ನು ಪರಿಶೀಲನೆಮಾಡುತ್ತಿದ್ದೇವೆಂದು ಹೇಳಿದರು. ಈಚೆಗೆ ಇಂಡಿಯಾ ದೇಶದಲ್ಲಿ ಕೆಲವು ಸಂಸ್ಥಾನಗಳಲ್ಲಿ ಪಬ್ಲಿಕ್ ಸರ್ವಿಸ್ ಕಮೀಷನ್ ರಿಪೋರ್ಟುಚರ್ಚೆ ಆಗಬೇಕಾದದ್ದು ಅವಶ್ಯಕ. ಪಬ್ಲಿಕ್ ಸರ್ವೀಸ್ ಕಮೀಷನ್‌ನವರು ಮಾಡಿದ್ದನ್ನೆಲ್ಲಾ ಸರ್ಕಾರದವರು ಒಪ್ಪಲೇಬೇಕು ಎನ್ನುವ ವಿಧಾಯಕ ಏನೂ ಇಲ್ಲ. ಆ ಸಮಿತಿಯವರು ಮಾಡಿದ ಶಿಫಾರ್ಸುಗಳು ಸಮಾಜಕ್ಕೆ ನ್ಯಾಯವನ್ನು ಒದಗಿಸಿಕೊಡುವುದಿಲ್ಲ ಎಂದು ಸರ್ಕಾರಕ್ಕೆ ಖಚಿತವಾದರೆ ಸರ್ಕಾರದವರು ಆ ಶಿಫಾರ್ಸುಗಳನ್ನು ನಿರಾಕರಿಸುವುದಕ್ಕೆ ಅವಕಾಶವಿದೆ. ಅವರು ಹಾಗೆ ನಿರಾಕರಿಸಿದುದಕ್ಕೆ ಈ ಸಭೆಯಲ್ಲಿ ಪರಿಷ್ಕಾರ ಇದೆಯೇ, ಇಲ್ಲವೇ ಎನ್ನುವುದನ್ನು ತಿಳಿಯಲು ಅವಕಾಶವಿದೆ. ಪಬ್ಲಿಕ್ ಸರ್ವಿಸ್ ಕಮಿಷನ್ ಅವರು ಏನು ಮಾಡಿದರೂ ಅದು ನ್ಯಾಯ ಎಂದು ಬಂದಿದೆ. ಸರ್ಕಾರದವರಿಗೂ ಕೂಡ ಆರೀತಿ ಮಾಡುವುದು ಸುಲಭವಾಗುತ್ತದೆ. ಯಾವುದನ್ನಾದರೂ ಏತಕ್ಕೆ ವ್ಯತ್ಯಾಸವಾಯಿತು ಎಂದು ಕೇಳಿದಾಗ, ಪಬ್ಲಿಕ್ ಸರ್ವಿಸ್ ಕಮಿಷನ್‌ಅವರು ಸಲಹೆ ಮಾಡಿದರು, ನಾವು ಅದರಂತೆ ಮಾಡಿದೆವು ಎಂದು ಹೇಳಿದರೆ ತಮ್ಮಮೇಲೆ ಬರತಕ್ಕ ಆರೋಪಣೆಗಳಿಗೆ ಉತ್ತರ ಹೇಳುವುದಕ್ಕೆ ಸುಲಭವಾಗುತ್ತದೆ ಎಂದು ಅನೇಕವೇಳೆ ಪಬ್ಲಿಕ್ ಸರ್ವಿಸ್ ಕಮಿಷನ್‌ನವರ ಮಾಡತಕ್ಕ ಕೆಲಸ ಮತ್ತು ಅವರು ಅನುಸರಿಸತಕ್ಕ ನೀತಿ ಸರಿ ಇಲ್ಲದೆ ಇದ್ದರೂ ಕೂಡ, ಅದರಿಂದ ಸಮಾಜಕ್ಕೆ ನ್ಯಾಯ ದೊರೆಯದೆ ಇದ್ದರೂ ಕೂಡ, ಸರ್ಕಾರದವರು ಹೆದರಿ ನಿಸ್ಸಹಾಯಕರಾಗಿದ್ದಾರೆ ಎಂದು ನನ್ನ ಭಾವನೆ. ಪ್ರಾಂತಗಳ ಪುನರ್‌ವಿಂಗಡಣೆಯ ರಿಪೋರ್ಟಿನಲ್ಲಿ ಯಾವುದೋ ಅಂಕಿಅಂಶಗಳಿವೆ, ಅದರಂತೆ ಉದ್ಯೋಗವನ್ನು ಹಂಚಿಕೊಡುತ್ತಿದ್ದಾರೆಂದು ನಾನು ಕೇಳಿದ್ದೇನೆ. ನಾನು ಹತ್ತಾರು ವರ್ಷಗಳಿಂದ ಈ ಸಭೆಯಲ್ಲಿ ಸದಸ್ಯನಾಗಿದ್ದೇನೆ. ನಾನು ಈ ವಿಚಾರದಲ್ಲಿ ತಿಳಿದುಕೊಳ್ಳಬೇಕು ಎನ್ನುವ ಕುತೂಹಲವಿದ್ದರೂ ನಾನು ನಿಸ್ಸಂಕೋಚವಾಗಿ ಒಪ್ಪಿಕೊಳ್ಳುತ್ತಾ ಇರುವುದು. ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ಈ ಹುದ್ದೆಗಳನ್ನು ಕೊಡುವುದರಲ್ಲಿ ಯಾವ ನೀತಿಯನ್ನು ಅನುಸರಿಸುತ್ತಿದ್ದಾರೆ, ಎಂಬುದು ನನಗೆ ತಿಳಿಯದ್ದು ಆಗಿದೆ, ಒಂದು ವಿಚಾರ ಮೊನ್ನೆ ನನ್ನ ಗಮನಕ್ಕೆ ಬಂದಿದೆ. ನಮ್ಮ ಊರಿನ ನಯನಜ ಜಾತಿಯ ಒಬ್ಬ ಹುಡುಗ ಹಲವಾರು ವರ್ಷ ಮಿಡಲ್ ಸ್ಕೂಲ್ ಹೆಡ್‌ಮಾಸ್ಟರಾಗಿ ತಾತ್ಕಾಲಿಕ ಹುದ್ದೆಯಲ್ಲಿದ್ದರೂ ಕೂಡ, ಆತ ಖಾಯಂ ಹುದ್ದೆಗೆ ಅರ್ಜಿ ಹಾಕಿದ. ಆತನಿಗೆ ಕೆಲಸ ಸಿಕ್ಕದೆ ದೇವಾಂಗ ಜಾತಿಯ ಒಬ್ಬ ಹುಡುಗನಿಗೆ ಕೊಟ್ಟರು. ಕೊಡುವುದಕ್ಕೆ ನಾನು ಆಕ್ಷೇಪಣೆಮಾಡುವುದಿಲ್ಲ. ಮೂರು ಜಾತಿಯ ಗ್ರೂಪು ಇದೆ, ನಯನಜ ಕ್ಷತ್ರಿಯರು ಅವರಿಗಿಂತಲೂ ಮೇಲೆ ಬಂದಿದ್ದಾರೆ, ಆದ್ದರಿಂದ ಆ ಸಲದ ಹುದ್ದೆ ಮೂರು ಜಾತಿಗಳಿಗೇ ಅಲ್ಲ ಬೇರೆ ಬೇರೆ ಜಾತಿಗಳಿಗೆ ಹೋಗಬೇಕು ಎನ್ನುವ ವಿವರಣೆ ಕೂಡ ದೊರೆಯಿತು. ನಿಜವಾಗಿಯೂ ಇದು ನನಗೆ ಆಶ್ಚರ್ಯವೆನಿಸಿತು. ನನಗೆ ತಿಳಿದಮಟ್ಟಿಗೆ ಪಟ್ಟಣವಾಸದಲ್ಲಿರುವ ನಯನಜ ಕ್ಷತ್ರಿಯರನ್ನು ಬಿಟ್ಟರೆ ಬಾಕಿಕಡೆ ಇರುವವರು ಯಾವ ರೀತಿಯಲ್ಲೂ ಕೂಡ ಷೆಡ್ಯೂಲ್

ಕ್ಯಾಪ್ಟಿನವರಿಗಿಂತ ಮೇಲುದರ್ಜೆಯಲ್ಲಿ ಇಲ್ಲ. ಹಾಗಿದ್ದರೂ ಕೂಡ ಬಿ.ಎ. ಪರೀಕ್ಷೆ, ಬಿ.ಇಡಿ. ಪರೀಕ್ಷೆ ಮಾಡಿದವರಿಗೆ ಒಂದು ಮಿಡಲ್‌ಸ್ಕೂಲ್ ಹೆಡ್ಮಾಸ್ಟರ ಕೆಲಸ ಸಿಕ್ಕುವುದಿಲ್ಲ ಎಂದರೆ ಹುದ್ದೆಗಳನ್ನು ಕೊಡುವುದರಲ್ಲಿ ಯಾವ ನೀತಿಯನ್ನು ಅನುಸರಿಸುತ್ತಾರೆ ಎಂದು ತಿಳಿದುಕೊಳ್ಳಬೇಕಾದದ್ದು ಅವಶ್ಯಕ. ಆದ್ದರಿಂದ ಪ್ರತಿವರ್ಷ ಪಬ್ಲಿಕ್ ಸರ್ವಿಸ್ ಕಮಿಷನ್ ಅವರು ತಮ್ಮ ವರದಿಯನ್ನು ಈ ಸಭೆಗೆ ಸಲ್ಲಿಸಬೇಕಾದದ್ದು ಅವರ ಕರ್ತವ್ಯ. ಆದ್ದರಿಂದ ಅವರು ಕರ್ತವ್ಯ ಲೋಪ ಮಾಡಿದರೆ, ಸರ್ಕಾರದವರು ರಾಜ್ಯಾಂಗದಲ್ಲಿ ಯಾವರೀತಿ ಅದನ್ನು ಸರಿಪಡಿಸಬೇಕೆಂಬ ಬಗ್ಗೆ ಆಲೋಚನೆ ಮಾಡಬೇಕಾದದ್ದು ಅತ್ಯಗತ್ಯವಾಗಿದೆ ಎಂದು ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಇನ್ನು ಜಿಲ್ಲಾ ಮಟ್ಟದಲ್ಲಿ ನಡೆಯುತ್ತಾ ಇರತಕ್ಕ ಆಡಳಿತದ ವಿಚಾರವನ್ನು ಈಗಾಗಲೇ ಶ್ರೀಮಾನ್ ಎಸ್. ಆರ್. ರಾಮಯ್ಯನವರು ಹೇಳಿದ್ದಾರೆ. ನಾನಾದರೂ ಅದೇ ಅಂಶಗಳನ್ನು ಒತ್ತಿಹೇಳಬೇಕು ಎಂದಿದ್ದೇನೆ. ನಾನು ಪುನರುಕ್ತಿ ದೋಷಕ್ಕೆ ಒಳಗಾದರೂ, ಸರ್ಕಾರದ ಮನಸ್ಸಿಗೆ ಹಿಡಿಯಬೇಕು ಎಂದು ಅದನ್ನು ಪುನಃ ಒತ್ತಿ ಹೇಳುವುದಕ್ಕೆ ತಮ್ಮ ಅಪ್ಪಣೆಯನ್ನು ಬೇಡುತ್ತೇನೆ. ಸ್ವಾಮಿ, ಜಿಲ್ಲಾಧಿಕಾರಿಗಳನ್ನು ಹಳ್ಳಿಗಳ ಜನರು ನೋಡಿ ತಮ್ಮ ಕೆಲಸಮಾಡಿಕೊಂಡು ಬರಬೇಕು ಎಂದರೆ ಜಿಲ್ಲಾಧಿಕಾರಿಗಳು ಸುಮಾರು ತಿಂಗಳಿಗೆ 20–25 ದಿನ ಹೆಡ್‌ಕ್ವಾರ್ಟರ್ಸ್‌ನಲ್ಲಿ ಇರುವುದಕ್ಕೆ ಆಗುತ್ತಾ ಇಲ್ಲ. ಬೇರೆ ಕೆಲಸಗಳಿಗೋಸ್ಕರ ಅವರು ಇನ್‌ಸ್ಪೆಕ್ಟ್ ಮಾಡುವುದಕ್ಕೆ ಹೋಗುವುದಿದೆ. ಈಚೆಗೆ ಅಭಿವೃದ್ಧಿ ಕಾರ್ಯಗಳೂ ಕೂಡ ನಡೆಯುತ್ತಾ ಇವೆ. ಆ ಕೆಲಸವನ್ನು ನೋಡುವುದಕ್ಕೆ ಹೋಗಬೇಕಾಗಿದೆ. ಬಹಳ ದಿನ ಮಂತ್ರಿಗಳು ಪ್ರವಾಸಮಾಡುವಾಗ ಅವರ ಜೊತೆಯಲ್ಲಿ ಹೋಗುವುದರಿಂದ ಜನರ ಕೆಲಸಗಳಿಗೆ ಬಹಳ ಅಡಚಣೆಯಾಗಿದೆ. ಇದು ಬರೀ ಜಿಲ್ಲಾಧಿಕಾರಿಗಳದು ಒಬ್ಬರದೇ ಅಲ್ಲ. ಸ್ವಾಮಿ, ಮೈಸೂರು ನಗರದಲ್ಲಿ ಜವಾಬ್ದಾರಿಯುತವಾದಂಥ ಯಾವ ಅಧಿಕಾರಿಯನ್ನೂ ಕೂಡ ಒಂದು ವಾರದಿಂದ ಹುಡುಕುವುದಕ್ಕೆ ಆಗಲಿಲ್ಲ. ವಿಚಾರಿಸಿ ಕೇಳಿದ್ದರಲ್ಲಿ ಮಂತ್ರಿಗಳ ಜೊತೆಯಲ್ಲಿ ಪ್ರವಾಸ ಹೋಗಿದ್ದಾರೆ ಎಂದು ಗೊತ್ತಾಯಿತು. ಸ್ವಾಮಿ, ಈ ವಿಚಾರವನ್ನು ಹೇಳುವಾಗ ವಿರೋಧಪಕ್ಷದ ಸದಸ್ಯರು ಹೌದು ಎಂದು ಹೇಳುತ್ತಾರೆ. ಆಡಳಿತ ನಡೆಸುವವರು ನಾವು. ಜವಾಬ್ದಾರಿ ನಮ್ಮಮೇಲೆ ಬಿದ್ದಿದೆ. ಸಾರ್ವತ್ರಿಕ ಚುನಾವಣೆಯಲ್ಲಿ ಜನರು ವಿಶ್ವಾಸವಿಟ್ಟು ಕಾಂಗ್ರೆಸ್ ಪಕ್ಷವನ್ನು ಚುನಾಯಿಸಿದ್ದಾರೆ. ಆದ್ದರಿಂದ ಆಡಳಿತ ಜವಾಬ್ದಾರಿಯನ್ನು ಹೊರುವಾಗ, ಯಾವುದಾದರೂ ದೋಷ ಇದ್ದರೆ ಅದನ್ನು ಹೇಳಬೇಕಾದದ್ದು ನಮ್ಮ ಕರ್ತವ್ಯವಾಗಿದೆ. ಆದ್ದರಿಂದ ಈ ವಿಚಾರವನ್ನು ನನ್ನ ಒಂದು ಕರ್ತವ್ಯ ದೃಷ್ಟಿಯಿಂದ ಸರ್ಕಾರದಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬಹುವಾಗಿ ಮಾನ ಕಳೆಯಬೇಡಿ.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ ಅಷ್ಟರಲ್ಲೇ ಇರುವುದಾದರೆ ಹೇಳುತ್ತೇನೆ. ಸರ್ಕಾರದವರು ತಾವು ಪ್ರವಾಸಮಾಡುವ ವೇಳೆಯಲ್ಲಿ ಎಷ್ಟು ಕನಿಷ್ಠ ಸಿಬ್ಬಂದಿ ತೆಗೆದುಕೊಂಡು ಹೋಗಬಹುದು ಎಂಬುದನ್ನು ನಿಗದಿ ಮಾಡಬೇಕು. ಒಂದು ಜಿಲ್ಲೆಯಲ್ಲಿ ಒಂದೇ ತಿಂಗಳಲ್ಲಿ ಅನೇಕ ಮಂತ್ರಿಗಳು ಬಂದರೆ ಅಲ್ಲಿ ಕೆಲಸಕಾರ್ಯಗಳಿಗೆ ಬಹಳ ಅಡಚಣೆಯಾಗುತ್ತದೆ. ಮಂತ್ರಿಗಳು ಪ್ರವಾಸಮಾಡಬೇಕಾದದ್ದು ಅವಶ್ಯಕ. ಅವರು ಹೋಗಿ ಸ್ಥಳದ ಕುಂದುಕೊರತೆಗಳನ್ನು ತಿಳಿದುಕೊಳ್ಳಬೇಕಾದದ್ದು ಅವಶ್ಯಕ. ಅವಶ್ಯಕವಾದಂಥ ಈ ಕೆಲಸವನ್ನು ಮಾಡುವಾಗ ಬರೀ ಹೆಚ್ಚು ಆಡಳಿತಕ್ಕೆ ಧಕ್ಕೆ ಬಾರದಂತಹ ರೀತಿಯಲ್ಲಿ ಅವರು ನೋಡಿಕೊಳ್ಳಬೇಕು. ಮಿಸಲೇನಿಯಸ್ ಹೆಡ್ಡಿಂಗಿನಲ್ಲಿ ಏಳೆಂಟು ಸಾವಿರ ರೂಪಾಯಿಗಳಿದ್ದದ್ದು ಎಂದರೆ, ಹೋದವರ್ಷದ ರಿವೈಜ್ ಎಸ್ಟಿಮೇಟಿನಲ್ಲಿ 3·35 ಇದ್ದದ್ದು ಈ ಹೊಸದಾಗಿರುವ ಬಡ್ಜೆಟ್ಟಿನಲ್ಲಿ 9·00 ಲಕ್ಷ ರೂಪಾಯಿಗಳಿಗೆ ಬಂದಿದೆ. ಹೀಗೆ ಈ ಒಂಭತ್ತು ಲಕ್ಷ ರೂಪಾಯಿಗಳ ಹಣವನ್ನು ಏತಕ್ಕಾಗಿ ಒದಗಿಸಬೇಕೆಂದರೆ, ಪುಟ 51ರಲ್ಲಿ, ಬಡ್ಜೆಟ್ ಮೆಮೊರ್ಯಾಂಡಂನಲ್ಲಿ ಈ ರೀತಿಯಾಗಿದೆ:

"(*i*) Miscellaneous:

(*q*) Miscellaneous: The expenditure connected with Dasara Festivities and expenditure on other Miscellaneous items is debited to this minor head."

ನನಗೆ ಇದನ್ನು ಓದಿದಮೇಲೆ ಈ ಮಿಸಲೇನಿಯಸ್ ಹೆಡ್ಡಿಂಗನ್ನು ಪೂರ್ತಿಯಾಗಿ ದಸರಾಕ್ಕೇನೆ ಖರ್ಚು ಮಾಡಿದ್ದಾರೆಯೋ ಏನೋ ಗೊತ್ತಾಗುವುದಿಲ್ಲ. ಒಬ್ಬರೇ ಡೆಪ್ಯುಟಿ ಕಮೀಷನರ್ ಅವರಿಗೆ ಎರಡು ಸಾವಿರ ರೂಪಾಯಿಗಳ ಮೇಲ್ಪಟ್ಟು ಕೊಡುತ್ತಿರಲಿಲ್ಲ. ಆದರೆ ಇಲ್ಲಿ ಒಂಭತ್ತು ಲಕ್ಷ ರೂಪಾಯಿಗಳನ್ನು ಏತಕ್ಕಾಗಿ ಒದಗಿಸಬೇಕು ಎಂದು ನಾನು ಕೇಳುತ್ತಿದ್ದೇನೆ.

ಇಷ್ಟು ಮಾತುಗಳನ್ನು ಹೇಳಿ ಈಗ ನಮ್ಮ ಮುಂದೆ ಇರುವ ಡಿಮ್ಯಾಂಡನ್ನು ನಾನು ಅನುಮೋದಿಸುತ್ತೇನೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುವುದಕ್ಕೆ ಎದ್ದು ನಿಂತರೆ ಇಲ್ಲಿ ಅನೇಕರಿಗೆ ಮೆಣಸಿನಕಾಯಿ ಇಟ್ಟಂತೆ ಆಗುತ್ತದೆ. ನನಗೆ ಕಾಂಗ್ರೆಸ್ಸು ಸಂಸ್ಥೆ ಮೇಲಾಗಲಿ, ಅಥವಾ ಕಾಂಗ್ರೆಸ್ಸಿನ ಸದಸ್ಯರ ಮೇಲಾಗಲಿ ದ್ವೇಷವಿಲ್ಲ. ಆದರೆ 1955–56ರಿಂದ ಕಾಂಗ್ರೆಸ್ಸಿನವರೆಂದು ಹೆಸರು ಹಾಕಿಕೊಂಡು ದೇಶದ್ರೋಹ ಮಾಡುತ್ತಿರುವವರ ಮೇಲೆ ನನಗೆ ದ್ವೇಷವುಂಟಾಗಿದೆ ಅಷ್ಟೇ.

ನಮ್ಮ ಮಾನ್ಯ ಮಿತ್ರರುಗಳನೇಕರು ಈಗಾಗಲೇ ಅನೇಕ ಲೋಪದೋಷಗಳನ್ನು ಹೇಳಿದ್ದಾರೆ. ಪುನಃ ಅವನ್ನು ನಾನು ಹೇಳುವುದಿಲ್ಲ. ಆದರೆ ಎಲ್ಲ ಇಲಾಖೆಗಳಲ್ಲಿಯೂ ದಕ್ಷರಾಗಿರುವವರಿದ್ದಾರೆಯೋ ಎಂದರೆ ಕೆಲವುಕಡೆ ದಕ್ಷರಾಗಿರುವವರು ಇದ್ದಾರೆ; ಮತ್ತೆ ಕೆಲವು ಕಡೆ ಲೋಪದೋಷಗಳು ಕಡಮೆಯಿವೆ. ಕೆಲವುಕಡೆ ಜಾಸ್ತಿಯಿದೆ. ಯಾರೂ ಕೂಡ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಒಟ್ಟಿನಲ್ಲಿ ಹೇಳುವುದಕ್ಕಾಗುವುದಿಲ್ಲ. ನಮ್ಮಲ್ಲಿ ಅನಿಮಲ್ ಹಸ್‌ಬೆಂಡ್ರಿ ಇಲಾಖೆಯಿದೆ. ಇಲ್ಲಿರುವ ಡೈರೆಕ್ಟರು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಹೀಗೆ ಈ ಇಲಾಖೆಯಲ್ಲಿ ಮಾಡಿರುವ ಕೆಲಸಗಳಂತೆ ಬೇರೆ ಇತರ ಇಲಾಖೆಗಳಲ್ಲಿಯೂ ಇಷ್ಟು ಚೆನ್ನಾಗಿ ಕೆಲಸಗಳು ನಡೆದರೆ ನಮ್ಮ ದೇಶಕ್ಕೆ ಬಹಳ ಒಳ್ಳೆಯದಾಗುತ್ತದೆ. ಹಿಂದೆ ಇದ್ದ ಹೆಬ್ಬಾಳು ಫಾರಂಗೂ ಈಗ ಇರುವ ಹೆಬ್ಬಾಳಿನ ಫಾರಂಗೂ ಬಹಳ ವ್ಯತ್ಯಾಸವಿದೆ. ಅಷ್ಟು ಇಂಪ್ರೂವ್‌ಮೆಂಟುಗಳು ಈಗ ಆಗಿವೆ. ಅದೇ ರೀತಿಯಾಗಿ ನಮ್ಮ ಗವರ್ನಮೆಂಟ್ ಪ್ರೆಸ್ ಚೆನ್ನಾಗಿ ಕೆಲಸಮಾಡುತ್ತಿದೆ. ಅದು ಹಾಗೆ ಕೆಲಸಮಾಡದೆ ಇದ್ದರೆ ನಮಗೆ ಇಲ್ಲಿಗೆ ಬರುತ್ತಿರುವ ಪ್ರಶ್ನೋತ್ತರಗಳು ಮತ್ತು ಇನ್ನಿತರ ಕಾಗದಗಳು ಸಕಾಲಕ್ಕೆ ಪ್ರಿಂಟಾಗಿ ಬರು

(ಶ್ರೀ ಜಿ. ಎಚ್. ಪುಟ್ಟಣ್ಣ)

ತ್ತಿರಲಿಲ್ಲ. ಇದು ಚೆನ್ನಾಗಿ ಕೆಲಸಮಾಡುತ್ತಿರುವುದಕ್ಕಾಗಿ ನಮಗೆ ಸಂತೋಷವಾಗಿದೆ. ಆದರೆ ಲೋಪದೋಷಗಳೇನೂ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ.

ಮುಖ್ಯವಾಗಿ ಕಾಂಗ್ರೆಸ್ಸಿಗೆ ಸೇರಿಕೊಂಡು ದೇಶದ್ರೋಹದ ಕೆಲಸವನ್ನು ಮಾಡುವವರಿಗೆ ರಕ್ಷಣೆಯನ್ನು ಕೊಡಬೇಡಿ. ಹಳ್ಳಿಗಳ ಕಡೆ ಹೋಗಿ ನಮ್ಮ ಮಂತ್ರಿಗಳು ಮುಖ್ಯವಾಗಿ ತಿಳಿದುಕೊಳ್ಳಬೇಕಾದುದು ಬೇಕಾದಷ್ಟಿದೆ. ಹಳ್ಳಿಗಳಿಗೆ ಹೋಗಿ ಅವರ ಪಾರ್ಟಿಗಳಿಗೆ ಸಪೋರ್ಟನ್ನು ಕೊಡದೇ ಹೋದರೆ ಅವರಿಗೆ ತೊಂದರೆಯಾಗುತ್ತದೆ; ಮತ್ತು ಪಾರ್ಟಿಯ ವೈಷಮ್ಯಗಳನ್ನು ಹೆಚ್ಚು ಮಾಡುತ್ತದೆ. ಪುಡಾರಿಗಳ ಕೈಗೆ ಸಿಕ್ಕಿ ಈ ರೀತಿ ಮಾಡುತ್ತಿದ್ದರೆ ಹಳ್ಳಿಗಳ ಜನರನ್ನು ಉದ್ಧಾರಮಾಡಿದಂತಾಗುವುದಿಲ್ಲ. ಪ್ರತಿ ಗ್ರಾಮದಲ್ಲಿಯೂ ಹೋಗಿ ಯಾವ ಯಾವ ಗ್ರಾಮಗಳಲ್ಲಿ ಸರಿಯಾಗಿ ಕೆಲಸ ನಡೆಯುತ್ತಿದೆ, ಯಾವ ಯಾವ ಗ್ರಾಮಗಳಲ್ಲಿ ಗ್ರಾಮಪಂಚಾಯತಿಗಳು ಕೆಲಸ ಮಾಡುತ್ತಿವೆ ಎನ್ನುವುದನ್ನೆಲ್ಲ ನೋಡಿ ಪರಿಶೀಲನದೆ ಹೋದರೆ ಹಳ್ಳಿಗಳು ಹಾಳಾಗಿ ಹೋಗುತ್ತವೆ. ಈ ಸಂದರ್ಭದಲ್ಲಿ ನನಗೆ ಶ್ರೀಮಾನ್ ಕೆ. ವಿ. ಪುಟ್ಟಪ್ಪನವರು ಬರೆದಿರುವ "ಕೋಗಿಲೆ ಮತ್ತು ಸೋವಿಯಟ್ ರಷ್ಯಾ" ಎನ್ನುವ ಕವನದಲ್ಲಿ ಸೋವಿಯಟ್ ರಷ್ಯಾದವರು ಗೂಢಚಾರವನ್ನು ಹೇಗೆ ಇಟ್ಟುಕೊಂಡು ಕೆಲಸ ಮಾಡುತ್ತಿದ್ದರು ಎನ್ನುವುದು ಚೆನ್ನಾಗಿ ತಿಳಿಯುತ್ತದೆ. ಹಳ್ಳಿಗಳಲ್ಲಿ ಯಾವ ಮನೆಗಳಿಗೆ ಹೋಗಿ ನೋಡಿ, ಪುಡಾರಿಗಳು ಇದ್ದೇ ಇರುತ್ತಾರೆ. ಈ ಪುಡಾರಿಗಳಿಂದ ದೇಶ ಹಾಳಾಗಿ ಹೋಗುತ್ತದೆ. ನಾನೇನಾದರೂ ಮಂತ್ರಿಯಾಗಿದ್ದರೆ ಇಂತಹ ಪುಡಾರಿಗಳನ್ನು ಧ್ವಂಸ ಮಾಡಿಬಿಡುತ್ತಿದ್ದೆ. ಅನೇಕರು ಇಲಾಖೆಗಳಲ್ಲಿರುವ ಅಧಿಕಾರಿಗಳಿಗೆ ಅವರ ದುರ್ನಡತೆಗಳ ಬಗ್ಗೆ ಮತ್ತು ಅವರ ಕೆಲಸಗಳ ಬಗ್ಗೆ ಏನೂ ಸರಿಯಾಗಿ ತಿಳಿದಿರುವುದೇ ಇಲ್ಲ. ಇದು ನಮ್ಮ ಸರಕಾರಕ್ಕೆ ಅಗೌರವ. 'As is the father, so is the son' ನೂಲಿನಂತೆ ಬಟ್ಟೆ. ಅವರಿಗೆ ಅಧಿಕಾರ ಮಾಡುವುದಕ್ಕೆ ಹೇಗಾಗುತ್ತದೆ? ಅಂತಹವರಲ್ಲಿ ಮೊದಲೇ ಶಕ್ತಿ ಇಲ್ಲ ಮತ್ತು ಅವರಿಗೆ ಘನತೆಯೂ ಇಲ್ಲ. ಅಂಡರ್ ಸೆಕ್ರೆಟರಿ ಹತ್ತಿರ ಒಂದು ಫೈಲು ಹೋದರೆ ಅವರು "Put your initials and send it back" ಎಂದು ಹೇಳುತ್ತಾರೆ. ಆದರೆ ನಮ್ಮ ಮುಖ್ಯ ಮಂತ್ರಿಗಳಾದ ಶ್ರೀ ಜತ್ತಿಯವರು ತಮ್ಮ ಫೈಲುಗಳನ್ನು ಪೂರ್ತಿಯಾಗಿ ಮುಗಿಸದೆ ಎಲ್ಲಿಗೂ ಟೂರು ಹೊರಡುವುದೇ ಇಲ್ಲ ಎಂದು ಹೇಳಿದರು. ಇದನ್ನು ಕೇಳಿ ನನಗೆ ಬಹಳ ಸಂತೋಷವಾಯಿತು. ಎಲ್ಲ ಇಲಾಖೆಗಳಲ್ಲಿಯೂ ಹೀಗೆ ಫೈಲುಗಳ ವಿಲೇವಾರಿ ಕೆಲಸ ನಡೆಯುವುದಿಲ್ಲ. ಉದಾಹರಣೆಯಾಗಿ ಒಂದು ವಿಷಯವನ್ನು ಇಲ್ಲಿ ಹೇಳಬೇಕಾಗಿದೆ. ನಾನು ಒಮ್ಮೆ ಒಬ್ಬ ಮಂತ್ರಿಗಳ ಹತ್ತಿರ ಹೋಗಿ ಕುಳಿತುಕೊಂಡಿದ್ದೆ. ಆಗ ಅಲ್ಲಿಗೆ ಬಂದ ಒಬ್ಬ ಸೆಕ್ರೆಟರಿ ಕೆಲವು ಫೈಲುಗಳನ್ನು ತಂದಿಟ್ಟಾಗ ಆ ಮಂತ್ರಿಗಳು "How is it, you are not sending files to my camp?" ಎಂದು ಕೇಳಿದರು. ಅದಕ್ಕೆ ಉತ್ತರವಾಗಿ "No Sir, the previous Minister ordered that I should dispose of all such papers which do not require your attention and other things I will send." ಎಂದು ಹೇಳಿದರು. ನಾನೇನಾದರೂ ಆ ಸ್ಥಾನದಲ್ಲಿದ್ದರೆ ಇಂತಹ ಅಧಿಕಾರಿಯನ್ನು ಕತ್ತಿಗೆ ಕೈಹಾಕಿ ಹೊರಕ್ಕೆ ಕಳುಹಿಸಿಬಿಡುತ್ತಿದ್ದೆ.

Sri B. D. JATTI.—You are contradicting Sri Mallaradhya. He was saying yesterday that decentralisation should take place and all the minor things should be disposed of.

ಶ್ರೀ ಜಿ. ಎನ್. ಪುಟ್ಟಣ್ಣ.—ನಾನು ಅವರಿಗೆ ವಿರೋಧವಾಗಿ ಹೇಳುತ್ತಿಲ್ಲ. ಆದರೆ ಈರೀತಿ ಕೆಲಸಗಳನ್ನು ಮಾಡುವುದರಲ್ಲಿ ಪ್ರಯೋಜನವಿಲ್ಲ ಎಂದು ಮಾತ್ರ ಇಲ್ಲಿ ಹೇಳಬೇಕಾಗಿದೆ. ಮೇಲಧಿಕಾರಿಗಳ ಮಾತಿಗೇ ಬೆಲೆ ಇಲ್ಲದಿದ್ದರೆ ಕೆಲಸ ಹೇಗೆ ನಡೆಯುತ್ತದೆ? ಈಗ ನಾವೆಲ್ಲ ನೋಡಿದ ಹಾಗೆ ಐ.ಜಿ.ಪಿ.ಯವರು ಕೆಲಸವನ್ನು ಕೊಂಚ ಚೆನ್ನಾಗಿ ಮಾಡುತ್ತಿದ್ದಾರೆ. ಇದನ್ನು ನೋಡಿ ನಮಗೆ ಸಂತೋಷವಾಗಿದೆ. ಅವರು "I will see that everything is put down." ಎಂದು ಹೇಳುತ್ತಾರೆ. ಆದರೆ ಅಧಿಕಾರ ವರ್ಗದಲ್ಲಿರುವವರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಒಂದು ಉದಾಹರಣೆ ಹೇಳಬೇಕಾದರೆ, ಚಿಕ್ಕನಾಯ್ಕನ ಹಳ್ಳಿಯಲ್ಲಿ ನಡೆದ ಒಂದು ಎಲೆಕ್ಷನ್ನಿನಲ್ಲಿ ಒಬ್ಬ ಕ್ಯಾಂಡಿಡೇಟಿದ್ದರು. ಅವರು ಹತ್ತು ಸಾವಿರ ಹ್ಯಾಂಡು ಬಿಲ್ಲುಗಳನ್ನು ಪ್ರಿಂಟುಮಾಡಿ ಹಂಚಿ, ಒಳಲಂಚಕೊಟ್ಟು ಓಟುಗಳನ್ನು ತೆಗೆದುಕೊಂಡಿದ್ದರೂ ಇಲ್ಲ ಎಂದು ಪೋಲೀಸಿನವರ ಕಡೆಯಿಂದ "ಬಿ" ರಿಪೋರ್ಟು ಹೋಗುತ್ತದೆ. ಇನ್ನೊಂದು ಕಡೆ ಹೆಂಡವನ್ನು ಕುಡಿಸಿ ಅವರನ್ನು ಓಟುಮಾಡುವಂತೆ ಹೇಳಿದರು. ಕಾಂಗ್ರೆಸ್ಸಿಗೆ ಓಟು ಬರಲಿಲ್ಲ ಎಂದು ಈರೀತಿ ಮಾಡುವುದೇ? ತುಮಕೂರಿನಲ್ಲಿ ಈ ರೀತಿ ನಡೆಯಿತು.

ಪ್ರೊಹಿಬಿಷನ್ ಇರುವ ಕಡೆಗಳಲ್ಲಿ ಕಾಂಗ್ರೆಸ್ಸಿನವರಿಗೆ ಏನೂ ತೊಂದರೆ ಇಲ್ಲ. ಆದರೆ ಇತರ ಪಕ್ಷಗಳವರಿಗೇ ತೊಂದರೆ ಬರುವುದು ಹೆಚ್ಚು. ನೀವು ಮಾಡುತ್ತಿರುವುದು ಹೇಗಿದೆ ಎಂದರೆ:—

The Britsh Cabinet cannot make a woman into a man and a man into a woman. But you can make a man into a woman and a woman into a man.

ಇನ್ನೊಂದು ವಿಷಯ. ಪಬ್ಲಿಕ್ ವರ್ಕ್ಸ್ ಇಲಾಖೆಯನ್ನು ತೆಗೆದುಕೊಂಡರೆ, ಅಲ್ಲಿ ಪೊಲಿಟಿಕಲ್ ಪ್ರಾಜೆಕ್ಟ್‌ಗಳು ಬಹಳ ಜಾಸ್ತಿಯಾಗಿವೆ. ಯಾವನು ಕಾಂಗ್ರೆಸ್ಸಿಗೆ ವಿರೋಧವಾಗಿದ್ದಾನೋ ಅವನ ತೋಟ, ಹೊಲ, ಗದ್ದೆ ಎಲ್ಲವನ್ನೂ ಮುಳುಗಿಸಿ ಬಿಡುವುದು; ಯಾವನು ಕಾಂಗ್ರೆಸ್ಸಿಗೆ ಸರಿಯಾಗಿದ್ದಾನೋ ಅವನನ್ನು ಉದ್ಧಾರ ಮಾಡಿ ಬಿಡುವುದು. ಈ ರೀತಿ ನಡೆಯುತ್ತಿದೆ.

3 P.M.

ಶ್ರೀ ಬಿ. ಬಸವಲಿಂಗಪ್ಪ (ಒಳಾಡಳಿತ ಶಾಖಾ ಉಪಸಚಿವರು).—ಅದು ಯಾವುದು, ಹೇಳಿ.

ಶ್ರೀ ಜಿ. ಎಚ್. ಪುಟ್ಟಣ್ಣ.—ಆಮೇಲೆ ಬೇಕಾದರೆ ಹೇಳುತ್ತೇನೆ. ಇಂಥ ಪೊಲಿಟಿಕಲ್ ಪ್ರಾಜೆಕ್ಟ್‌ಗಳು ಎಷ್ಟೋ ಇವೆ.

ಶ್ರೀ ಬಿ. ಬಸವಲಿಂಗಪ್ಪ.—ಎಷ್ಟಿವೆ?

ಶ್ರೀ ಜಿ. ಎಚ್. ಪುಟ್ಟಣ್ಣ.—ನಾಲ್ಕಾರು ಈಗಲೇ ಕೊಡಬಲ್ಲೆ.

ಅಧ್ಯಕ್ಷರು.—ಆ ಪೊಲಿಟಿಕಲ್ ಪ್ರಾಜೆಕ್ಟುಗಳ ವಿಚಾರ ಇಲ್ಲಿ ಬರುವುದಿಲ್ಲ.

ಶ್ರೀ ಜಿ. ಎಚ್. ಪುಟ್ಟಣ್ಣ.—ನಿಮ್ಮ ಪ್ರಾಜೆಕ್ಟ್ ಆಫೀಸರುಗಳು ಬಂದಿರುವುದು ಮೂರುಮುಕ್ಕಾಲು ಪಾಲು ಏಳು ತಿಂಗಳಿಗೆ ಹುಟ್ಟಿರುವವರು.

ಮತ್ತೊಂದು ವಿಷಯ. ಇದೇ ಕ್ಯಾಬಿನೆಟ್ಟಿನಲ್ಲಿ ನಮ್ಮ ಡಿಸ್ಟ್ರಿಕ್ಟಿನಿಂದ ಇಬ್ಬರು ಮಂತ್ರಿಗಳನ್ನು ಸೇರಿಸಿದ್ದೀರಿ. ತುಮಕೂರಿನಲ್ಲಿ ಒಂದು ಕಾಲೇಜಿದೆ. ಇಡೀ ಮೈಸೂರು ದೇಶದಲ್ಲಿ ತುಮಕೂರು ಡಿಸ್ಟ್ರಿಕ್ಟು ತೀರ ಹಿಂದುಳಿದಿದೆ. ಅಲ್ಲಿನ ಕಾಲೇಜು ಆಗಿ 13 ವರ್ಷಗಳಾದವು. ಇಷ್ಟು ದಿವಸಗಳಾದರೂ ಒಂದು ಕಾಸು ಕೂಡ ಗ್ರ್ಯಾಂಟು ಕೊಟ್ಟಿಲ್ಲ. ಕಾಲೇಜಿನ ಲೆಕ್ಚರರುಗಳನ್ನು, ಅಧ್ಯಾಪಕರುಗಳನ್ನು, ನೇಮಕ ಮಾಡುವುದರಲ್ಲಿ ನೋಡಿದರೆ, ಅಲ್ಲಿಗೇ ಒಂದುರೀತಿ. ಹುದ್ದೆಗಳನ್ನು ಕೊಡುವುದರಲ್ಲಾಗಲಿ, ಸೀಟುಗಳನ್ನು ಕೊಡುವುದರಲ್ಲಾಗಲಿ "Marks will be taken into consideration" ಎಂದು ಸುಮ್ಮನೆ ಹೇಳಿಬಿಡುತ್ತಾರೆ. ಇಲ್ಲಿ ಬೆಂಗಳೂರು, ಮೈಸೂರಿಗಾದರೆ ಬರೀ foreign returned, ರಷ್ಯಾದಿಂದ ಓದಿಬಂದವರು, ಅಮೆರಿಕಾದಿಂದ ಓದಿಬಂದವರು—ಇಂಥವರನ್ನು appoint ಮಾಡುತ್ತಾರೆ. ಬಡ ರೈತನ ಮಕ್ಕಳಿಗೆ ವಿದ್ಯೆ ಹೇಳಿ ಕೊಡುವುದಕ್ಕೆ ಯಾರೊಬ್ಬರೂ ಸರಿಯಾದವರು ಸಿಕ್ಕುವುದಿಲ್ಲ.

ನೌಕರರ ವರ್ಗಾವಣೆ ವಿಚಾರದಲ್ಲಿ ಹೇಳುತ್ತೇನೆ. ನಾನು ನೋಡಿದ್ದರಲ್ಲಿ ಇಲಾಖಾಧಿಕಾರಿಗಳಲ್ಲಿ ಡೈರೆಕ್ಟರ್ ಆಫ್ ಮೆಡಿಕಲ್ ಸರ್ವೀಸಸ್ ಒಬ್ಬರು ಹೇಗೆ ಮಾಡುತ್ತಿದ್ದರೆಂದು ಹೇಳುತ್ತೇನೆ. ಕೇವಲ 60-70 ರೂಪಾಯಿ ಸಂಬಳ ಬರುವವರನ್ನು ದೂರ, ಇಲ್ಲಿಂದ ತೆಗೆದು ಗುಲ್ಬರ್ಗಾಕ್ಕೆ ಹಾಕಿದರೆ ಅವರೇನು ಮಾಡಬೇಕು ಎಂದು ಕೇಳಿದೆ. ಅದಕ್ಕವರು, "ನಾವು ನಾಲ್ಕು ಡಿವಿಜನ್ ಮಾಡಿಕೊಂಡಿದ್ದೇವೆ. ಈ ಡಿವಿಜನ್ನಿಂದ ಆಚೆ ಕಳುಹಿಸುವುದಿಲ್ಲ" ಎಂದು ಹೇಳಿದರು.

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಸಚಿವರು).—ಸಾಧ್ಯವಾದಷ್ಟುಮಟ್ಟಿಗೆ ಹಳೆಯ ಮೈಸೂರಿನವರೂ ಹೊರಗೆ ಹೋಗಬೇಕು. At least for the time being, they must serve outside. Emotional integration ಆಗಬೇಕು.

ಶ್ರೀ ಜಿ. ಎಚ್. ಪುಟ್ಟಣ್ಣ.—ಇನ್ನೊಂದು ಹೇಳುತ್ತೇನೆ. ಇವರಿಗೆ ಕೊಡುವ ಸಂಬಳ ಏನು ? ತಿಂಗಳಿಗೆ ಅವರಿಗೆ ಕೊಡುವ ಸಂಬಳ ಮನೆಯಲ್ಲಿ ಚಾಪೆಹಾಕಿಕೊಂಡು ಮಲಗಿಕೊಳ್ಳುವುದಕ್ಕೂ ಸಾಕಾಗುವುದಿಲ್ಲ. ಬಡ ನೌಕರರ ವಿಷಯ ನಾನು ಹೇಳುತ್ತಿದ್ದೇನೆ. ಒಂದು ಕಡೆ 1,000 ದಿಂದ 4,000 ರೂಪಾಯಿ ಸಂಬಳ ಕೊಡುತ್ತಿದ್ದೀರಿ. ಒಂದು ದಿನದ ನಾಲಿಗೆಗೆ 75 ರೂಪಾಯಿ ಕೊಟ್ಟು ತಿಂದುಬಂದಿರುವವರಿದ್ದಾರೆ. ಇನ್ನೊಂದು ಕಡೆ ತಿನ್ನುವುದಕ್ಕೇ ಸಾಲದ ಬಡ ನೌಕರರ ತಂಡವೊಂದಿದೆ. ಹೀಗೆ ವಿಪರೀತ ತಾರತಮ್ಯವೇಕೆ ಮಾಡುತ್ತಿದ್ದೀರಿ ?

ಶ್ರೀ ಟಿ. ಮರಿಯಪ್ಪ.—ಮಲ್ಲಾರಾಧ್ಯರನ್ನು ಕೇಳಿ, ಇದೂ ಸಾಕಾಗುವುದಿಲ್ಲ, ಎನ್ನುತ್ತಾರೆ.

ಶ್ರೀ ಜಿ. ಎಚ್. ಪುಟ್ಟಣ್ಣ.—ಸರ್ಕಾರದಲ್ಲಿ ಹೀಗೆ. ಒಬ್ಬರಿಗೊಂದು ಇನ್ನೊಬ್ಬರಿಗೊಂದು ಮಾಡಬಾರದು ಇಲ್ಲ, ನಮ್ಮಲ್ಲಿ ಕೆಲಸ ಮಾಡುತ್ತಿರುವ ರಿಪೋರ್ಟರುಗಳ ಸಂಬಳದ ಸ್ಕೇಲುಗಳನ್ನೇ ನೋಡಿ. ಬೊಂಬಾಯಿನಿಂದ ಬಂದವರಿಗೆ 250-500 ರೂಪಾಯಿಗಳ ಗ್ರೇಡ್ ಮದ್ರಾಸಿನಿಂದ ಬಂದವರಿಗೆ 200-400 ರೂಪಾಯಿಗಳ ಗ್ರೇಡ್ ! ಆಂಧ್ರದವರಿಗೆ 200-400 ರೂಪಾಯಿಗಳ ಸ್ಕೇಲು ! ಅದೇ ನಮ್ಮ ಮೈಸೂರಿನ ರಿಪೋರ್ಟರುಗಳಿಗೆ ನೀವು ಕೊಟ್ಟಿರುವುದು 75-275 ರೂಪಾಯಿಗಳು !!

ಶ್ರೀ ಟಿ. ಮರಿಯಪ್ಪ.—ಆಂಧ್ರದೊಡನೆ compare ಮಾಡಲಿ ; today, ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಜಿ. ಎಚ್. ಪುಟ್ಟಣ್ಣ.—ಈಗ ನಾನು yield ಆಗುವುದಿಲ್ಲ. ನೀವು ಉತ್ತರ ಕೊಡುವಾಗ ಹೇಳಿ.

ಆಮೇಲೆ, ನೀವು appointmentsಅನ್ನು ಮಾಡುವುದರಲ್ಲಿ, ಲೋವರ್ ಸೆಕೆಂಡರಿ ಕ್ಲಾಸ್, ಎಸ್.ಎಸ್.ಎಲ್.ಸಿ. ಫೇಲ್ ಆಗಿರುವವರಿಗೆಲ್ಲಾ ಕೊಡಬೇಡಿ. ಹಳ್ಳಿಯ ರೈತರಿಗೆಂದು ಹೀಗೆಲ್ಲಾ ಕೊಟ್ಟರೆ, ಅವರು ಬಿಳಿಟೋಪಿ ಹಾಕಿಕೊಂಡು ಬಂದು ಕಾಂಗ್ರೆಸ್ ಪುಢಾರಿಗಳಾಗುತ್ತಾರೆ, ಅಷ್ಟೆ ; ಅವರಿಂದೇನೂ ಕೆಲಸ ಆಗುವುದಿಲ್ಲ.

ಇನ್ನೊಂದು ವಿಚಾರ. ಅನೇಕ ಜನ ರಿಟೈರ್ ಆದವರಿಗೆ ಎರಡು-ಮೂರು ವರ್ಷಗಳಾದರೂ ಪೆನ್ಷನ್ ಬರುವುದಿಲ್ಲ. ಹೀಗಾದರೆ ಅವರು ಹೇಗೆ ಜೀವನ ಮಾಡಬೇಕು ? ಮತ್ತೊಂದು ಅವಿವೇಕವೆಂದರೆ, ಕೆಲವು ಜನ ರಿಟೈರ್ ಆದವರಿಗೆ ಐದು-ಆರು ಜನ ಮಕ್ಕಳಿದ್ದು, ಮಕ್ಕಳೆಲ್ಲಾ 1,000-2,000 ರೂಪಾಯಿಗಳ ಕೆಲಸಕ್ಕೆ ಸೇರಿಕೊಂಡಿರುತ್ತಾರೆ. ಅಂಥವರಿಗೆ ಪೆನ್ಷನ್ ಕಡಮೆ ಮಾಡಿ. ಮಕ್ಕಳುಗಳೆಲ್ಲಾ ಕೆಲಸದಲ್ಲಿದ್ದಮೇಲೆ ಅವರು ತಮ್ಮ ಅಪ್ಪ—ಅಮ್ಮಂದಿರುಗಳನ್ನು ಕಾಪಾಡುವುದು ಅವರ ಕರ್ತವ್ಯ. ಹೀಗಿರುವಲ್ಲಿ ಅವರಿಗೂ ಪೆನ್ಷನ್ ಕೊಡಿ, ಮಕ್ಕಳಿಗೂ ಹೆಚ್ಚಾಗಿ ಸಂಬಳ ಕೊಡಿ ಎನ್ನುವುದರಲ್ಲಿ ನ್ಯಾಯವಿಲ್ಲ. ಸರ್ಕಾರದ ದುಡ್ಡು ಅವರ ಅಪ್ಪನದೇ ?

ಜನರಲ್ ಅಡ್ಮಿನಿಸ್ಟ್ರೇಷನ್ನಿಗೆ ಸಂಬಂಧಪಟ್ಟಹಾಗೆಯೇ ಒಂದು ವಿಚಾರ ಹೇಳುತ್ತೇನೆ. ಮಂಡ್ಯ ಸಕ್ಕರೆ ಫ್ಯಾಕ್ಟರಿಯಲ್ಲಿ ಮೊದಲು ಒಬ್ಬರು ಚೇರ್ಮನ್ನರನ್ನಿಟ್ಟಿದ್ದರು. ಅವರು ಯೋಗ್ಯರು, ದೊಡ್ಡ ಮನುಷ್ಯರು. ಆದರೆ ಮಂತ್ರಿಗಳಿಗೆ ಸರಿಯಾಗಿ, ಅವರ ಮಂತ್ರಿತ್ವಕ್ಕೆ ತಕ್ಕಂತೆ ಒಪ್ಪಲಿಲ್ಲವೆಂದು ಹೇಳಿ ಅವರನ್ನು ಓಡಿಸಿಬಿಟ್ಟರು.

ಶ್ರೀ ಟಿ. ಮರಿಯಪ್ಪ.—ಓಡಿಸಲಿಲ್ಲ. ಅವರೇ ರಾಜಿನಾಮೆ ಕೊಟ್ಟರು.

ಶ್ರೀ ಜಿ. ಎಚ್. ಪುಟ್ಟಣ್ಣ.—ಓಡಿಸಲಿಲ್ಲ ; ಕಳುಹಿಸಿದಿರಿ. ಈಗಿರತಕ್ಕ ಚೇರ್ಮನ್ನರು ಸಕ್ಕರೆ ಹಂಚಾಣಿಕೆಯಲ್ಲಿ.........

ಶ್ರೀ ಟಿ. ಮರಿಯಪ್ಪ.—ಕುದುರೆ ಬಿಟ್ಟರೆ ಸಾಕು ಲಗಾಮು ಕಿತ್ತುಕೊಂಡು ಹೋಗುತ್ತೀರಲ್ಲಾ ! ಹಿಂದಿನ ಚೇರ್ಮನ್ನರು ಒಳ್ಳೆಯವರಾಗಿದ್ದರು ಅವರನ್ನು ಓಡಿಸಿದರು ಎಂದು ಈ ರೀತಿ ಹೇಳಿದರೆ ಹೇಗೆ!

ಶ್ರೀ ಜಿ. ಎಚ್. ಪುಟ್ಟಣ್ಣ.—ಈಗಿನ ಚೇರ್ಮನ್ನರು ಸಕ್ಕರೆ ಹಂಚಾಣಿಕೆ ಮಾಡುವುದರಲ್ಲಿ ಜನರಿಗೆ ಅನ್ಯಾಯ ಮಾಡಿದ್ದಾರೆ. ಈಗಿರುವಲ್ಲಿ, ಈಗ ಸರ್ಕಾರದವರು ಸಕ್ಕರೆಯನ್ನು ಅನ್ಯಾಯ ರೀತಿಯಲ್ಲಿ distribute ಮಾಡತಕ್ಕ ಮನುಷ್ಯನನ್ನು dismiss ಮಾಡಿ ಎಂದು ಹೇಳಿದರೆ ಏನು ತಪ್ಪು ? ರಾಜ್ಯಾಡಳಿತ ಇಂದು, "ಹಸಿಕಂತೆ ದಾಸಯ್ಯ ಎಂದರೆ, ಉದರಿದಷ್ಟೇ ಗೋವಿಂದ" ಎನ್ನುವ ಸ್ಥಿತಿಗೆ ಬಂದಿದೆ.

ಮತ್ತೊಂದು ವಿಷಯ. ಒಬ್ಬ ಸೆಕ್ರೆಟೆರಿಯವರು 600-700 ರೂಪಾಯಿ ತೆಗೆದುಕೊಳ್ಳತಕ್ಕ ಆಫೀಸರ ಹತ್ತಿರ ಹೋಗಿ ಅವರ ವಿಷಯ ಹೇಳಿದಾಗ ಅವರು ಹೇಳಿದರು "ಅವರಿಗೆ ಪ್ರಮೋಷನ್ ಕೊಡುವುದೊಂದೇ ಅಲ್ಲ, ಪದ್ಮಶ್ರೀ ಟೈಟಲ್ ಕೂಡ ಕೊಡಿಸುತ್ತೇವೆ" ಎಂದು. ಮಾಜಿ ಚೀಫ್ ಮಿನಿಸ್ಟರಿಗೆ ಇದೇ ವಿಷಯವನ್ನು ತಿಳಿಸಿದೆ ; ವಿಚಾರಿಸುತ್ತೇವೆಂದು ಹೇಳಿದರು. ಆಗಲೇ ನಾಲ್ಕೈದು ತಿಂಗಳಾದವು. ಇನ್ನೂ ಏನೂ ಮಾಡಲಿಲ್ಲ. This is the attitude of the Ministers !

(ಶ್ರೀ ಜಿ. ಎನ್. ಪುಟ್ಟಣ್ಣ)

ಆಮೇಲೆ, ನಿಮ್ಮಲ್ಲಿ Confidential report ಎನ್ನುವುದು 'ದೊಡ್ಡ ಮೋಸಕೃತ್ಯ' ಎಂದು ಹೇಳುತ್ತೇನೆ. ಇದರಲ್ಲಿ ಮಂತ್ರಿಗಳ ತಪ್ಪಿದೆಯೆಂದು ನಾನು ಹೇಳುವುದಿಲ್ಲ. ಮಂತ್ರಿಗಳಿಗೆ ಇದನ್ನೆಲ್ಲಾ ತಿಳಿದುಕೊಳ್ಳುವ ಶಕ್ತಿಯಿಲ್ಲ. ಅವರು ಜೈಲಿನಿಂದ ಸೀದಾ ಇಲ್ಲಿಗೆ ಬಂದವರು, ಮೇಲಾಗಿ ಮಂತ್ರಿಗಳು ಆಫೀಸರು ಹೇಳಿದ ಹಾಗೆ ಕೇಳಿಕೊಂಡು ಬೇಕು ಬೇಕಾದಹಾಗೆ.........

ಶ್ರೀ ಟಿ. ಮರಿಯಪ್ಪ.—ನಮ್ಮನ್ನು ನೀವು ಬಲ್ಲಿರಿ, ನಿಮ್ಮನ್ನು ನಾವು ಬಲ್ಲೆವು. ತಕ್ಕಡಿಯಲ್ಲಿ ಹಾಕಿದಾಗಲೇ ಯಾರು ಹೆಚ್ಚು ಯಾರು ಕಡಮೆ ಎಂದು ಗೊತ್ತಾಗುವುದು.

ಶ್ರೀ ಜಿ. ಎನ್. ಪುಟ್ಟಣ್ಣ.—ಇಲಾಖಾ ಮುಖ್ಯಾಧಿಕಾರಿಗಳು Confidential ರಿಪೋರ್ಟನ್ನು ಕಳುಹಿಸುವಾಗ, ತಮ್ಮ personal needs ಎಲ್ಲವನ್ನೂ ಸರಿಯಾಗಿ ಮಾಡಿದ್ದರೆ first class ರಿಪೋರ್ಟನ್ನು ಬರೆದು ಕಳುಹಿಸುತ್ತಾರೆ. ಅದನ್ನು ಮಾಡದೆ ಇದ್ದಿದ್ದರೆ "worst type" ಎಂದ ಚಿತ್ರಿಸಿ ಕಳುಹಿಸುತ್ತಾರೆ. ನಾನು ಫುಡ್ ಅಸಿಸ್ಟೆಂಟ್ ಆಗಿದ್ದಾಗ ಒಬ್ಬರು ಡೆಪ್ಯುಟಿ ಕಮಿಷನರು "ಎರಡು ಮೂಟೆ ಅಕ್ಕಿ ಕಳುಹಿಸಿ ಕೊಡಿ" ಎಂದು ನನಗೆ ಹೇಳಿದರು. ನಾನು 'ಆಗುವುದಿಲ್ಲ' ಎಂದಿದ್ದಕ್ಕೆ ನನ್ನಮೇಲೆ adverse ಆಗಿ ರಿಪೋರ್ಟ್ ಕಳುಹಿಸಿದರು. ಅದಕ್ಕೆ ಹಿಂದೆ ನನ್ನ 25 ವರ್ಷದ ಅನುಭವದಲ್ಲಿ glowing reportಗಳನ್ನು ಕಳುಹಿಸಿದರು. ಈಗ ಎರಡು ಮೂಟೆ ಕಳುಹಿಸಲಿಲ್ಲವೆಂದು ಹೀಗಾಯಿತು.

ನಾನು ಆಗ ಕಾನ್ಫಿಡೆನ್ಷಿಯಲ್ ರಿಪೋರ್ಟನ್ನು ಕುರಿತು protest ಮಾಡಿದೆ; erase ಮಾಡಿದರು. ಇದು ಹಳೆಯದಲ್ಲ.

ಅಧ್ಯಕ್ಷರು.—ಅಡ್ಮಿನಿಸ್ಟ್ರೇಷನ್ ಅಂದರೆ ಈಗಿನ ಅಡ್ಮಿನಿಸ್ಟ್ರೇಷನ್. ಎಲ್ಲೋ ಹಳೆಯದನ್ನು ತೆಗೆದುಕೊಂಡುಬಂದು ಹೇಳಿದರೆ, ಏನು ಉಪಯೋಗ ?

ಶ್ರೀ ಜಿ. ಎನ್. ಪುಟ್ಟಣ್ಣ.—ಇವೊತ್ತೂ ಅದೇತರಹ ನಡೆಯುತ್ತಾ ಇದೆ. ಐ.ಎ.ಎಸ್.ಗೆ ಸೆಲೆಕ್ಟ್ ಮಾಡುವಾಗ ಕಾನ್‌ಫಿಡೆನ್ಷಿಯಲ್ ರಿಪೋರ್ಟ್‌ಮೇಲೆ ಮಾಡಲಾಗುತ್ತಿದೆ. ಇದು ಸರಿಯಲ್ಲ ಎಂದು ಹೇಳುತ್ತೇನೆ. ಈ ವಿಚಾರದಲ್ಲಿ ಮಂತ್ರಿಗಳಿಗೆ ಬರೆದಿದ್ದೇನೆ. ಮಾನ್ಯ ಮಂತ್ರಿಗಳಾದ ಮರಿಯಪ್ಪನವರು ಏನೋ ಹೇಳಿದರೆ ಕೇಳಿಬಿಡುವುದಕ್ಕಾಗುತ್ತದೆಯೇ ?

ಆಂಟಿ-ಕರಪ್ಷನ್ನಿನ ಡೈರೆಕ್ಟರು ಬಹಳ ಎಫಿಷಿಯಂಟ್ ಮ್ಯಾನ್, ಜಂಟಲ್‌ಮನ್, ದೊಡ್ಡವರು, ಮತ್ತು ಯೋಗ್ಯರು. ಆದರೆ ಅವರ ಕೈಕೆಳಗೆ ಕೆಲವು ಹೆಗ್ಗಣಗಳು ಸೇರಿಬಿಟ್ಟಿವೆ. ಇದರಿಂದ ಅನೇಕ ಬಡನೌಕರರು ಬಹಳ ಸಫರ್ ಮಾಡುತ್ತಾ ಇದ್ದಾರೆ. ಹೀಗಾದರೆ ನಮಗೂ ನಿಮಗೂ, ದೇಶಕ್ಕೂ ಒಳ್ಳೆಯದಲ್ಲ. ಹೀಗೆ ತೊಂದರೆ ಕೊಡುವುದು ಬಹಳ ತಪ್ಪು! ಇದನ್ನು ನೀವು ತಪ್ಪಿಸಬೇಕು. ಅಧಿಕಾರಿಗಳು ಭೇದಭಾವವಿಲ್ಲದೆ ಕೆಲಸ ಮಾಡಲಿ. ಡೈರೆಕ್ಟರು ಕೂಲಂಕಷವಾಗಿ ಈ ವಿಷಯವನ್ನು ನೋಡುತ್ತಾ ಇದ್ದಾರೆಂದು ಕೇಳುತ್ತೇನೆ. ಈ ಆಫೀಸಿನಲ್ಲಿ ಕೆಲವರು ಸೇರಿಕೊಂಡು ಬಹಳ ಅನ್ಯಾಯ ನಡೆಯುತ್ತಾ ಇದೆ. ಆದ್ದರಿಂದ ಇದು ನಿಮ್ಮ ಮನಸ್ಸಿನಲ್ಲಿರಲಿ.

ಇನ್ನೊಂದು ದೊಡ್ಡ ವಿಷಯವಿದೆ; ವ್ಯವಸಾಯದ ಇಲಾಖೆ ಸಚಿವರು ಇಲ್ಲಿಲ್ಲ. ವ್ಯವಸಾಯದ ಇಲಾಖೆಯಲ್ಲಿ ತುಮಕೂರು ಗೋಡೌನಿನಲ್ಲಿ 43,900 ರೂಪಾಯಿ ಮಿಸ್ ಅಪ್ರೋಪ್ರಿಯೇಷನ್ ಆಗಿದೆ; ನಮ್ಮ ವ್ಯವಸಾಯ ಇಲಾಖೆ ಮಂತ್ರಿಗಳು ಅದನ್ನು ಒಪ್ಪಿಕೊಂಡಿದ್ದಾರೆ. ಆ ಕೇಸನ್ನು ತೆಗೆದುಕೊಂಡು ನೋಡಿದರೆ, ನಮ್ಮ ಮೈಸೂರು ರಾಜ್ಯದಲ್ಲಿ ಎಷ್ಟು ಅನ್ಯಾಯ ನಡೆಯುತ್ತಿದೆ ಎನ್ನುವುದು ಗೊತ್ತಾಗುತ್ತದೆ. ಇದೂ ಅಲ್ಲದೆ ಅನ್ಯಾಯ ಮಾಡತಕ್ಕಂಥವರಿಗೆ ಪ್ರಮೋಷನ್ ಕೊಡುತ್ತೀರಿ. ತುಮಕೂರಿನಲ್ಲಿ ಒಂದುಕಡೆ 43,900 ರೂಪಾಯಿ ಮಿಸ್‌ಅಪ್ರೋಪ್ರಿಯೇಷನ್ ನಡೆದಿದೆ ಎಂದು ರಿಪೋರ್ಟು ಬಂದಿದೆ. ಮಿಸ್ ಅಪ್ರೋಪ್ರಿಯೇಟ್ ಮಾಡಿದ ಅಫಿಷಿಯಲ್ ಎರಡು ಬಸ್ಸುಗಳನ್ನು ಇಟ್ಟುಕೊಂಡು ಖುಷಿಯಾಗಿ, ಸುಖವಾಗಿ ಇದ್ದಾನೆ. ಸತ್ಯವಾಗಿ ಕೆಲಸ ಮಾಡಿದವನನ್ನು ಸಸ್‌ಪೆನ್‌ಷನ್ನಿನಲ್ಲಿ ಇಟ್ಟಿದ್ದಾರೆ. ಇದನ್ನು ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಈ ವಿಷಯದಲ್ಲಿ ಡಿಸ್ಟ್ರಿಕ್ಟ್ ಜಡ್ಜರು ರೂಲಿಂಗು, ಜಜ್‌ಮೆಂಟ್ ಕೊಟ್ಟಿದ್ದಾರೆ. ಆದರೂ ಅನ್ಯಾಯ ಜರುಗುತ್ತಿದೆ. ಇಂಥ ಉದಾಹರಣೆಗಳನ್ನು ಎಷ್ಟು ಬೇಕಾದರೂ ಕೊಡುತ್ತೇನೆ.

ನಿಜವಾಗಿಯೂ ನಿಮಗೆ ಒಳ್ಳೆಯ ಹೆಸರು ಬೇಕು, ನಮ್ಮ ದೇಶ ಮುಂದುವರಿಯಬೇಕಾದರೆ, ಕೆಳದರ್ಜೆ ನೌಕರರ ಸಂಬಳ ಜಾಸ್ತಿಯಾಗಬೇಕು. ಸಾವಿರ ರೂಪಾಯಿಗಿಂತ ಹೆಚ್ಚಿಗೆ ಸಂಬಳ ಕೊಡಬೇಡಿ; ಹೆಚ್ಚಿಗೆ ಬರುವವರಿಗೆ ಕಡಮೆಮಾಡಿ. ಆಂಧ್ರ ಪೇಸ್ಕೇಲುಗಳ ವಿಷಯದಲ್ಲಿ ನಾನು ಹೋಲಿಸಿ ಹೇಳಿರುವುದನ್ನು ನೀವು ರಿಪ್ಲೈನಲ್ಲಿ ಹೇಳಬೇಕು. ಈ ನಮ್ಮ ನೌಕರರಿಗೆ ಅನ್ಯಾಯ ನಡೆಯುತ್ತಾ ಇದೆ. ಈ ತರಹ ಅನ್ಯಾಯ ಮಾಡುವುದು ಸರಿಯಲ್ಲ. ನಿಮಗೆ ಕೆಟ್ಟ ಹೆಸರು ತರುವವರು ಹೊರಗಡೆಯವರಲ್ಲ. ಕಾಂಗ್ರೆಸ್ ಸಂಸ್ಥೆಯ ತಳಬೇರು ಕೊಳೆತುಹೋಗಿದೆ; ಮಗ್ಗಲು ಬೇರು ಮುಗ್ಗಿಹೋಗಿವೆ. ಕಾರಣ, ನಿಮಗೆ ವಿರೋಧವಾಗಿರುವವರು ದೇಶದ ಜನಗಳಲ್ಲ. ವಿರೋಧಪಕ್ಷದವರಲ್ಲ, ನಿಮ್ಮ ಕಾಂಗ್ರೆಸ್ಸಿನಲ್ಲಿಯೇ ಇರುವವರು. ಕಾಂಗ್ರೆಸ್ಸೇ ರಾಜ್ಯಭಾರ ಮಾಡಲಿ. ಆದರೆ ಸತ್ಯದಿಂದ ರಾಜ್ಯಭಾರ ಮಾಡಿ.

ಮಾನ್ಯ ಅಧ್ಯಕ್ಷರಿಗೆ ವಂದನೆಮಾಡಿ, ನಿಮ್ಮ ಈ ಡಿಮ್ಯಾಂಡನ್ನು ಪೂರ್ಣವಾಗಿ ವಿರೋಧ ಮಾಡಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

The House adjourned for recess at Fifteen Minutes past Three of the Clock and re-assembled at Fifty Minutes past Three of the Clock.

[MR. SPEAKER in the Chair.]

ಶ್ರೀ ಎಸ್. ಸುಬ್ಬಯ್ಯನಾಯಕ್ (ಪುತ್ತೂರು).—ಮಾನ್ಯ ಅಧ್ಯಕ್ಷರೇ, ಸಾಮಾನ್ಯ ಆಡಳಿತದ ಡಿಮ್ಯಾಂಡಿಗೆ ಒದಗಿಸಲಾಗಿದ್ದಂಥ ಹಣವನ್ನು ನಾನು ಸಂಪೂರ್ಣವಾಗಿ ಸಮರ್ಥಿಸಿ ಈ ವಿಚಾರದಲ್ಲಿ ಒಂದೆರಡು ಸೂಚನೆಗಳನ್ನು ಕೊಡಬಯಸುತ್ತೇನೆ. ನಮ್ಮ ಸರ್ಕಾರದ ಆಡಳಿತ ಕಾರ್ಯಶೀಲತೆಯಿಂದಲೂ ಮತ್ತು ಸತತ ಪ್ರಯತ್ನದಿಂದಲೂ ಕೂಡಿದೆಯೆಂದು ನಾನು ಖಂಡಿತವಾಗಿ ಹೇಳುತ್ತೇನೆ. ಆದ್ದರಿಂದಲೇ ಸರ್ಕಾರದಲ್ಲಿ ಗೊಂದಲವಿಲ್ಲದೆ ನಿರ್ವಿಘ್ನವಾಗಿ ಆಡಳಿತ ಸಾಗುತ್ತಲಿದೆಯೆಂದು ಹೇಳಬಹುದು. ಆದರೂ ಕೂಡ ಲೋಪದೋಷಗಳೇ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ.

ಏಕೆಂದರೆ ಇಷ್ಟು ದೊಡ್ಡ ಸಂಸ್ಥೆಯಲ್ಲಿ ಲೋಪದೋಷ ಗಳು ಇರುವುದು ಸ್ವಾಭಾವಿಕ. ಏಕೆಂದರೆ ಐದು ಭಿನ್ನ ಭಿನ್ನ ಆಡಳಿತ ಪ್ರದೇಶಗಳು ನಮ್ಮ ಮೈಸೂರಿಗೆ ಬಂದಿವೆ. ಅಲ್ಲಿನ ಭಾಷೆ ಒಂದೇ ಆದರೂ ಪ್ರತ್ಯೇಕ ಪ್ರತ್ಯೇಕವಾದ ಆಡಳಿತವಿತ್ತು. ಅದರಲ್ಲೂ ಎ.ಬಿ.ಸಿ. ಎನ್ನುವ ಬೇರೆ ಬೇರೆ ಪ್ರದೇಶಗಳಿಂದ ನಾವು ಬಂದು ಒಂದು ಗೂಡಿದ್ದೇವೆ. ಆದ್ದರಿಂದಲೇ ಆಡಳಿತ ಸ್ವಲ್ಪ ಸಮಸ್ಯಾರೀತಿಯಲ್ಲಿರುವುದಕ್ಕೆ ಕಾರಣ. ಇಂತಹ ಸಮಸ್ಯೆಗಳನ್ನು ಸುಲಭವಾಗಿ ನೆರವೇರಿಸಲು ಸಾಧ್ಯ ವಿಲ್ಲ. ಕಾರ್ಯತಃ ಸರ್ಕಾರದಲ್ಲಿ ಕೆಲಸ ಮಾಡುವವರಿಗೆ ಕಷ್ಟಸಾಧ್ಯವಾಗುತ್ತದೆ. ಸದ್ಯಕ್ಕೆ ಇದನ್ನು ಬಿಡಿಸ ಲಾಗದ ಸಮಸ್ಯೆಯೆಂದು ಹೇಳುವುದಕ್ಕಾಗುವುದಿಲ್ಲ. ಅದು ಬಿಡಿಸುವುದಕ್ಕಾಗುವ ಪ್ರಶ್ನೆಯೇ. ಅಂಥಾದ್ದನ್ನು ಬಿಡಿಸುವುದಕ್ಕೆ ಸರ್ಕಾರದವರು ಸಮರ್ಥರಾಗುತ್ತಿದ್ದಾರೆಂದು ನಾನು ಖಂಡಿತವಾಗಿ ಆಶೋತ್ತರವನ್ನು ಇಟ್ಟು ಕೊಳ್ಳುತ್ತೇನೆ. ಮುಖ್ಯವಾಗಿ ಆಗಾಗ್ಗೆ ಸರ್ಕಾರದ ವರು ಇಂತಹ ಸಮಸ್ಯೆಗಳನ್ನು ಪರಿಹರಿಸುವುದರಲ್ಲಿ ಭರವಸೆ ಕೊಡುತ್ತಾರೆಂದು ನಾನು ನಂಬಿದ್ದೇನೆ. ಈಗ ಏಕೀ ಭಾವನೆ ಪ್ರಯತ್ನ ನಡೆಯುತ್ತದೆಂದು ಹೇಳಿದ್ದಾರೆ. ಈಗ ಹೇಳಿದಷ್ಟು ಏಕೀಭಾವ ಆಗು ತ್ತದೋ ಇಲ್ಲವೋ, ಐಕ್ಯತೆಯ ಬದಲು ಮತ್ತೆ ದೂರ ದೂರ ಹೋಗುತ್ತದೆಯೋ ಏನೋ ಎಂದು ಕಾಣು ತ್ತದೆ. ಇದನ್ನು ಸ್ವಲ್ಪ ವಿಚಾರ ಮಾಡಬೇಕು. ಕಾಸರ ಗೋಡ್ ತಾಲ್ಲೂಕಿಗೆ ಲಗ್ತಿಯಾಗಿ ಪುತ್ತೂರು ತಾಲ್ಲೂಕು ಇದೆ. ಅಲ್ಲಿ ಅಡಿಕೆ, ಬತ್ತ, ತೆಂಗು, ಕರಿ ಮೆಣಸು ಇವು ಚೆನ್ನಾಗಿ ಉತ್ಪತ್ತಿ ಆಗುತ್ತವೆ. ಆದರೆ ಅಲ್ಲಿ ಆಡಳಿತ ದೃಷ್ಟಿಯಿಂದ, ಈ ಬೆಳೆಗಳ ಉತ್ಪತ್ತಿ ದೃಷ್ಟಿಯಿಂದ ಜನರಿಗೆ ಬಹಳ ತೊಂದರೆಯಾಗಿದೆ. ಆದ ಕಾರಣ ಕಾಸರಗೋಡು ತಾಲ್ಲೂಕನ್ನು ಕರ್ಣಾಟಕಕ್ಕೆ ಸೇರಿಸಲು ಸರ್ಕಾರದವರು ಪ್ರಯತ್ನ ಪಟ್ಟಿರುವುದು ಸಾಕಷ್ಟು ಇಲ್ಲ. ಅಲ್ಲಿನ ಕನ್ನಡ ಜನರಿಗೆ ಬಹಳ ಕಷ್ಟ ವಿದೆ. ಇವತ್ತು ಸಹ ಅಲ್ಲಿಂದ ಕಾಗದಗಳನ್ನು ಬರೆಯು ತ್ತಿದ್ದಾರೆ. Text books ಮಲೆಯಾಳದಲ್ಲಿರು ವುದನ್ನು ಕನ್ನಡಕ್ಕೆ ಭಾಷಾಂತರಿಸಬೇಕು. ಟೆಕ್ಸ್ಟ್ ಬುಕ್ಸ್ ಕನ್ನಡ ಭಾಷೆಯಲ್ಲಿರಬೇಕಾಗುತ್ತದೆ. ಇದ ರಿಂದ ಹುಡುಗರು ಯಾವುದನ್ನು ಅನುಸರಿಸಬೇಕೆಂ ಬುದು ಕಷ್ಟವಾಗುತ್ತದೆ. ಪಾಠಪ್ರವಚನಗಳು ಹುಡು ಗರಿಗೆ ಸರಿಯಾಗಿ ಆಗದೆ ಬೇರೆ ಬೇರೆ ಕಷ್ಟಗಳನ್ನು ಜನರು ಕಾಣುತ್ತಿದ್ದಾರೆ. ಸಂಸ್ಕೃತಿಗೆ ಧಕ್ಕೆ ಬಂದಿದೆ. ಅಲ್ಲಿ 'ಓಣಂ' ಆಚರಿಸುತ್ತಾರೆ. ನಮ್ಮ ದಸರಾಕ್ಕೆ ಶಾಲೆಗಳಲ್ಲಿ ರಜೆ ಇಲ್ಲ. ಕಾಸರಗೋಡು ತುಳು ಭಾಷೆ ಮಾತನಾಡುವ ಪ್ರದೇಶ. ಇದರಿಂದ ಜನಗಳಿಗೆ ಅವ ರೊಂದಿಗೆ ಕಲೆತು ಮಾತನಾಡುವುದಕ್ಕೆ ಬಹಳ ತೊಂದರೆ ಯಾಗಿದೆ. ಕನ್ನಡ ಜನಗಳ ಮನಸ್ಸಿಗೆ ಬಹಳ ನೋವು ಆಗಿದೆ.

ಇನ್ನೊಂದು ವಿಷಯ. ಷೆಡ್ಯೂಲ್ಡ್ ಟ್ರೈಬ್ಸ್ ವಿಷಯವಾಗಿ ಹೇಳುವುದಾದರೆ, ಇಡೀ ದಕ್ಷಿಣ ಕನ್ನಡ ಜಿಲ್ಲೆಯ ಗುಡ್ಡಗಾಡು ಜನರು ಭಗೀರಥ ಪ್ರಯತ್ನ ಪಟ್ಟು ತಮ್ಮ ಏಳಿಗೆಯ ಬಗ್ಗೆ ಒಂದು ಸಾವಿರ ರೂಪಾಯಿಗಳನ್ನು ಕೂಡಿಸಿ ಒಂದು ವಿದ್ಯಾರ್ಥಿಭವನ ವನ್ನು ಸ್ಥಾಪಿಸಿದರೂ ಈಗ ಅಲ್ಲಿಂದ ಹಣ ಕೇಳಲು ಹೋದಾಗ, ಬರೀ ಕೈಯಲ್ಲಿ ಬಂದಿದ್ದಾರೆ. ನಮಗೆ ಹಣ ಕೇಳಿದರೆ ಸಿಕ್ಕುತ್ತಿಲ್ಲ. ಆದಕಾರಣ ಈ ವಿಚಾರ ದಲ್ಲಿ ಸ್ವಲ್ಪ ತೊಂದರೆಯಾಗಿದೆ.

ಇನ್ನು ಏಕೀಕರಣದ ದಾರಿಯಲ್ಲಿ ಇನ್ನೂ ಕೆಲವು ವಿಘ್ನಗಳೂ ತೊಂದರೆಗಳೂ ಆಗುತ್ತಿವೆ. ಸೀನಿಯಾರಿಟಿ ಲಿಸ್ಟ್ ಎಷ್ಟು ಬೇಗ ಆಗಬೇಕಾಗಿತ್ತೋ ಅಷ್ಟು ಬೇಗ ತಯಾರಾಗದೆ ಮತ್ತೆ ಮತ್ತೆ ನಿಧಾನವಾಗುತ್ತಿರು ವುದು ನಮ್ಮ ಕ್ಷೇತ್ರದ ಜನಗಳಿಗೆ ಬಹಳ ನಿರಾಶೆ ಯನ್ನುಂಟುಮಾಡಿದೆ. ಏಕೆಂದರೆ ನ್ಯಾಯ ಒದಗಲಿಲ್ಲ ಎಂದು ಹೇಳುವುದಕ್ಕೆ ಒಂದು ಉದಾಹರಣೆ ಕೊಡು ತ್ತೇನೆ. ಇಂಜಿನಿಯರಿಂಗ್ ಇಲಾಖೆಯಲ್ಲಿ ಬಹಳ ಅಸೌಕರ್ಯವನ್ನೂ, ಅನಾನುಕೂಲವನ್ನೂ ಉಂಟುಮಾ ಡಿದ್ದಾರೆ. ಅಸಿಸ್ಟೆಂಟ್ ಇಂಜಿನಿಯರೊಬ್ಬರಿಗೆ ಅವರ ಸೀನಿಯಾರಿಟಿ ಲಿಸ್ಟಿನಲ್ಲಿ ವಿಶೇಷವಾದ ಅನ್ಯಾಯವನ್ನು ತೋರಿಸಿದ್ದಾರೆ. ಒಂದೇ ರೀತಿ ಕೆಲಸ ಮಾಡುವವರಿಗೆ ಸರ್ಕಾರದವರು ಇಷ್ಟು ಮನಸ್ಸಿಗೆ ವ್ಯಥೆಯನ್ನುಂಟು ಮಾಡಿ ಅವರನ್ನು ನಿರಾಶೆಗೀಡುಮಾಡುತ್ತಾರೆ. ಈ ದೃಷ್ಟಿಯಿಂದ ಯೋಚಿಸಿದರೆ ನಮಗೇನು ಮನವರಿಕೆ ಯಾಗುತ್ತದೆಂದರೆ ಇನ್ನೂ ಕೆಲವು ಪ್ರೋಬೇಷನರಿ ನೌಕರಿಗಳು ಮತ್ತು ಎಮರ್ಜೆನ್ಸಿ ನೌಕರಿಗಳಲ್ಲಿಯೂ ಇದೇ ರೀತಿಯಾದ ಅನ್ಯಾಯ ನಡೆಯುವುದರಿಂದಲೇ ಅನೇಕ ಜನರು ಬಹಳ ನಿರುತ್ಸಾಹಿಗಳಾಗಿ ಕೆಲಸ ಮಾಡುವುದಕ್ಕೆ ಕಾರಣವಾಗುತ್ತದೆ. ಅದನ್ನು ಕೂಡಲೇ ಹೋಗಲಾಡಿಸಬೇಕೆಂದು ಸಂಬಂಧಪಟ್ಟ ಅಧಿಕಾರ ವರ್ಗದವರಲ್ಲಿ ಕೇಳುತ್ತೇನೆ. ಈ ವಿಚಾರದಲ್ಲಿ ಮೈಸೂರು ಗೆಜೆಟ್ಟಿನಲ್ಲಿ ಕೊಟ್ಟಂಥ ಆಶ್ವಾಸನವನ್ನು ನೆರವೇರಿಸಲಿಲ್ಲವೆಂದು ನಾನು [illegible]ಯಸುತ್ತೇನೆ. ತಾರೀಖು 18ನೆಯ ಏಪ್ರಿಲ್ 1957ರ ಮೈಸೂರು ಗೆಜೆಟ್ಟಿನ 170ನೆಯ ಪುಟದಲ್ಲಿ ಹೀಗೆ ಹೇಳಿದೆ :

"In determining the relative seniority between persons holding posts declared equivalent to each other and drawn from different States, the length of continuous service permanent or temporary on a particular date has been taken into consideration."

4 P.M.

ಈ ರೀತಿ ಇಲ್ಲಿ ಹೇಳಿರುವ ಪ್ರಕಾರ ಸರ್ಕಾರದವರು ನಿಜವಾಗಿ ನೆರವೇರಿಸದೆ ಇರುವುದರಿಂದ ಇಲಾಖೆಯಲ್ಲಿ ರುವ ಉದ್ಯೋಗಸ್ಥರು ಬಹಳ ಕಳವಳಪಡತಕ್ಕ ಸ್ಥಿತಿಯಲ್ಲಿದ್ದಾರೆ. ಇದರಿಂದ ಪ್ರತಿಯೊಂದು ಆಡಳಿತ ಹಿತಕ್ಕೂ ದೋಷ ಉಂಟಾಗಿದೆ. ಹೀಗೆ ಆಡಳಿತ ದೃಷ್ಟಿಯಿಂದ ನಮ್ಮ ಪ್ರಜಾಸರ್ಕಾರ ಬಂದನಂತರ ನಿಜವಾಗಿ ಅಧಿಕಾರಿಗಳೆಲ್ಲಾ ಕೇಂದ್ರೀಕೃತವಾಗಿರುವುದು ವಿಕೇಂದ್ರೀಕೃತವಾಗಿ ಬರುವ ಪ್ರಯತ್ನದಲ್ಲಿ ಹಿಂದಿದ್ದಾರೆ. ಏಕೆಂದರೆ ನಮ್ಮ ಜಿಲ್ಲೆಯಲ್ಲಿ ಜಿಲ್ಲಾ ಸಬ್‌ರಿಜಿಸ್ಟ್ರಾರ್ ಅವರಿಗೆ ಇದ್ದ ಅಧಿಕಾರವನ್ನು ಜಿಲ್ಲಾ ಡೆಪ್ಯುಟಿ ಕಮಿಷನರಿಗೆ ವಹಿಸಿಕೊಟ್ಟು ಆ ಹುದ್ದೆಯನ್ನು ರದ್ದುಪಡಿಸಿದ್ದಾರೆ. ಸರ್ಕಾರಕ್ಕೆ ಉತ್ಪತ್ತಿ ಬರುವ ಮತ್ತು ದಕ್ಷತೆ ತೋರಿ ಸುವ ಶಾಖೆಯಲ್ಲಿ ಲೋಪವಾಗಿರುವುದರಿಂದ ಅದು ನಿಜವಾದ ಕಾರ್ಯ ಮಾಡುತ್ತಿದೆಯೇ ಎಂದರೆ ಅದಕ್ಕೆ ಸರ್ಕಾರ ಗಮನ ಕೊಡಲಿಕ್ಕಾಗಲಿಲ್ಲ. ಏಕೆಂದರೆ ಅಲ್ಲಿ ತನಿಖೆಗಳನ್ನು ನಡೆಸಲಿಕ್ಕೆ ಡೆಪ್ಯುಟಿ ಕಮೀಷನರ್ ಹೋಗಬೇಕು. ಕ್ಲಾರ್ಕ್ ಜತೆಗೆ ಕರೆದುಕೊಂಡು ಹೋಗಬೇಕು. ರೆಕಾರ್ಡ್ಸ್ ಹೇಗಿದೆ ಎಂಬುದು ಕ್ಲಾರ್ಕಿಗೆ ಗೊತ್ತಿದೆ. ಅಲ್ಲದೆ ಮೇಲಧಿಕಾರಿಗಳು ಮೇಲ್ವಿಚಾರಣೆ ನಡೆಸುವ ಸ್ಥಿತಿಯಲ್ಲಿ ಇಲ್ಲ. ಮಂಗ ಳೂರು ಸಬ್‌ರಿಜಿಸ್ಟ್ರಾರ್ ಆಫೀಸು ಮನಸ್ಸಿಗೆ ವ್ಯಥೆ ಯಾಗುವ ಸ್ಥಿತಿಯಲ್ಲಿದೆ. ಅಲ್ಲಿಗೆ ಮೇಲ್ಮಟ್ಟದ ಅಧಿ ಕಾರಿಗಳು ಅಥವಾ ಸಚಿವರೇ ಆದರೂ ಹೋಗಿ ಕೂಡ

(ಶ್ರೀ ಎಸ್. ಸುಬ್ಬಯ್ಯನಾಯಕ್)

ಬೇಕು ಎಂದರೆ, ಅಲ್ಲಿ ಹೆಚ್ಚಿಗೆ ಒಂದು ಕುರ್ಚಿಯೂ ಬೆಂಚು ಸಹ ಇಲ್ಲ. ಕಾಲು ಮುರಿದ ಹಳೆಯ ಬೆಂಚು ಗಳು ಮತ್ತು ಕುರ್ಚಿಗಳು ಇವೆ. ಅವುಗಳನ್ನು ಸುಧಾರಿಸಬೇಕು. ಈ ಸ್ಥಿತಿಯಲ್ಲಿದ್ದರೆ ಉದ್ಯೋಗಸ್ಥರಿಗೆ ಉತ್ಸಾಹ ಬರಲಿಕ್ಕಿಲ್ಲ. ಅದನ್ನು ಪರಿಶೀಲಿಸಬೇಕು ಎಂದು ಹೇಳುತ್ತೇನೆ. ಮೊದಲು ನಮ್ಮ ಜಿಲ್ಲೆಯಲ್ಲಿ ಮೂರು ಡಿವಿಜನ್ಸ್ ಇದ್ದುವು. ಅಸಿಸ್ಟೆಂಟ್ ಕಮಿಷನರ ಕಾರ್ಯಕ್ಷೇತ್ರ ಎಂದರೆ ಪುತ್ತೂರ್ ಡಿವಿಜನ್, ಮಂಗಳೂರು ಮತ್ತು ಕುಂದಾಪುರ ಡಿವಿಜನ್ ಈಗ ಎರಡೇ ಡಿವಿಜನ್ ಆಗಿದ್ದು, ಮಂಗಳೂರು ಮತ್ತು ಕುಂದಾಪುರ ಒಳಪಟ್ಟ ಒಂದು ಡಿವಿಜನ್ ಮಾಡಿರುವುದರಿಂದ ಬಹಳ ದೂರ ಹೋಗಬೇಕು. ಆದಕಾರಣ ಬ್ಲಾಕ್ ಡೆವಲಪ್‌ಮೆಂಟಿಗೆ ಯಾವ ಸಂಬಂಧಪಟ್ಟ ಅಧಿಕಾರಿಗಳು ಮಂಗಳೂರಿಗೆ ಬರಬೇಕಾಗುತ್ತದೆ. ಜನಗಳು ಪರಸ್ಪರ ಎಷ್ಟು ದೂರ ಹೋಗಬೇಕಾಗುತ್ತದೆ! ಕೆಲಸ ಸುಗಮವಾಗಿ ನೆರವೇರಲಿಕ್ಕೆ ಬಹಳ ಆತಂಕ ಉಂಟಾಗುತ್ತದೆ. ಆದ್ದರಿಂದ ಮಂಗಳೂರು ಡಿವಿಜನ್ ಪ್ರತ್ಯೇಕವಾದ ಡಿವಿಜನ್ ಕೊಟ್ಟು ಸುಗಮತೆ ಉಂಟುಮಾಡಬೇಕು ಎಂದು ಹೇಳುತ್ತೇನೆ. ಇನ್ನು ತಹಸೀಲ್‌ದಾರರ ಅಧಿಕಾರ ಸ್ಪಷ್ಟವಾಗಿಲ್ಲ, ಎಂದು ಹೇಳುತ್ತೇನೆ. ಏತಕ್ಕೆಂದರೆ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ ಕೆಲಸಕಾರ್ಯಗಳಿಗೂ ಮತ್ತು ಇವರ ಕೆಲಸ ಕಾರ್ಯಗಳಿಗೂ ಪರಸ್ಪರ ಹೊಂದಿಕೆ ಆಗಬೇಕು. ಹಾಗೆ ಹೊಂದಿಕೆ ಇಲ್ಲದೆ ಮನಃ ಕ್ಲೇಶ ಬರುವ ಸನ್ನಿವೇಶ ನಡೆಯುತ್ತದೆ. ಸರ್ಕಾರದ ಅಧಿಕಾರ ಮೂಲ ಸ್ಥಿತಿಯಲ್ಲಿರುವುದು ರೆವಿನ್ಯೂ ಖಾತೆಯಲ್ಲಿ. ತಹಸೀಲ್‌ದಾರ್ ಅವರಿಗೆ ಅಧಿಕಾರ ಮಾತ್ರ ಇರುತ್ತದೆ, ಕೆಲಸ ಇಲ್ಲ. ಬ್ಲಾಕ್‌ಡೆವಲಪ್‌ಮೆಂಟ್ ಆಫೀಸರಿಗೆ ನಿಜವಾದ ಗ್ರಾಮ ಸುಧಾರಣೆ ಕೆಲಸ ಮಾತ್ರ ಇರುತ್ತದೆ, ಅಧಿಕಾರ ಇರುವುದಿಲ್ಲ. ಸಹಜವಾಗಿ ಗ್ರಾಮದಲ್ಲಿ ಜನಗಳ ಕಷ್ಟಸುಖಗಳನ್ನು ಅರಿತು ಮಾಡಿದಂಥ ರಿಪೋರ್ಟ್ ಆಗಲಿ ಪಡೆದಂಥ ಅನುಭವ ಆಗಲಿ ಅವಕ್ಕೆ ಬೆಲೆಬಾರದಂತೆ ಹೋಗುತ್ತದೆ. ನಿಜವಾಗಿ ತಹಸೀಲ್‌ದಾರರಿಗೆ ಏನು ಅಧಿಕಾರ ಇರುತ್ತದೆ ಅದನ್ನು ಸ್ಪಷ್ಟಪಡಿಸುವುದು ಒಳ್ಳೆಯದು. ಉದಾಹರಣೆಗೆ ಹೇಳುವುದಾದರೆ, ಷೆಡ್ಯೂಲ್ ಕ್ಯಾಸ್ಟ್, ಮತ್ತು ಷೆಡ್ಯೂಲ್ ಟ್ರೈಬ್ಸ್ ಇವರ ಸುಧಾರಣೆಗಳನ್ನು ಮಾಡಲಿಕ್ಕೆ ಗ್ರ್ಯಾಂಟ್ ಇಟ್ಟಿರುತ್ತಾರೆ. ಆ ಗ್ರ್ಯಾಂಟನ್ನು ಹಂಚಿ 20ಮನೆಗಳನ್ನು ಕೊಡಬಹುದು. ಇಂಥವರಿಗೆ ಇಷ್ಟು ಕೊಡಬೇಕು ಎಂದು ಬ್ಲಾಕ್ ಡೆವಲಪ್‌ಮೆಂಟ್ ಆಫೀಸರು ತನಿಖೆ ನಡೆಯಿಸಿ ಹೇಳುತ್ತಾರೆ. ಕಾರಣ ಅವರು ನಿಜವಾದ ಸ್ಥಿತಿ ನೋಡಿರುತ್ತಾರೆ. ಆರೀತಿ ಅವರು ಕಮಿಟಿಗಳಲ್ಲಿ ಶಿಫಾರಸ್ಸು ಮಾಡಿದರೆ ತಹಸೀಲ್‌ದಾರ್ ಬೇರೆ ಯವರಿಗೆ ಶಿಫಾರಸ್ಸು ಮಾಡುತ್ತಾರೆ. ಅವರ ಪ್ರಭಾವ ಬೆಳೆಸಲಿಕ್ಕೆ ಆ ರೀತಿ ಮಾಡುತ್ತಾರೆ. 20 ಮನೆಗಳಿಗೂ ಅವರು ಬೇರೆ ಹೆಸರುಗಳನ್ನು ಕೊಟ್ಟರೆ ಕೆಲಸ ಮಾಡುವಂತವರಿಗೆ ಮನಃಕ್ಲೇಶಕ್ಕೆ ಕಾರಣವಾಗುತ್ತದೆ. ನಾನು ಹೇಳುವುದಾದರೆ ಅಧಿಕಾರವನ್ನು ಬ್ಲಾಕ್ ಡೆವಲಪ್‌ಮೆಂಟ್ ಕಮಿಟಿಗೆ ವಹಿಸಬೇಕು; ಹೀಗೆ ಅಧಿಕಾರವನ್ನು ಸ್ಪಷ್ಟಪಡಿಸಿ ಮನಃಕ್ಲೇಶ ಭಿನ್ನತೆ ಬಾರದಂತೆ ಮಾಡುವುದು ಒಳ್ಳೆಯದು ಎಂದು ನಾನು ತಿಳಿಯುತ್ತೇನೆ.

ಕನ್ನಡ ಸಂಸ್ಕೃತಿ ಪ್ರಚಾರ ವಿಷಯ ಹೇಳುವುದಾದರೆ ಕಲ್ಚರಲ್ ಡಿಪಾರ್ಟ್‌ಮೆಂಟ್‌ನವರು ಹೊರಡಿಸಿದಂತಾ ಕನ್ನಡ ಭಾರತ ಎರಡು ರೂಪಾಯಿ ಬೆಲೆ ಇದೆ. ಆ ಪುಸ್ತಕ ದಕ್ಷಿಣ ಕನ್ನಡದಲ್ಲಿ ಎಲ್ಲೂ ಸಿಕ್ಕುವುದಿಲ್ಲ, ಅಲ್ಲಿಂದ ಪತ್ರ ಬಂದಿದೆ ಬಿಕರಿಗೆ ಎಲ್ಲೂ ಸಿಕ್ಕುವುದಿಲ್ಲ ಎಂದು. ಎಷ್ಟು ಕಾಗದ ಬರೆದರೂ ಎಲ್ಲೂ ಪುಸ್ತಕ ಸಿಕ್ಕುವುದಿಲ್ಲ. ಅದರಲ್ಲೂ ಸಹ ವಂಚನೆ ಇದೆಯೆಂದು ಕಾಣುತ್ತದೆ. ಪರಸ್ಪರ ವಂಚನೆ ಅಥವಾ ಭಿನ್ನತೆ ಬಾರದ ಹಾಗೆ ಹೆಚ್ಚು ಗಮನ ಕೊಡಬೇಕು ಎಂದು ಬಿನ್ನವಿಸಿಕೊಳ್ಳುತ್ತೇನೆ.

ಸೀನಿಯಾರಿಟಿ ಲಿಸ್ಟಿನಲ್ಲಿ ಕೋಆಪರೇಟೀವ್ ಡಿಪಾರ್ಟ್‌ಮೆಂಟಿನಲ್ಲೂ ಸಹ ಇನ್ಸ್‌ಪೆಕ್ಟರುಗಳಿಗೆ ಬಹಳ ಹೆಚ್ಚು ಕಡಮೆ ಮಾಡಲಾಗಿದೆ ಎಂದು ನಿವೇದಿಸಿಕೊಳ್ಳುತ್ತೇನೆ. ಆದ್ದರಿಂದ ಸಂಬಂಧಪಟ್ಟ ಸಚಿವರು ಅದನ್ನು ಪರಿಶೀಲಿಸಿ ಅದಕ್ಕೆ ತಕ್ಕ ಪರಿಹಾರವನ್ನು ಮಾಡುತ್ತಾರೆಂದು ಭರವಸೆ ಇಟ್ಟುಕೊಂಡಿದ್ದೇನೆ. ಕೆಲಸ ಏನೂ ಸಿಕ್ಕದೆ ಸಾಮಾನ್ಯ ಜನರಿಗೆ ಆಡಳಿತ ವಿಷಯದಲ್ಲಿ ಸಂಶಯ ಅಥವಾ ನಿರಾಶೆಯಾಗುವಂಥ ಪರಿಸ್ಥಿತಿ ಬಂದಿದೆ. ಉದಾಹರಣೆಗೆ ಸುಳ್ಯ ಹೈಸ್ಕೂಲ್ ಬಿಲ್ಡಿಂಗ್ ವಿಚಾರ 1957ನೆಯ ಇಸ್ವಿಯಲ್ಲೇ ನಿವೇದಿಸಿಕೊಂಡಿದ್ದೆ. ಅದು ಈಗ ಸ್ಯಾಂಕ್ಷನ್ ಆಗಿದೆ ಎಂದು ತಿಳಿದು ಬಂದಿದೆ.

ಅಧ್ಯಕ್ಷರು.—ಆ ಪ್ರಶ್ನೆ ಇಲ್ಲಿ ಬರುವುದಿಲ್ಲ. ಅದು ನಾಳೆ ಬರುತ್ತದೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಜನರು ನೆನೆಸಿದ ಹಾಗೆ ಕೆಲಸ ಆಗುವುದಿಲ್ಲ. ಅದರಿಂದ ಆಡಳಿತಕ್ಕೆ ಕುಂದು ಬರುತ್ತದೆ ಎಂದು ಹೇಳುತ್ತೇನೆ. ನಾನು ಸ್ವತಃ D.P.I. ರವರ ಆಫೀಸಿಗೆ ಹೋದಾಗ ಉಪಾಧ್ಯಾಯರು ಎರಡು ವರ್ಷಗಳಿಂದ ಸಂಬಳವಿಲ್ಲದೆ ಕಣ್ಣೀರು ಹಾಕುವ ಪರಿಸ್ಥಿತಿಯನ್ನು ನೋಡಿದೆ. ಆ ವಿಚಾರದಲ್ಲಿ ವಿದ್ಯಾಧಿಕಾರಿಗಳನ್ನು (Dy. D.P.I.) ಕಾಣುವುದಕ್ಕಾಗಿ ಹೋಗಿದ್ದರು. ಉಪಾಧ್ಯಾಯರು ಆಫೀಸಿಗೆ ಒಂಭತ್ತು ಗಂಟೆ ಸಮಯಕ್ಕೆ ಹೋದರು. ಅವರು ನಾಲ್ಕು ಗಂಟೆಯವರೆಗೂ ಕಾದು ಕುಳಿತುಕೊಳ್ಳಬೇಕಾಯಿತು. ಪ್ರತಿಯೊಂದು ಕೆಲಸಗಳಿಗೂ ಮೇಲಧಿಕಾರಿಗಳಲ್ಲಿಗೆ ಹೋಗಬೇಕಾಗಿದೆ. ಆದ್ದರಿಂದ ಸಂಬಂಧಪಟ್ಟ ಸಚಿವರು ಅದನ್ನು ಸರ್‌ಪ್ರೈಜ್ ವಿಜಿಟ್ಟಿ ಕೊಟ್ಟು ಸರಿಪಡಿಸಬೇಕು. ಆ ವಿಷಯವನ್ನು ಜಾಗ್ರತೆ ನೆರವೇರಿಸಲಿಕ್ಕೆ ಪ್ರಯತ್ನ ಮಾಡಬೇಕು, ಎಂದು ಹೇಳುತ್ತೇನೆ. ಇಷ್ಟು ಹೇಳಿ ಅಧ್ಯಕ್ಷರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ಜನರಲ್ ಅಡ್ಮಿನಿಸ್ಟ್ರೇಷನ್ನಿಗೋಸ್ಕರ ಆಗುತ್ತಿರುವ ಬೇಡಿಕೆಯ ಚರ್ಚೆಯಲ್ಲಿ ನಾನು ನಾಲ್ಕು ಮಾತುಗಳನ್ನು ಆಡುವುದಕ್ಕೆ ಇಷ್ಟಪಡುತ್ತೇನೆ. ಮಂತ್ರಿಗಳ ಪ್ರವಾಸದ ಬಗ್ಗೆ ಅನೇಕ ಜನ ಅನೇಕ ತರಹ ಹೇಳಿದರು. ಕುಳಿತಲ್ಲಿಂದಲೇ ಕೆಲಸ ಮಾಡಬೇಕು ಎಂದು ಟೀಕೆ ಮಾಡಿದರು. ಅದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಮಂತ್ರಿಗಳು ಪ್ರವಾಸ ಮಾಡಲೇ ಬೇಕು. ಜವಾಬ್ದಾರಿ ಕೆಲಸ ಸುಗಮವಾಗಿ ನಡೆಯುತ್ತಾ ಇದೆಯೇ ಇಲ್ಲವೇ ಎಂದು ನೋಡಲೇಬೇಕು. ಕೆಲಸಕ್ಕೆ ಕುಮ್ಮಕ್ಕು ಕೊಡಲು ಹೋಗಬೇಕೇ ಹೊರತು ಹರಕತ್ತು ಮಾಡಲು ಹೋಗಬಾರದು. ಒಳ್ಳೆಯ ಕೆಲಸ ನಡೆಯುತ್ತಾ ಇರುವಾಗ ನೂರಾರು ಜನಗಳಿಗೆ ಅನುಕೂಲವಾಗುವ ಕೆಲಸ ನಡೆಯುತ್ತಾ ಇರುವಾಗ, ಅಲ್ಲಿಗೆ ಕೆಲಸವನ್ನು ನಿಲ್ಲಿಸಿ ಬಿಟ್ಟು ಬರುವುದಕ್ಕೆ ಹೋಗಬಾರದು. ಅದರಲ್ಲೂ ಮುಖ್ಯ ಮಂತ್ರಿಗಳು ಜಾಸ್ತಿ ಪ್ರವಾಸ ಮಾಡಬೇಕು. ಏತಕ್ಕೆಂದರೆ ಅಕಸ್ಮಾತ್ ಏನಾದರೂ ಅನ್ಯಾಯ ಆಗುತ್ತಾ ಇದ್ದರೆ ಅದನ್ನು ಸರಿಪಡಿಸುವ ಜವಾಬ್ದಾರಿಯನ್ನು ಅವರು ಹೊಂದಿರು

ವುದರಿಂದ ಮತ್ತು ಕ್ಯಾಬಿನೆಟ್ ಕಂಟ್ರೋಲ್ ಅವರಿಗೆ ಇರುವುದರಿಂದ ಬರೀಕಾಗದವನ್ನು ನೋಡಿ ಸಹಿ ಮಾಡಿಬಿಡುವ ಪ್ರಸಂಗ ಅನೇಕವಾಗಿ ಬರುವುದಿಲ್ಲ. ಹೆಚ್ಚು ಪ್ರವಾಸ ಮಾಡುವುದಕ್ಕೆ ಸಾಧ್ಯವಾಗದೆ ಇರಬಹುದು, ಆದರೆ ಕೆಲವು ವಿಚಾರದಲ್ಲಿ ಸ್ಥಳನೋಡಿ ವಾಸ್ತವಾಂಶ ತಿಳಿದುಕೊಂಡು ಸಹಿ ಮಾಡುವುದು ನ್ಯಾಯ. ಟೂರ್‌ಹೋಗಕೂಡದು ಎಂದರೆ ಅಲ್ಪ ಸ್ವಲ್ಪನ್ಯಾಯ ದೊರಕುವುದಕ್ಕೂ ಅವಕಾಶವಿಲ್ಲದಂತಾಗುತ್ತದೆ. ಮುಖ್ಯಮಂತ್ರಿಗಳು ಟೂರ್‌ಹೋಗುವುದು ಒಳ್ಳೆಯ ಕೆಲಸ. ಹಾಗೆ ಹೋಗಬೇಡಿ ಎಂದರೆ ರೋಗಿ ಬಯಸಿದ್ದು ಹಾಲೂ ಅನ್ನ ವೈದ್ಯ ಹೇಳಿದ್ದೂ ಹಾಲು ಅನ್ನ ಎಂದಹಾಗೆ ಅವರು ಪ್ರವಾಸ ಮಾಡುವುದೇ ಇಲ್ಲ ಎಂದು ಹೇಳುತ್ತಾರೆ. ಮಾಡಬೇಡಿ ಎಂದರೆ ಮತ್ತೂ ಅನುಕೂಲವೇ ಆಯಿತು. ನ್ಯಾಯ ದೊರಕಬೇಕಾದರೆ ಖಂಡಿತವಾಗಿಯೂ ಪ್ರವಾಸ ಮಾಡಬೇಕು. ಯಾರೇ ಆಗಲಿ ಆಸ್ಥಾನದಲ್ಲಿ ಇರುವವರೆಗೆ ಪ್ರವಾಸ ಮಾಡಲೇಬೇಕು ಮತ್ತು ನ್ಯಾಯ ದೊರಕಿಸಿ ಕೊಟ್ಟೇಕೊಡಬೇಕು ಎಂದು ಮುಖ್ಯ ಮಂತ್ರಿಗಳನ್ನು ಪ್ರಾರ್ಥಿಸಿ ಕೊಳ್ಳುತ್ತೇನೆ. ನನಗೆ ಪೋಲೀಸ್ ಡಿಮ್ಯಾಂಡಿನ ಮೇಲೆ ಮಾತನಾಡಬೇಕು ಎಂದು ಸ್ವಲ್ಪ ಅಭಿಲಾಷೆ ಇತ್ತು. ಆದರೆ ಆಗ ಅವಕಾಶಸಿಕ್ಕಲಿಲ್ಲ. ಆದ್ದರಿಂದ ಆ ವಿಷಯದಲ್ಲಿ ಎರಡು ಸೂಚನೆ ಕೊಡಬೇಕಾಗಿದೆ. ಇಂದು ಅವಕಾಶ ದೊರೆತಿರುವುದರಿಂದ ಈಗಲೇ ಅದನ್ನು ಹೇಳುತ್ತೇನೆ.

ಅಧ್ಯಕ್ಷರು.—ಪೋಲೀಸ್ ವಿಷಯವನ್ನು ಇಲ್ಲಿ ಹೇಗೆ ಹೇಳುತ್ತೀರಿ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಪೋಲೀಸ್ ಎಫಿಷಿಯೆನ್ಸಿ ಬಗ್ಗೆ ಕೆಲವು ಸೂಚನೆಗಳನ್ನು ಕೊಡುತ್ತೇನೆ. ಅದು ಜನರಲ್ ಅಡ್ಮಿನಿಸ್ಟ್ರೇಷನ್ನಲ್ಲಿ ಬರುತ್ತದೆ.

ಪೋಲೀಸ್ ಇಲಾಖೆಯ ಜನರಲ್ ಎಫಿಷಿಯೆನ್ಸಿ ಬಗ್ಗೆ ಎರಡುಮಾತುಗಳನ್ನು ಹೇಳುತ್ತೇನೆ. ಐ.ಜಿ.ಪಿ. ಅವರು ಸುಮಾರು ಇಲ್ಲಿಗೆ 15-20 ದಿವಸಗಳ ಕೆಳಗೆ ಮಹಿಳಾ ಪೋಲೀಸ್ ಅಧಿಕಾರಿಗಳ ನೇಮಕದ ವಿಚಾರದಲ್ಲಿ ಅವರೊಂದು ಕಡೆ ಭಾಷಣ ಮಾಡಿದ್ದನ್ನು ನಾನು ಪೇಪರಿನಲ್ಲಿ ನೋಡಿದೆನು. ಆದರೆ ಅದನ್ನು ಕಾರ್ಯಗತ ಮಾಡಲು ಸರ್ಕಾರದವರಿಗೇನು ತಿಂಗಳು ಗಟ್ಟಲೆ ಬೇಕೇ ಅಥವಾ ವರ್ಷಗಳ ಗಟ್ಟಲೆ ಬೇಕೇ ಎಂಬುದೇ ಗೊತ್ತಾಗುತ್ತಿಲ್ಲ. ಈ ಬಗ್ಗೆ ಒಂದು ತಕ್ಕ ಏರ್ಪಾಡನ್ನು ಮಾಡಬೇಕೆಂದು ನಾನು ಹೋದವರ್ಷ ಕೂಡ ಇದೇ ವಿಚಾರವನ್ನು ಈ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೆನು. ಆದರೆ ಸರ್ಕಾರದವರು ಈ ವಿಚಾರದಲ್ಲಿ ಇಲ್ಲಿಯವರೆಗೂ ಯಾವ ಕಾರ್ಯಕ್ರಮವನ್ನೂ ಕೈಗೊಂಡಂತೆ ಕಾಣುತ್ತಿಲ್ಲ. ಮಹಿಳಾ ಪೋಲೀಸರನ್ನು ನೇಮಕ ಮಾಡಿಕೊಂಡ ಪಕ್ಷದಲ್ಲಿ ಮುನಿಯಮ್ಮನ ಪ್ರಸಂಗದಂಥ ವಿಚಾರಗಳು ನಡೆಯಲು ಅವಕಾಶವಿರುವುದಿಲ್ಲ, ಈ ವಿಚಾರಕ್ಕೆ ಈಗಲಾದರೂ ಮುಖ್ಯಮಂತ್ರಿಗಳು ತಮ್ಮ ಗಮನಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಇತ್ತೀಚೆಗೆ ಕೆಲವು ಕಡೆ ಬ್ರಾತೆಲ್ ಹೌಸ್‌ಗಳ ಹಾವಳಿ ಬಹಳ ಜಾಸ್ತಿಯಾಗುತ್ತಿದೆ. ಮೈಸೂರಿನಲ್ಲಿ ನನ್ನ ಮನೆಯ ಹತ್ತಿರ ಇದ್ದ ಬ್ರಾತಲ್ ಹೌಸ್ ಬಗ್ಗೆ ನಾನು ಡಿ.ಎಸ್.ಪಿ.ಅವರ ಆಫೀಸಿಗೆ ಹೋಗಿ ತಿಳಿಸಿದೆನು. ಅವರು ನನ್ನಮನೆ ಹತ್ತಿರ ಇದ್ದವರನ್ನು ಆ ಸ್ಥಳದಿಂದ ಕದಲಿಸಿದರು. ಈಗ ಅದೇ ವ್ಯಭಿಚಾರ ನಡೆಸತಕ್ಕ ಮಹಿಳೆಯರು ಅದೇ ಬೀದಿಯಲ್ಲಿ ಸ್ವಲ್ಪದೂರದಲ್ಲಿ ಇನ್ನೊಂದು ಕಡೆ ನೆಲಸಿರುತ್ತಾರೆ. ಅವರ ಮನೆಗಳ ಸುತ್ತ ಮುತ್ತಲು ಚಿಕ್ಕ ಪುಟ್ಟ ವಯಸ್ಸಿನ ಮಕ್ಕಳು ತಿರುಗಾಡುತ್ತಿರುವುದನ್ನೂ, ಅಲ್ಲಿ ನಡೆಯತಕ್ಕ ಕೂಗಾಟ, ಚೀರಾಟಗಳನ್ನು ನೋಡುವುದಕ್ಕೆ ತೀರ ಅಸಹ್ಯಕರವಾಗಿದೆ. ಇಂಥ ಪ್ರಸಂಗಗಳು ಆಗುತ್ತಿರುವುದು ಅಲ್ಲಿ ತಿರುಗಾಡುವ ಜನರಿಗೆ ತುಂಬ ನಾಚಿಗೆಗೇಡಾಗಿದೆ. ಇಂಥ ಪ್ರಸಂಗಗಳನ್ನು ತಡೆಗಟ್ಟುವುದಕ್ಕಾದರೂ ಸರ್ಕಾರ ಪೋಲೀಸ್ ಹೆಲ್ಪನ್ನು ಕೊಡದಿದ್ದರೆ ಸಾರ್ವಜನಿಕರೇನು ಮಾಡಬೇಕು? ಆ ಹೆಣ್ಣುಮಕ್ಕಳಿಗೆ ಏನು ಸುಳ್ಳುಗಳನ್ನು ಹೇಳಿ, ಆ ಮನೆಗಳಿಗೆ ಅವರನ್ನು ಕರೆತರುತ್ತಾರೋ ಏನೋ! ಅವರಾದರೂ ಇಂಥ ಮಾನ ಕಳೆದುಕೊಳ್ಳುವಂಥ ಪ್ರಸಂಗಗಳಿಗೇಕೆ ಬರುತ್ತಾರೋ! ಈ ವಿಚಾರಗಳೊಂದೂ ಗೊತ್ತಾಗುತ್ತಿಲ್ಲ. ಆದರೆ ಈಗ ಈ ಕೃತ್ಯಗಳನ್ನು ತಡೆಗಟ್ಟತಕ್ಕ ಬಗ್ಗೆ ಪ್ರಾಸ್ಟಿಟ್ಯೂಟುಗಳ ಹೌಸನ್ನು raid ಮಾಡಲು ಕೇವಲ D.S.P. ಗಳಿಗೇ ಅಲ್ಲದೆ ಈ ಅಧಿಕಾರವನ್ನು ಇನ್ನು ಮುಂದಕ್ಕೆ A S.P. ಗಳಿಗೂ ಕೂಡ ಕೊಟ್ಟರೆ ಅದರಿಂದ ಬಹಳ ಅನುಕೂಲವಾಗುತ್ತದೆಂಬ ಸೂಚನೆಯನ್ನು ನಾನೀಗ ಸರ್ಕಾರದವರ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಆದರೆ ಈ ವಿಚಾರದಲ್ಲಿ ಸರ್ಕಾರಕ್ಕೆ ಒಂದು ಸಮಸ್ಯೆ ತಲೆದೋರಬಹುದು. ಅದೇನೆಂದರೆ ಆ ಹೆಂಗಸರನ್ನು ಆ ನರಕದಿಂದ ತಪ್ಪಿಸಿದನಂತರ ಅವರನ್ನೆಲ್ಲಿ ತಂದಿಡುವುದು ಎಂಬ ವಿಚಾರ ಇನ್ನೊಂದು ದೊಡ್ಡ ಪ್ರಾಬ್ಲೆಂ ಆಗಿರಬಹುದು. ಈ ವಿಚಾರದಲ್ಲಿ ಈಗಾಗಲೇ ಕೇಂದ್ರ ಸರ್ಕಾರದವರು ಎಲ್ಲಾ ರಾಜ್ಯಗಳಲ್ಲೂ ರೆಸ್ಕ್ಯೂ ಹೌಸುಗಳನ್ನು ಸ್ಥಾಪಿಸತಕ್ಕ ಬಗ್ಗೆ ಗ್ರಾಂಟನ್ನು ಕೊಡುವುದಾಗಿ ಹೇಳಿದ್ದರೂ ಕೂಡ ನಮ್ಮ ಸರ್ಕಾರ ಎಷ್ಟು ಬೇಡಿದ್ದರೂ ಅವರು ಗ್ರಾಂಟನ್ನು ಕೊಡಲು ಸಿದ್ಧವಾಗಿದ್ದರೂ ಈ ವಿಚಾರದಲ್ಲಿ ಯಾವ ಪ್ರಯತ್ನಗಳನ್ನೂ ಮಾಡಿರುವುದಿಲ್ಲ. ಆದುದರಿಂದ ನಾನೀಗ ಸರ್ಕಾರದವರಿಗೆ ಸಲಹೆ ಮಾಡುವುದೇನೆಂದರೆ ಪ್ರತಿಯೊಂದು ಜಿಲ್ಲೆಯ ಹೆಡ್‌ಕ್ವಾರ್ಟರ್ಸಿನಲ್ಲೂ ಒಂದೊಂದು ರೆಸ್ಕ್ಯೂ ಹೋಂಗಳನ್ನು ತೆರೆಯಲು ಅವಕಾಶ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರಿಂದ ಅನೇಕ ಸಮಸ್ಯೆಗಳು ಪರಿಹಾರವಾಗುತ್ತವೆ.

ಇನ್ನು ನಮ್ಮ ರಾಜ್ಯಕ್ಕೆ ಹೊರಗಡೆಯಿಂದ ಹೈಡಿಗ್ನಿಟೆರೀಸುಗಳನ್ನು ಬರಮಾಡಿಕೊಳ್ಳತಕ್ಕ ಸಂದರ್ಭದಲ್ಲಿ ಸರ್ಕಾರದವರು ಈ ಸಭೆಯ ಸದಸ್ಯರುಗಳಲ್ಲೇ ಒಬ್ಬೊಬ್ಬರಿಗೊಂದೊಂದು ರೀತಿಯ ಟ್ರೀಟ್‌ಮೆಂಟ್ ಕೊಡತಕ್ಕ ಬಗ್ಗೆ ಇವರಲ್ಲಿ ಎಷ್ಟರಮಟ್ಟಿಗೆ ಭಿನ್ನ ಭಾವನೆಗಳಿವೆ ಎಂಬುದನ್ನು ತಿಳಿಸಲು ಎರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಮೊನ್ನೆ ಬೆಂಗಳೂರಿಗೆ ಡ್ಯೂಕಾಫ್ ಎಡಿನ್‌ಬರೋ ಅವರು ಬಂದಿದ್ದಾಗ್ಗೆ ಮತ್ತು ಪ್ರೈಂ ಮಿನಿಸ್ಟರ್‌ರವರನ್ನು Young Farmer's Convention ಗೆ ಆಹ್ವಾನಿಸಿದ್ದ ಸಂದರ್ಭದಲ್ಲಿ ನಡೆದ ಒಂದು ಪ್ರಸಂಗವನ್ನು ಹೇಳಬೇಕಾಗಿದೆ. ಎಡಿನ್‌ಬರೋರವರ ಗೌರವಾರ್ಥಕ್ಕಾಗಿ ಇದೇ ಕಟ್ಟಡದಲ್ಲಿ ಬ್ಯಾಂಕ್ವೆಟ್ ಹಾಲಿನಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಲಾಗಿದ್ದಿತು. ಆದರೆ ಅದರ ಬಗ್ಗೆ ಕೆಲವರಿಗೆ ಮಾತ್ರ ಈ ಸಭೆಯ ಸದಸ್ಯರುಗಳಿಗೆ ಆಹ್ವಾನ ಕಳುಹಿಸಲಾಗಿತ್ತು. ಇನ್ನು ಕೆಲವರಿಗೆ ಕಳುಹಿಸಿರಲೇ ಇಲ್ಲ. ಈ ರೀತಿಯ ಭಿನ್ನಭಾವನೆಯನ್ನು ಒಂದು ಪಕ್ಷಪಾತವನ್ನು ತೋರಿಸಲು ಸರ್ಕಾರದಲ್ಲೂ ಅವಕಾಶವಿದೆಯೇ ಎಂದು ಕೇಳುತ್ತೇನೆ? ಅದರೆ ಸರ್ಕಾರದವರು ಊರಿನಲ್ಲಿಲ್ಲದೆ ಬೇರೆ ಊರುಗಳಲ್ಲಿರತಕ್ಕವರಿಗೆ ಬರಲು ಹೇಗೆ ಸಾಧ್ಯವಿದೆ ಎಂದು ಕೇಳಬಹುದು. ಆದರೆ ಈ ಸಭೆಯ ಪ್ರತಿಯೊಬ್ಬ ಸದಸ್ಯರಿಗೂ ಆಹ್ವಾನ ಕಳುಹಿಸುವುದು ಸರ್ಕಾರದ ಕರ್ತವ್ಯ. ಅವರು ಬರುತ್ತಾರೋ ಅಥವಾ ಬರುವುದೇ ಇಲ್ಲವೋ ಆ ವಿಚಾರ ಅವರಿಗೆ ಸೇರಿದ್ದು.

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಹಾಗೊಂದು ವೇಳೆ ಅಗತ್ಯವಿದ್ದರೆ ಇಲ್ಲಿಂದ ಕಳುಹಿಸ ತಕ್ಕ ಇನ್ವಿಟೇಷನ್‌ಗಳಿಗೆ R.S.V.P. ಎಂದು ಬೇಕಾದರೆ ಹಾಕಿ ಕಳುಹಿಸಬಹುದಾಗಿತ್ತು. ಸರ್ಕಾರದವರು ಹಾಗೆ ಆಹ್ವಾನ ಕಳುಹಿಸಿದರೂ ಸಹ ಬರತಕ್ಕವರು ಇಲ್ಲಿಯ ಊಟ-ತಿಂಡಿಗಳ ಆಸೆಗಾಗಿ ಆಗಲಿ ಅಥವಾ ಅವರು ಹೊಟ್ಟೆಗಿಲ್ಲದೆಯಾಗಲೀ ಬರುವುದಿಲ್ಲ. ಇಲ್ಲಿಗೆ ಬಂದಿರತಕ್ಕ ಡಿಗ್ನಿಟೇರೀಸ್‌ಗಳನ್ನು ನೋಡಬೇಕು, ಅವರ ಭಾಷಣವನ್ನು ಕೇಳ ಬೇಕು, ಎಂಬ ಭಾವನೆಯಿಂದ ಅವರು ಬರುತ್ತಾರೆ. ಎಷ್ಟೋ ವರ್ಷಕ್ಕೊಮ್ಮೆ ಬರತಕ್ಕಂಥ ಡಿಗ್ನಿಟೇರೀಸ್‌ಗಳನ್ನು ಈ ಸಭೆಯ ಸದಸ್ಯರು ನೋಡುವುದು ಬೇಡವೇ? ಅಂಥಾ ದೊಡ್ಡವ್ಯಕ್ತಿಗಳನ್ನು ಸಂದರ್ಶನ ಮಾಡುವುದು ಬೇಡವೇ? ಇಂಥ ವಿಚಾರಗಳಲ್ಲಿ ಈ ರೀತಿ ಕೆಲವರಿಗೆ ಅವಕಾಶ ಕೊಟ್ಟು ಇನ್ನು ಕೆಲವರಿಗೆ ಕೈಬಿಡತಕ್ಕದ್ದು ಶುದ್ಧ ಅನ್ಯಾಯ. ಇಂಥ ಪಕ್ಷಪಾತ ಭಾವನೆ ಮೊದಲು ಹೋಗಬೇಕೆಂದು ಹೇಳುತ್ತೇನೆ. ಇನ್ನು ಮುಂದಕ್ಕೆ ಇಂಥ ವಿಚಾರಗಳಲ್ಲಿ ಸರ್ಕಾರ ದವರು ನಿಷ್ಪಕ್ಷಪಾತ ಭಾವನೆಯಿಂದ ನಡೆಯಲು ಬಹಳ ಎಚ್ಚರಿಕೆ ತೆಗೆದುಕೊಳ್ಳಬೇಕು. ಇನ್ನು ಆ ಯಂಗ್‌ಫಾರ್ಮರ್ಸ್ ಕನ್ವೆನ್ಷನ್‌ಗೆ ಬರತಕ್ಕ ರೈತರ ಪ್ರತಿನಿಧಿಗಳನ್ನು ಅಡ್ರೆಸ್ ಮಾಡಲು ಶ್ರೀ ನೆಹರೂ ರವರನ್ನೇ ಪ್ರಾರ್ಥಿಸಿಕೊಳ್ಳಲಾಗಿತ್ತು. ಆ ಬಗ್ಗೆ ನಾವೆಲ್ಲರೂ ರೆಪ್ರೆಜೆಂಟೇಷನ್ ಕಳುಹಿಸಿದ್ದೆವು. ಅದನ್ನು ಅವರೂ ಸಹ ಮಾನ್ಯಮಾಡಿ ಅದಕ್ಕೆ ಒಪ್ಪಿಕೊಂಡು ಬಂದರು. ಆದರೆ ಅವರೇನು ಆ ರೈತರ ಹಿತದಲ್ಲಿ ಅವರಿಗೊಂದು ಅಭಿಮಾನವಿದ್ದುದರಿಂದಲೇ ಹಾಗೆ ಒಪ್ಪಿಕೊಂಡು ಆ ಕಾರ್ಯಕ್ಕೆ ಬಂದರೋ ಅಥವಾ ಇನ್ನಾವ ಕಾರಣಕ್ಕಾಗಿ ಒಪ್ಪಿಕೊಂಡು ಬಂದರೋ ಗೊತ್ತಿಲ್ಲ. ಆದರೆ ಅವರು ನಮ್ಮ ಆಹ್ವಾನವನ್ನು ಒಪ್ಪಿಕೊಂಡೇ ಬಂದಿದ್ದಾರೆಂದು ನಾವೆಲ್ಲರೂ ತಿಳಿದು ಕೊಂಡಿದ್ದೆವು. ಆದರೆ ಆ ನಮ್ಮ ಫಂಕ್ಷನ್ ಒಂದು ವಿಶೇಷ ಫಂಕ್ಷನ್ ಆಗಿ ನಡೆಯುವುದರ ಬದಲು ಒಂದು ಜನರಲ್ ಫಂಕ್ಷನ್‌ಆಗಿ ನಡೆಸಬೇಕೆಂಬ ತೀರ್ಮಾನ ಯಾರೋ ಮಾಡಿದರು. ಅದು ಯಾರು ಮಾಡಿದರು ಎಂಬುದು ಆವಾಗ ಯಾರಿಗೂ ತಿಳಿಯಲೇ ಇಲ್ಲ. ಈ ವಿಶೇಷ ಸಭೆಯ ಕಾರ್ಯಕ್ರಮಗಳನ್ನೆಲ್ಲ ಆ ಜನರಲ್ ಮೀಟಿಂಗಿನಲ್ಲೇ ನಡಸಬೇಕೆಂತಲೂ ಕೂಡ ಒಂದು ತೀರ್ಮಾನವಾಗಿತ್ತು. ನಾವೆಲ್ಲರೂ ಆದುದಾಯಿತು ಆ ಸಭೆಗೆ ಹೋಗಿ ಭಾಷಣವನ್ನಾದರೂ ಕೇಳೋಣ ವೆಂದು ನಾವೆಲ್ಲರೂ ಕಾರಿನಲ್ಲಿ ಅಲ್ಲಿಗೆ ಹೋದೆವು. ಆದರೆ ಅಲ್ಲಿದ್ದವರು ಕಾರಿನಲ್ಲಿ ಮೀಟಿಂಗ್ ನಡೆಯುವ ಸ್ಥಳಕ್ಕೆ ಹೋಗಲು ಅವಕಾಶವಿಲ್ಲವೆಂದುಹೇಳಿ ಆ ಮೀಟಿಂಗ್ ನಡೆಯುವ ಸ್ಥಳ ಇನ್ನೂ 2-3 ಫರ್ಲಾಂಗ್ ಇರುವಷ್ಟರಲ್ಲೇ ಕಾರನ್ನು ತಡೆದುಬಿಟ್ಟರು. ಆಗ ನಾವು ಕಾರನ್ನು ಹೆವೆಲಿಯನ್ನೆಲ್ಲಿ ಬಿಟ್ಟು ಆ ಸ್ಥಳಕ್ಕೆ ನಡೆದುಕೊಂಡು ಹೋಗಬೇಕಾಯಿತು. Permission ತೆಗೆದುಕೊಳ್ಳಲು ಆ ವೇಳೆಯಲ್ಲಿ ಡೆವಲಪ್‌ಮೆಂಟ್ ಕಮಿಷನರಾಗಲಿ ಐ.ಜಿ.ಪಿ.ಅವರಾಗಲಿ ಯಾರೊಬ್ಬರೂ ಅಲ್ಲಿ ಇರಲಿಲ್ಲ, ಡಿ.ಎಸ್.ಪಿ. ಗಳು ಮಾತ್ರ ಅಲ್ಲಿ ಬಂದೋಬಸ್ತ್ ಬಗ್ಗೆ ಓಡಾಡುತ್ತಿದ್ದರು. ಆದರೆ ಆವೇಳೆಗೆ ಸರಿಯಾಗಿ ಅಲ್ಲಿಗೆ ಹೋಂ ಡೆಪ್ಯುಟಿ ಮಿನಿಸ್ಟರ ಒಂದು ಕಾರು ಭರ್ತಿಯಾಗಿ ಜನಗಳನ್ನು ತುಂಬಿ ಕೊಂಡು ಆ ಸ್ಥಳಕ್ಕೆ ನೇರವಾಗಿ ಬಂದಿತು. ಅದು ಮಿನಿಸ್ಟರ ಕಾರಾದ್ದರಿಂದ ಅಲ್ಲಿಯವರೆಗೆ ಬರಲು ಅವಕಾಶವಾಯಿತೇನೋ! ಕಾರಿನ ಟೈರುಗಳೆಲ್ಲ ತಗ್ಗಿಗಾಗಿದ್ದವು! ಆಗ ನಾವೂ ಒಳಗೆಹೋಗೋಣ ವೆಂದು ಅಲ್ಲಿ ಸೆಕ್ಯೂರಿಟಿ ಮೆಷರ್ಸ್‌ನವರಿದ್ದ ಜಾಗಕ್ಕೆ ಹೋದರೆ ಅವರು ಪಾಸ್ ತಾರದ ವಿನಾ ಒಳಗೆ ಬಿಡುವುದಿಲ್ಲವೆಂದು ತಡೆದುಬಿಟ್ಟರು. ಪಾಸನ್ನಾದರೂ ತರೋಣವೆಂದರೆ ಚೀಫ್ ಸೆಕ್ರೆಟರಿಗಳೊಬ್ಬರೇ ಪಾಸ್ ಕೊಡತಕ್ಕವರೆಂದು ಹೇಳಿದ್ದರಿಂದ ನಮಗೆ ಒಳಗೆ ಹೋಗಲು ಅವಕಾಶವೇ ಸಿಕ್ಕಲಿಲ್ಲ. ಆದರೆ ಒಳಗಡೆ ಅಷ್ಟೆಲ್ಲಾ ಜನರಿದಾರಲ್ಲ ಎಂದು ನಾವು ಕೇಳಿದ್ದಕ್ಕೆ ಅವರೆಲ್ಲರೂ ಮಂತ್ರಿಗಳ ಕಡೆಯವರೆಂದರು. ನಮ್ಮ ಹಳ್ಳೀಕಡೆ ಒಂದು ಗಾದೆ ಹೇಳುತ್ತಾರೆ ಎತ್ತು ಹೋದರೆ ಒಡೆಯ ತರುತ್ತಾನೆ, ಗಡಿಗೆ ಒಡೆದರೆ ಒಡತಿ ತರುತ್ತಾಳೆಂದು ಹೇಳುವಂತೆ ಆ ಮಂತ್ರಿಗಳು ಬಾದ ಕಾರಿನ ಟೈರೆಲ್ಲ ಫ್ಲಾಟಾಗಿದ್ದರೂ ಅವರಿಗೇನು ಅದರ ಚಿಂತೆ! ಅಂತೂ ಅವರ ಕಾರಿನಲ್ಲಿದ್ದ ಜನರೆಲ್ಲರೂ ನೇರವಾಗಿ ಒಳಗೆ ಹೋದರು. ಏನು ಇದರ ಅರ್ಥ? ಮಂತ್ರಿಗಳ ಕಾರಿನಲ್ಲಿ ಬಂದವರು ಮಾತ್ರ ಅವರ ನಂಬಿಕೆಗೆ ಅರ್ಹರು; ಬಾಕಿಯವರೆಲ್ಲ ಅಂಥ ನಂಬಿಕೆಗೆ ಅರ್ಹರಲ್ಲ, ಅವರು ಅನಾಹುತ ಮಾಡುತಕ್ಕವರೆಂದೇನು? ಇದರ ಬಗ್ಗೆ ಸರ್ಕಾರ ದವರು ಉತ್ತರ ಕೊಡುವಾಗ ಜವಾಬನ್ನು ಹೇಳಲೇ ಬೇಕೆಂದು ಕೇಳುತ್ತೇನೆ. ಆ ದಿವಸ Young Farmers Convention ಕಾರ್ಯಕ್ರಮಗಳನ್ನು ಒಂದು ಜನರಲ್ ಫಂಕ್ಷನ್ ಆಗಿ ಅದನು ಏರ್ಪಾಡಿದಾಗ ಆ ಕನ್ವೆನ್ಷನ್ನಿಗೆ ಆಹ್ವಾನಿಸಲ್ಪಟ್ಟಿದ್ದ ಸದಸ್ಯರಿಗೆ ಅಲ್ಲಿ ಸ್ಥಾನವಿರಲಿಲ್ಲ. ಅಂಥ ಇನ್ವೈಟೀಸ್‌ಗಳಿಗೇ ಅಲ್ಲಿ ಅವಕಾಶ ವಿಲ್ಲದಮೇಲೆ ಅಲ್ಲಿ ಇತರರಿಗೆ ಹೇಗೆ ಸ್ಥಾನ ಗಳು ಮೀಸಲಾಗಿವೆ? ಪ್ರೈಮ್ ಮಿನಿಸ್ಟರೆಂದರೆ ಅವರೇನು ಒಂದು ಪಕ್ಷದ ಸ್ವತ್ತೇನು? ಅವರು ಇಡೀ ದೇಶದ ಸ್ವತ್ತು. ಹಾಗಿರುವಾಗ ಸರ್ಕಾರದವರು ತಾವು ಮಾಡಿದ್ದೇ ಸರಿ ಎಂದು ಹೀಗೆಲ್ಲಾ ಅಲ್ಲಿ ಒಂದು ಭಿನ್ನ ಮನೋಭಾವದಿಂದ ವರ್ತಿಸಿದ್ದಾರೆ. ಅದು ಖಂಡಿತ ಸರಿಯಾದದ್ದಲ್ಲ. ಇಂಥ ವಿಷಯಗಳನ್ನೆಲ್ಲಾ ಮುಖ್ಯ ಮಂತ್ರಿಗಳೇ ನೋಡಿಕೊಳ್ಳುವುದು ಒಳ್ಳೆಯದು. ಆದರೆ ಅವರ ಡೆಪ್ಯುಟಿ ಮಿನಿಸ್ಟರಿಗೆ ಅವರೂ ಇಂಥ ಒಂದು ಅಧಿಕಾರವನ್ನು ಕೊಟ್ಟಿದ್ದಾಗ ಆ ಬಗ್ಗೆ ಸರಿಯಾದ ತಿಳುವಳಿಕೆಯನ್ನೇನು ಅವರು ಅವರಿಗೆ ಕೊಟ್ಟಿದ್ದಾರೋ ಇಲ್ಲವೋ ಆ ವಿಚಾರ ನನಗೀಗ ತಿಳಿಯದಾಗಿದೆ. ಆದರೆ ನನಗೆ ಇಷ್ಟು ಮಾತುಗಳ ನ್ನಾಡಲು ಅಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ನನ್ನವಂದನೆಗಳನ್ನರ್ಪಿಸಿ ನನ್ನಮಾತು ಗಳನ್ನು ಮುಗಿಸುತ್ತೇನೆ.

Sri C. M. ARUMUGHAM.—Mr. Speaker, I would like to make a few remarks on the demand "General Administration." Previous speakers, especially Sri Puttaswami, was referring to the Public Accounts Committee and the Estimates Committee reports. Whatever may be the reason, as you are aware, after the re-organisation of States, the Legislature Department has not expanded. The staff that existed when there were nine districts continue to be the same. Due to inadequate staff the Public Accounts Committee and the Estimates Committee are not able to function. You are aware that in Madras, Kerala and other States they

have got one Secretary, one Deputy Secretary, two Assistant Secretaries and more staff than in Mysore. Even in Kerala there are one Secretary, two Assistant Secretaries and more staff than in ours. Here we have one Secretary, one Assistant Secretary and not even a Deputy Secretary. In Parliament, the Chief Minister knows that for the Estimates Committee and Public Accounts Committee they have got one Deputy Secretary for each; they have got their own Secretaries of course working under the Speaker. Under this demand I would like to suggest that Government should provide more staff to the Legislature...

Sri B. D. JATTI.—That is under consideration. Immediate action will be taken.

Mr. SPEAKER.—I am expecting immediate orders.

Sri C. K. RAJIAH SETTY (Chick-naikanhalli).—Is it not long delayed ?

Mr. SPEAKER.—Apart from that, I am expecting orders in a couple of days.

Sri Y. VEERAPPA (Holenarsipur).—We want the Legislature Secretariat to be expanded. There must be a separate Assistant Secretary or Deputy Secretary in charge of the Public Accounts Committee and Estimates Committee.

Sri C. M. ARUMUGHAM.—I have got a few suggestions to make in this connection; first, about our Deputy Speaker. I have got some suggestions with regard to the Speaker also but since I have got little time I shall speak about him some other time. We are giving very inadequate pay to the Deputy Speaker. In Bihar the Deputy Speaker gets Rs. 800 as salary and he is entitled to T.A. and D.A. He is allowed to tour the entire State, attend functions and also go and see the procedure in other State Legislatures. Here it is not so. Apart from that he is provided with a house rent allowance and car advance of Rs. 12,000. That can be repaid within twenty instalments. Last time also I suggested that these Ministers be given an advance of Rs. 20,000 instead of giving Government cars which become rotten in a couple of months. In Bihar the Deputy Speaker is paid Rs. 800 to and is given Rs. 12,000 to purchase a car. In Madhya Pradesh he is given Rs. 750 as pay, house allowance of Rs. 75 and a Government car is provided. In Uttar Pradesh he is given Rs. 750. He is allowed to go out of State and they have also provided him with Rs. 5,000 for residence, furniture, etc., and a conveyance allowance of Rs. 150 is given. In West Bengal he is given Rs. 750 and entitled to T.A. and D.A. He is allowed to tour. In Jammu and Kashmir he is given Rs. 800 as pay. In Rajasthan he is given Rs. 800 as pay. In Andhra he is given Rs. 500 as pay and Madras also Rs. 500. In Bombay he is paid Rs. 450. You are well aware that in Parliament the difference in pap between the Speaker and the Deputy Speaker, between the Chairman and Deputy Chairman is only Rs. 500.

Mr. SPEAKER.—You are putting the problem from the economic point of view. It is not so. The question is whether the Deputy Speaker should be put on par with the Deputy Minister. It is done so everywhere in India except in Bombay and Mysore.

Sri J. B. MALLARADHYA (Nanjangud).—Is it because that the Chief Minister comes from Bombay ?

Sri B. D. JATTI.—Or is it because that the Speaker comes from Bombay ?

Sri J. B. MALLARADHYA.—Both of you are responsible (*Laughter*).

Sri C. M. ARUMUGHAM.—My plea is that he must be on par with the Deputy Minister. The Chief Minister knows why he appointed Deputy Ministers not that there is need but it is to train more number of persons to replace the old Ministers who will retir every shortly. (*Laughter*). Likewise the Deputy Speaker needs training. Hon'ble Speaker has vast experience. He was Deputy Speaker in Bombay. He has distinguished himself as a Speaker. I can compare him to the whole world. (*Laughter*). The Hon'ble Member Sri Mallaradhya has suggested that we should send the Legislature Secretary to foreign countries to study the working of the democratic legislatures. I suggest that our Speaker should be sent. I also suggest that the Deputy Speaker should be brought on a par with the Deputy Ministers.

(SRI C. M. ARUMUGHAM)

He should be given all facilities. Let there not be any discrimination. Further he must be allowed to attend other State Legislatures to study their working.

MR. SPEAKER.—Another point. The Deputy Speaker of the Lok Sabha and the Deputy Chairman of Rajya Sabha are above Deputy Ministers at the Centre

SRI J. B. MALLARADHYA.—Thank you, Sir, for the information.

SRI C. M. ARUMUGHAM —I think the Chief Minister will note that after all the Speaker and the Deputy Speaker are for the entire Legislature and they must be provided more facilities than anybody else. The staff of the Legislature must be increased and there must be a few more Assistant Secretaries for being in charge of the Public Accounts Committee and the Estimates Committee.

Coming to the Information Department the Chief Minister is in charge of it, I think. There is a book being published by the Information Department. Every time we see the old faces of the Ministers in that book. If there is a new Ministry and once their photographs are published, what is the good of repetition? Our Chief Minister was in Bombay and he knows what was done there. Or let them follow the Government of India. Let the Government publish what the country needs and not put portraits of the Ministers. It will not help the State.

SRI G. VENKATAI GOWDA.—To make the people know.

SRI C. M. ARUMUGHAM.—Every body knows Sri Jatti not as Chief Minister but because of the Jatti Committee Report (*Laughter*). People come to know of them because of their service: So I want the Information Department to be re-organised. They will have to re-organise the entire department. One of the officers should be sent to the Government of India to study the working of the Information Department. We need more information about the State, the working of the various departments and not merely the functions attended by Ministers like laying of foundation-stones, opening of some bridges or roads. Let them merely say so many bridges were opened, so many roads were laid and so many buildings were opened in several places. Now the Information Bulletin contains nothing but self-glorification of these Ministers. Most probably they themselves may not like it but the department wants to please the Ministers for their own promotion or increments.

4-30 P.M.

Another point is that we spend about Rs. 2,97,400 on this very small department which is doing very little work, but we spend about Rs. 3·5 lakhs for advertisement. As was pointed out by Sri Narasimhan and others, formerly the department itself used to have contact with the Press and it used to give the advertisements to the Press, but now the Chief Minister has appointed some private agency from Madras to give Government advertisements to the Press. I understand that this agency is paid about Rs. 40,000 per year. I would tell him, do not encourage such middlemen. I feel that most probably this agent must be a Congressman.

SRI B. D. JATTI.—He is not a Congressman. That much I am sure.

SRI C. M. ARUMUGHAM.—At least his sympathies will be with the Congress and he will help the Congress in the next elections. It would have been very helpful if the Chief Minister had entrusted this work to some agency in Mysore if at all he wanted some agency to do this work. Better still would have been for the Department itself to handle this work instead of appointing an agency. I hope the Chief Minister will take note of this and take immediate action in the matter as he seems to be a good man.

Coming to the Public Service Commission, after reorganisation of the State the Government of Mysore is not able to introduce uniform rules for the functioning of the Public Service Commission. There are different rules in the different areas of the State and most of the members of the Public

Service Commission from old Mysore are not well-versed with those rules. For the last 2½ years the Government have not been able to introduce uniform rules. I hope the present Government will take immediate steps to introduce uniform rules for the functioning of the Public Service Commission which has been pending for the last 2½ years.

Then, Sir, after State reorganisation the staff of the Public Service Commission also has not been increased. According to the Constitution the Government can appoint any number of members to the Public Service Commission. For 9 districts of old Mysore they had appointed 3 members and for 19 districts also they continue the same number of members. Formerly, there were only 7 Ministers, but now there are 16 Ministers. Probably, the Chief Minister will increase the number of Ministers if there is some quarrel in the Congress Party. I hope that in the interest of the public the Chief Minister will look into this matter and will increase the number of members of the Public Service Commission by at least one and he will also give more staff to the Commission.

Till two and half years ago an officer of the Public Service Commission used to check the unit officers' appointments, but since the last 2½ years no officer is checking the appointments in the unit offices. Possibly, the Government must have issued instructions to the Public Service Commission not to check these offices because they have got some vested interests to whom they want to give appointments in these offices. Otherwise, I do not know why for 2½ years the Public Service Commission has not checked the appointments in unit offices. Government have given some powers to the appointing authorities and they have also issued instructions as to how they should appoint. In the past the Public Service Commission used to check whether these appointments were made according to certain principles laid down by Government, but they are not doing it now. I hope the Chief Minister will take note of this and instruct the Public Service Commission accordingly.

I do not know why the Chief Minister is very liberal to his subordinates. He wants to give them more power than to himself. He wants very little power for himself, but he wants to give more powers to the appointing authorities.

Sri B. D. JATTI.—May I know to which staff you are referring? Are you referring to my personal staff?

Sri C. M. ARUMUGHAM.—No. I am not speaking about his personal staff. I have got respect for him. He is a very simple man. Our Law Minister is always legal-minded and he always looks in to the Constitution. I would only refer him to Article 320 of the Constitution. I need not repeat the whole of this article. Clause (3) of that article says:

> "The Union Public Service Commission or the State Public Service Commission, as the case may be, shall be consulted—
>
> (a) on all matters relating to methods of recruitment to civil services and for civil posts;
>
> (b) on the principles to be followed in making appointments to civil services and posts and in making promotions and transfers from one service to another and on the suitability of candidates for such appointments, promotions or transfers;
>
> (c) on all disciplinary matters affecting a person serving under the Government of India or the Government of a State in a civil capacity, including memorials or petitions relating to such matters;
>
> (d) on any claim by or in respect of a person who is serving or has served under the Government of India or the Government of a State or under the Crown in India or under the Government of an Indian State, in a civil capacity, that any costs incurred by him in defending legal proceedings instituted against him in respect of acts done or purporting to be done in the execution of his duty should be paid out of the Consolidated Fund of India, or, as

(SRI C. M. ARUMUGHAM)

the case may be, out of the Consolidated Fund of the State;

(e) on any claim for the award of a pension in respect of injuries sustained by a person while serving under the Government of India or the Government of a State or under the Crown in India or under the Government of an Indian State, in a civil capacity, and any question as to the amount of any such award, and it shall be the duty of a Public Service Commission to advise on any matter so referred to them and on any other matter which the President, or, as the case may be, the Governor of the State, may refer to them:

Provided that the President as respects the all-India services and also as respects other services and posts in connection with the affairs of the Union, and the Governor, as respects other services and posts in connection with the affairs of a State, may make regulations specifying the matters in which either generally, or in any particular class of case or in any particular circumstances, it shall not be necessary for a Public Service Commission to be consulted."

There is a clear mandatory provision that in certain cases and circumstances the Governor can say that in regard to certain posts the Public Service Commision need not be consulted. But what the Government have done here is against the Constitution of India. Their appointments are irregular. I am not pleading for this community or that community. If the Government allow their officers to appoint, they appoint their own men. I can give the Chief Minister one instance. In the Bhadravati Iron and Steel Works, out of 17 officers, 11 officers belong to one community. After the present Ministry came to office, they took away 68 categories of appointments from the purview of the Public Service Commission. I have got here a book containing the exempted categories of appointments in another government. There also there is the Congress Government. There they have taken away only 26 categories of appointments from the purview of the P.S.C., but here our Chief Minister has taken away 68 such appointments from the purview of the P.S.C. If this is going to be the state of affairs, then we need not have any Public Service Commission at all. We will have to believe our officers. The Chief Minister is listening to his officers and that is why the administration is not regular. Sir, 68 categories have been taken away from the purview of the Public Service Commission against the interests of the Constitution and against the interests of the common man. I will refer to one important category: the gazetted posts having connection with the implementation of the Community Projects. These I.A.S., I.P.S. and I.F.S. Cadres have been created with a particular motive. I am telling these things; let the Congress Members be true to their conscience. Let them keep their hands on their heart if what I say is the truth or not. If they have a conscience and speak against, then their hearts would stop. (*Laughter*). I am saying emphatically that all these so-called All-India cadres have been created to help one single community in India. Everyone would agree with me in this. The entire Indian Foreign Service is dominated by members of one community—of course we are not concerned with it here. The N.E.S. also shares the same fate. These services were designed to help a particular caste. I think the Chief Minister agrees with me. According to the Secretariat Maunal, cases which affect or is likely to affect the interest of any minority community, Scheduled Castes and Scheduled Tribes and backward classes should be brought to the notice of the Chief Minister before any order is issued Such a provision is there for gazetted posts.

Sir, I was wondering why an officer —a very big officer—says he is 'non-backward'. I am of course very happy to know of this. He is also an Indian. Instead of calling ourselves as belonging to this community and that community

—I think the signs that follow our names should be cut off. When Rama suspected Hanuman, for one reason or another, Hanuman became wild. He said: 'What is this? I am for Rama. I work for Rama and he is my God. Why should he suspect me''. Then he opened his chest and showed his heart. That heart was beating 'Rama, Rama'. So, if this gentleman says that he is non-backward let him throw open his chest and show whether he is non-backward. I will ask him "Don't you have caste don't you follow the caste system".? He is a human being of course.

Mr. SPEAKER.—For the information of the Hon'ble Member I can say that there is only one community in Mysore State which is non-backward and that is the Brahmin community. When a person in service says that he is 'non-backward' it means that he is a Brahmin.

Sri C. M. ARUMUGHAM.—If he does not want to show to which community he belongs he must show it in action.

Sri G. VENKATAI GOWDA.—The Scheduled Castes are a class by themselves and they do not come under 'backward classes' and in that sense they are also 'non-backward'.

Sri C. M. ARUMUGHAM.—I would tell the House that this person who calls himself as 'non-backward', is working against constitutional provisions, he is working against constitutional safeguards. I do not know whether Sri Jatti knows about it, but this person is working for the ruination of the State; the ruination of the two crores of people of this State. What I would say is that the entire State is backward and all the communities excepting 2 per cent, are backward. On account of this one person who belongs to the per cent, the entire 98 per cent of the population is suffering. This person is working against the Constitution, against P.S.C. rules and regulations. Everybody knows that there is a provision that Government can appoint local candidates for six months. Within that time, the P.S.C. will advertise, and will get suitable candidates for the posts. But here is a Chief Secretary who has issued a notification. I want to read it.

Mr. SPEAKER.—The Hon'ble Member need not read it.

Sri U. M. MADAPPA (Chamarajanagar).—I want to know if an Hon'ble Member is not entitled to read a Government Order. Would it not amount to a curtailment of the freedom of Members.?

Mr. SPEAKER.—I do not say that he should not refer or quote or give a gist of that order. But to read the entire order is quite a different matter.

Sri U. M. MADAPPA.—Members may not accept his attempt to give a gist. We may like to know about the entire order.

Mr. SPEAKER.—When an Hon'ble Member gives a gist of an order, he is expected to give a correct gist. If I am to allow long orders of Government to be read, it will take the time of the House. He may pass on the order to the Chief Minister or to me.

Sri U. M. MADAPPA.—Are the Members of this House prevented from knowing the terms of the order?

Mr. SPEAKER.—They are not prevented.

Sri C. M. ARUMUGHAM.—The Speaker is kind to me. The Speaker is also aware of the happenings in this State.

Mr. SPEAKER.—Please, do not drag me into this controversy (*Laughter*).

Sri C. M ARUMUGHAM.—Sir, not only the Chief Minister, not only the House, not only the Legislative Council, but the entire population of the State is interested in these affairs. I will read the operative portion of the Order:

> "In cases where local candidates are already working they need not be replaced by the candidates ....in the approved list issued by the Commission on 28th May 1958."

Mr. SPEAKER.—It has been referred to by another Hon'ble Member.

Sri C. M. ARUMUGHAM.—How can this order be issued by the Chief Secretary? All these candidates have been appointed temporarily for six months. This order has been issued because all the candidates belong to one community. Most of them I can say. I can say the Chief Minister is in charge of Geological Department. Let him appoint an Enquiry Committee and find out what has happened in the entire Secretariat and in the entire State. Let him appoint an Enquiry Committee and find out. He says that the Public Service Commission list need not be implemented. Why there should be a Public Service Commission then? Has this been issued with the approval of the Chief Minister?

Sri B. D. JATTI.—Yes, Sir. The Chief Secretary cannot issue any order without the approval of the Minister or the Chief Minister. It is with the approval of the Chief Minister. There is no dobut about it. I will reply to that.

Sri C. M. ARUMUGHAM.—Another thing. There is a Government Order. That Order says that if the e is promotion from Second Division Clerk to a First Division Clerk, it should necessarily be of a qualified candidate; at least he should have passed S.S.L.C. But there is instruction from the Secretariat to the Animal Husbandry Department and they have promoted non-matriculates to First Division Clerks' posts against Government Orders. These things are happening in this Government. Unfortunately we have got a weak Government. They have no control over the Secretaries. Very recently, they have issued an order that all officers except class IV servants should learn Hindi within two years' time. I do not know what is the motive behind. This is also, I can say, for the sake of one community. Even without making it compulsory, they try to learn. In their very young age, they have to learn Hindi because they have to study Geetha.

Mr. SPEAKER.—Geetha is not in Hindi.

Sri C. M. ARUMUGHAM.—It is in Sanskrit. What is it that we are going to get if we learn Hindi? After all we need Kannada and we need Marathi because Maharastrians are going to stay here only; then Telugu and other languages. There is no need for us to learn Hindi. Whoever becomes the Chief Minister, let him learn Hindi because he wants to speak with the Centre, and because the Prime Minister and the President always will be Hindi speaking people. So far as other persons are concerned, I strongly protest that this imposition of Hindi should not be there. It should be voluntary. Why do you say that no promotion or increments will be given if they do not study Hindi within two years' time? I appeal to the Chief Minister not to press this Hindi on them. We do not want Hindi. Let it be their language in U.P., Bihar or Delhi. But let it not come to Mysore because it would spoil the entire Backward Community, 98 per cent of them.

Sri S. D. KOTHAVALE (Chikodi).—Is it not a national language of India? It is recognised as a language of the Union and everybody ought to know it.

Mr. SPEAKER.—Hindi is not only the national language, but it is also expected to be the official language.

Sri C. M. ARUMUGHAM.—That should not be the official language. I am going to speak on that on some other occasion. Fortunately or unfortunatey this one community is in unauthorised occupation of the entire administration here. Not only here, I just found even in U.P. . . .

Mr. SPEAKER.—Let us not refer to other States.

Sri C. M. ARUMUGHAM.—Yes, Sir. Here it is stated that out of 85 I.A.S. Officers, 60 officers belong to one community. Out of I.P.S. Officers more than 20 belong to that one community. What I want to suggest is this.

Mr. SPEAKER.—That is all the concern of the Central Government.

Sri J. B. MALLARADHYA.—Every five years, the State Government is privileged to review the whole position and bring it to the notice of the Central Government. I.A.S. was introduced to Mysore State in 1950. It is now 8 years. Has the Government reviewed the position and made a report?

Sri C. M. ARUMUGHAM.—Now and then my friends are taking away my time. You know I am a very weak man and I need some protection from the Chair. What I want to say is that one particular section of this population was in power in the name of God and and in the name of Religion and now the same community wants to be in power in the name of intelligence. Therefore, to protect the Constitutional safeguards; I have no belief in Congress Governments because they never implement the Constitutional safeguards and they have failed in it. Sri Channabasappa was asking me whether reservations can be made in all categories for Scheduled Castes. When he was a Member he was reading Constitutional provisions and he was raising points of orders. But now he has become the Minister, he has probably no time to look into them. Anyway I may bring to your notice article 16 (4):

> "(4) Nothing in this article shall prevent the State from making any provision for the reservation of appointments or posts in favour of any backward class of citizens which, in the opinion of the State, is not adequately represented in the services under the State."

Of course, the Government of Mysore are not yet able to lay down who are weaker sections. What I want to say is this. We are a backward community and you said our population is 98 per cent. So, let there be no reservation of any kind for us because we are a majority community and according to democracy, majority must rule the country. The majority must be in power. Merely because Sri Jatti is there in Vidhana Soudha as Chief Minister, it should not be thought that the entire Backward Community is in Vidhana Soudha. Therefore, what I want to suggest is this: to control this unauthorised occupation by the officers of the Brahmin community, I want to make a resolution in this House and I think I will get the entire support of this Assembly, the entire population of 98 per cent, that there must be reservation for these Brahmins in recruitments, in the Assembly, and in all services because we are the majority and from 98 per cent of population; we do not want reservation. According to their population they are 2 per cent and so 2 per cent must be reserved in all appointments, in all promotions. Otherwise, whether it was Jatti Government or any other Government they would never be able to control this community.

A MEMBER.—What about your friend Sri Narasimhan?

Sri C. M. ARUMUGHAM.—He is always with me and supporting me.

Sri M. C. NARASIMHAN.—Except Assembly reservation because I am entitled to get elected and I am also elected with him. In all other matters, I am not against him.

Sri C. M. ARUMUGHAM.—There is no other control. This is the only control we can introduce. Then we are safe. Then Sri Jatti, you can give any amount of power; control will be there; if there are 100 officers, they will have 2 according to their population in all promotions, only 2 per cent will be there..

Mr. SPEAKER.—Is it not possible Sri Arumugham, that you will be shutting out intelligence by this method?

Sri C. M. ARUMUGHAM.—Sir, I am just saying, in spite of writing such a big Constitution, we are not able to control and we are not able to give social justice. Most probably, you may not agree. Whether anybody agrees or not, I am making this suggestion. You say 'casteless' and 'colourless' But when you see the IAS Officers, you will understand. Do you mean to say there are no graduates in other communities? The I.A.S. and I.P.S. were recently introduced into our State. How is that one single community gets 50 to 60 posts! There is a non-Backward Community man at the Head of the administration who recommends. Therefore, I want to request the Chief Minister to appoint an enquiry committee. It is very essential; it is a demand from this House that a Committee should be appointed to go into this matter. So far as the Ministers

(SRI C. M. ARUMUGHAM)

are concerned, I have nothing to say. It is sheer luck they have become Ministers; nothing but luck. After they become Ministers I want them to be a little patient and understand the problems. Simply because they are sitting as Ministers in the Chambers, let them not think they know the entire world. I have got one or two instances. It appeared a Minister was going to Mysore and the Driver while going in speed ran over a stone.

Sri H. K. VEERANNA GOWDH (Maddur).—Can the Hon'ble Member put his leg on his seat and speak? It would not look well.

Mr. SPEAKER.—As far as possible one should not put his legs on the table.

ಶ್ರೀ ಎಚ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಲೆಜಿಸ್ಲೇಟಿವ್ ಕೌನ್ಸಿಲ್ಲಿನಲ್ಲಿ ಇಡೀ ದಿವಸ ಹಾಗೆ ನಿಂತುಕೊಂಡು ಮಾತನಾಡುತ್ತಾರೆ.

ಅಧ್ಯಕ್ಷರು.—ಆ ತರಹ ಹೋಲಿಕೆ ಮಾಡುವುದು ಒಳ್ಳೆಯದಲ್ಲ.

5 P.M.

Sri C. M. ARUMUGHAM.—The car was going. It ran over a big stone and there was a jolt. The Minister asked: "What is wrong?" The driver replied: "It ran over a stone." Immedia tely the Minister said; "Why did you not horn?" Another instance I was told that a Minister was going to Delhi and he was about to enter the plane. The plane officer said "Wait please". The Minister immediately said "90 pounds". (*Laughter*) Even in the matter of these things, they must know what is it they are asking and they should reply properly. I have got an objection about the tours undertaken by the Ministers. Let them tour, but what right have they got to have their name engraved on the stones while constructing Government buildings, Government projects, roads, etc.? Why should it be stated that the foundation was laid by so and so or the building was opened by such and such Minister, when that is the State property? The building might be constructed by this Government or the previous Government but it is the State property. They have no right to have their names engraved on the stone. A day will come when there will be agitation to remove such names. If there is a road constructed, the P.W.D. officer will open it; if there is a new hospital, the D.M.O. will open it. Why should there be a stone containing the name of the Minister engraved thereon and all the formality to be gone through costing Rs. 500 to 600? If it is a private building or some private function, just to honour the donor the Minister may grace the function if he is called; but so far as Government buildings, projects and Government properties are concerned, they have no right to have their names engraved on the foundation stone. I am strongly of the opinion that general administration is very inefficient and the Government are not going to rectify the defects. It is better that they think twice before they want to continue in power. With these remarks, I resume my seat.

*ಶ್ರೀ ಎಂ. ಆರ್. ಪಾಟೀಲ್ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೇ, ಕಳೆದವಾರ ಬಡ್ಜೆಟ್ಟಿನ ಸಾಮಾನ್ಯ ಚರ್ಚೆಯ ಕಾಲಕ್ಕೆ ಮಾನ್ಯ ಸದಸ್ಯರು ಕೆಲವರು ಮುಖ್ಯವಾಗಿ ಶ್ರೀ ವೀರೇಗೌಡರು ಮಾತನಾಡುತ್ತಾ ಗ್ರಾಮಗಳ ಬಡಾವಣೆಗಳ ವಿಷಯದಲ್ಲಿ ಮತ್ತು ಗ್ರಾಮವಾಸಿಗಳಿಗೆ ಭೂಮಿಯನ್ನು ದೊರಕಿಸುವ ವಿಷಯದಲ್ಲಿ ಸರ್ಕಾರ ಅಸಮರ್ಥವಾಗಿದೆ ಎಂದು ಹೇಳಿದರು. ಅದೇ ವಿಷಯವನ್ನು ಪ್ರಥಮತಃ ನಾನೂ ಎತ್ತಿಕೊಂಡು ಆ ವಿಷಯದ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕೆಂದು ಬಯಸುತ್ತೇನೆ.

Mr. SPEAKER.—I would like to know from the Chief Minister how many of the Ministers are going to reply to the debate.

Sri B. D. JATTI.—I will let the Chair know it in a few minutes. As for me, I may require thirty to forty-five minutes.

[MR. DEPUTY SPEAKER in the Chair.]

ಶ್ರೀ ಎಂ. ಆರ್. ಪಾಟೀಲ್.—ಕಳೆದ ಒಂದು ಶತಮಾನದಲ್ಲಿ ನಮ್ಮ ಗ್ರಾಮಗಳ ಸಂಖ್ಯೆ ಒಂದಿದ್ದುದು ಒಂದೂವರೆಯಷ್ಟು ಬೆಳೆದಿದೆ ಎಂಬುದನ್ನು ಎಲ್ಲರೂ ಒಪ್ಪತಕ್ಕ ಮಾತು. ಮೊದಲಿಗೆ ಇದ್ದಂಥ ಒಂದೆ ಮನೆತನದಲ್ಲಿ ಈಚೆಗೆ ಎರಡು ಮೂರು ನಾಲ್ಕು ಮನೆತನಗಳಾಗಿ ಸ್ಥಳದ ಅಭಾವವಿದೆಯೆಂದು ಎಲ್ಲರಿಗೂ ಗೊತ್ತಿದೆ. ಮನೆತನಗಳು ಈ ರೀತಿ ಹೆಚ್ಚುವುದರಿಂದ ಮತ್ತು ಒಂದೊಂದು ಮನೆತನದಲ್ಲಿ ನಾಲ್ಕಾರು ಮನೆತನಗಳು ಬೆಳೆದುದರಿಂದ ಗ್ರಾಮದ ಸ್ಥಳವೆನ್ನುವುದು ಬಹಳ ಕಡಮೆಯಾಗಿ ಗ್ರಾಮದ ಸುತ್ತಲಿರುವ ಭೂಮಿಗಳು ಬಹಳ ಕಿಮ್ಮತ್ತು ಇರುವುದರಿಂದ ಅವುಗಳನ್ನು ಸರ್ಕಾರದವರು ಅಕ್ವೈರು ಮಾಡಿಕೊಂಡು ಗ್ರಾಮವಾಸಿಗಳಿಗೆ

ದೊರಕಿಸಿಕೊಡುವುದಕ್ಕೆ ಅನೇಕ ತೊಂದರೆಗಳು ಬರುತ್ತವೆ ಎಂಬುದು ಮಾನ್ಯಸದಸ್ಯರಿಗೆ ಅನೇಕರಿಗೆ ಗೊತ್ತಿದೆ. ಶ್ರೀ ವೀರೇಗೌಡರು ಹೇಳಿದಹಾಗೆ, ಅನೇಕ ಅಕ್ವಿಸಿಷನ್ ಪ್ರಕರಣಗಳು ಒಂದು ಕಚೇರಿಯಿಂದ ಮತ್ತೊಂದು ಕಚೇರಿಗೆ ಒಬ್ಬ ಆಫೀಸರಿನಿಂದ ಮತ್ತೊಬ್ಬ ಆಫೀಸರಿಗೆ—ಹೀಗೆ ಓಡಾಡಿ 15—20 ವರ್ಷಗಳಾದರೂ ಆ ಅಕ್ವಿಸಿಷನ್ ಪ್ರಕರಣಗಳು ಅಲ್ಲಿಯೇ ಸಾಯುತ್ತಿವೆ ಎಂಬ ಮತ್ತೊಂದು ಅಂಶವನ್ನು ಬಹಳವಾಗಿ ಒತ್ತಿ ಹೇಳಿದರು. ಇವತ್ತಿನದಿವಸ ನಾವು ಆಹಾರ ಧಾನ್ಯಗಳ ಅಭಿವೃದ್ಧಿ ಮತ್ತು ಒಕ್ಕಲುತನದ ಭೂಮಿಯಿಂದ ಹೆಚ್ಚಿಗೆ ಉತ್ಪತ್ತಿ ತೆಗೆಯಬೇಕು ಎಂಬ ಬಗ್ಗೆ ಒಕ್ಕಲುತನದ ಮಂತ್ರಿಗಳು ಅಲ್ಲಲ್ಲಿ ಭಾಷಣಗಳನ್ನು ಮಾಡುತ್ತಿರುವುದನ್ನು ಕೇಳುತ್ತಿದ್ದೇವೆ. ಆದರೆ ಇಲ್ಲಿ ಈಗ ಮಂತ್ರಿಗಳಾಗಿರತಕ್ಕ ತಾವುಗಳು ಒಂದು ಹಳ್ಳಿಗೆ ಹೋಗಿ ಎಂಟು ದಿನಗಳವಟ್ಟಿಗೆ ವಾಸ ಮಾಡಿಕೊಂಡಿದ್ದು ನೋಡಿದರೆ ಆಗ ತಮಗೇ ಆ ಹಳ್ಳಿಗಳಲ್ಲಿರಲು ಶಕ್ಯವಿಲ್ಲವೆಂಬುದು ಕಾಣುತ್ತದೆ. ಹಿಂದೆ ಯಾವುದೋ ಒಂದು ಕಾಲದಲ್ಲಿ ಏನೊಂದು ಗ್ರಾಮ ಠಾಣಗಳೆಂದು ನಿಗದಿಮಾಡಿದ್ದರೋ ಈಗಲೂ ಆ ಗ್ರಾಮಠಾಣಗಳು ಅಷ್ಟೇ ಇರುತ್ತವೆ. ಹಿಂದಿನ ಕಾಲದಲ್ಲಿ ಏನು ಒಂದೊಂದು ಮನೆಗಳೆಂದಿದ್ದವೋ ಈಗ ಅವುಗಳೆಲ್ಲ ಒಡೆದು ವಿಭಾಗವಾಗಿ ನಾಲ್ಕಾರು ಮನೆಗಳಾಗಿರುತ್ತವೆ. ಈಗ ಆ ಜನರಿಗೆ ಅಲ್ಲಿ ವಾಸ ಮಾಡಲು ಎಷ್ಟು ಕಷ್ಟವಿದೆ ಎಂಬುದನ್ನು ಮಾತುಗಳಲ್ಲಿ ಹೇಳಲಿಕ್ಕಾಗುವುದಿಲ್ಲ. ಅಲ್ಲಿಗೆ ಹೋಗಿ ಆ ವಿಚಾರಗಳನ್ನು ಕಣ್ಣಿನಲ್ಲಿ ನೋಡಿದರೆ ಮಾತ್ರವೇ ಅದು ಗೊತ್ತಾದೀತು. ಈ ದಿವಸ ಹಳ್ಳಿಗಳಲ್ಲಿ ಜನರಿಗೆ ದನಕರುಗಳನ್ನು ಕಟ್ಟಲಿಕ್ಕೆ, ಒಂದು ಕಾಂಪೋಸ್ಟ್ ಗೊಬ್ಬರ ಮಾಡಲಿಕ್ಕೆ, ಒಂದು ಬಣವೆ ಹಾಕಲಿಕ್ಕೆ, ಒಂದು ಹುಲ್ಲು ಹೊಟ್ಟಲು ಹಾಕಲಿಕ್ಕೆ ಸ್ಥಳವಿಲ್ಲ. ಈ ತೊಂದರೆಗಳೆಲ್ಲ ನಿವಾರಣೆಯಾಗಬೇಕಾಗಿದ್ದರೆ ಈಗ ಇರತಕ್ಕ ಗ್ರಾಮಠಾಣಗಳ ಸರಹದ್ದೇನಿದೆ ಅದು ಒಂದಕ್ಕೆ ಮೂರು-ನಾಲ್ಕರಷ್ಟಾದರೂ ಇರಬೇಕೆಂದು ಹೇಳುತ್ತೇನೆ. ಆದರೆ ಈ ದಿವಸ ಅಕ್ವಿಜಿಷನ್ ಪ್ರೊಸೀಡಿಂಗ್ಸ್‌ಗಳು ವೇಗವಾಗಿ ನಡೆಯದೆ ಇರುವುದರಿಂದ ಮತ್ತು ಇಂದಿನ ಅಕ್ವಿಜಿಷನ್ ಕ್ರಮದಲ್ಲಿ ಕೆಲವು ಲೋಪದೋಷಗಳಿರುವುದರಿಂದ ಗ್ರಾಮಗಳಲ್ಲಿ ಅಶಾಂತಿ ಪ್ರಕರಣಗಳುಂಟಾಗುತ್ತಿವೆ. ಈ ದಿವಸ ಸರ್ಕಾರದವರು ಯಾವುದಾದರೊಂದು ಗ್ರಾಮದಲ್ಲಿ ಯಾವುದಾದರೊಂದು ಜಮೀನನ್ನು ಇಲ್ಲವೇ ಭೂಮಿಯನ್ನು ಅಕ್ವಯಿರ್ ಮಾಡಿಕೊಳ್ಳಬೇಕೆಂದು ಪ್ರಯತ್ನ ಹೂಡಿದರೆ ಅದೇ ಗ್ರಾಮದಲ್ಲಿ ಮತ್ತೆ ಕೆಲವು ಜನರು ಗುಂಪಾಗಿ ಆ ಭೂಮಿ ಬೇಡ ಇನ್ನೊಂದು ಭೂಮಿ ತೆಗೆದುಕೊಳ್ಳಿ ಎಂಬುದಾಗಿ ಏನಾದರೊಂದು ಅಡ್ಡಿ ಆತಂಕಗಳನ್ನೊಡ್ಡಿ ಆ ಪ್ರಕರಣವನ್ನು ಬೇರೆ ಮಾಡಿಬಿಡುತ್ತಾರೆ. ಹೀಗಾಗಿ ಈ ಒಂದು ವಿಚಾರಕ್ಕಾಗಿಯೇ ಅನೇಕ ಗ್ರಾಮಗಳಲ್ಲಿ ಪಕ್ಷ-ಪಾರ್ಟಿಗಳುಂಟಾಗಿರತ್ತವೆಂಬ ಅಂಶವನ್ನು ಈ ಸಂದರ್ಭದಲ್ಲಿ ನಾನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ಆದರೆ ಸರ್ಕಾರದವರು ಈ ಬಗ್ಗೆ ಇರತಕ್ಕ ನೇಮ ನೀತಿಗಳನ್ನು ತಿದ್ದುಪಡಿಮಾಡಿದರೆ ಈಗ ನಿಧಾನ ಆಗುತ್ತಿರುವುದು ನಿಂತು ಹೋಗಿ ಜನತೆಗೆ ನೆಮ್ಮದಿಯನ್ನುಂಟುಮಾಡಬಹುದೆಂದು ಹೇಳಬಹುದು. ಆದರೆ ಈ ಪ್ರಶ್ನೆ ಅಷ್ಟು ಸುಲಭವಾಗಿ ಬಗೆಹರಿಯತಕ್ಕದ್ದಲ್ಲ, ಈ ವಿಚಾರಕ್ಕೆ ತಾವು ಒಂದು ಪ್ರತ್ಯೇಕ ಕಾನೂನನ್ನೇ ಮಾಡಬೇಕು. ಈಗಿರತಕ್ಕ ಕಾಯಿದೆಯಿಂದ ಹಳ್ಳಿಗಳಲ್ಲಿ ಪಾರ್ಟಿ-ಪಕ್ಷ ಗಳುಂಟಾಗಲು ತುಂಬ ಅವಕಾಶವಿದೆ. ಈ ತೊಂದರೆಗಳನ್ನು ನಿವಾರಣೆ ಮಾಡಲು ನಾವು ಯಾವುದಾದರೊಂದು ಸ್ಪಷ್ಟವಾದ ಹಾದಿಯನ್ನು ಹುಡುಕಲೇಬೇಕು. ಇದಕ್ಕೆ ನನ್ನದೊಂದು ಸಲಹೆಯಿದೆ. ಈ ಭೂಮಿಗಳನ್ನು ಗ್ರಾಮಬಡವಾಣೆಗೋಸ್ಕರವಾಗಿ ಅಕ್ವಯಿರ್ ಮಾಡಿಕೊಳ್ಳತಕ ಬಗ್ಗೆ ಅದೇ ಒಂದು ವಿಶಿಷ್ಟ ಕಾಯಿದೆಯನ್ನಾಗಿ ಮಾಡಬೇಕಾಗಿದೆ. ಅದಕ್ಕಾಗಿ ನಾನೀಗ ಸಲಹೆಮಾಡುವುದೇನೆಂದರೆ, ಹಿಂದೆ ಪ್ರತಿಯೊಂದು ಗ್ರಾಮದಲ್ಲೂ 1901ರಲ್ಲಿ ಏನು ಜನಸಂಖ್ಯೆಯಿತ್ತು, ಇತ್ತೀಚೆಗೆ ಎಷ್ಟು ಜನಸಂಖ್ಯೆ ಹೆಚ್ಚಾಗಿದೆ, ಯಾವ ಪ್ರಮಾಣದಲ್ಲಿ ಬೆಳೆದಿದೆ, ಅದಕ್ಕಾಗಿ ಈಗ ನಾವು ಭೂಮಿಯನ್ನು ಯಾವ ಪ್ರಮಾಣದಲ್ಲಿ ದೊರಕಿಸಿ ಕೊಡಬೇಕೆಂಬ ಅಂಶಗಳನ್ನೆಲ್ಲ ಪರಿಶೀಲನೆ ಮಾಡತಕ್ಕದ್ದು ಸರ್ಕಾರದ ಕರ್ತವ್ಯ. ಉದಾಹರಣೆಗೆ 1901 ರಲ್ಲಿ ಒಂದು ಗ್ರಾಮದ ಜನಸಂಖ್ಯೆ 2,000 ಇತ್ತೆಂದು ಇಟ್ಟುಕೊಂಡರೆ ಈಗ ಆ ಗ್ರಾಮದ ಜನ ಸಂಖ್ಯೆ ಯಾವ ಪ್ರಮಾಣದಲ್ಲಿ ಜಾಸ್ತಿಯಾಗಿದೆಯೆಂಬುದನ್ನು ಗಣನೆಗೆ ತೆಗೆದುಕೊಂಡು ಆ ದಾಮಾಷ ಪ್ರಕಾರ ಆ ಗ್ರಾಮಕ್ಕೆ ಹೆಚ್ಚಿಗೆ ಬೇಕಾಗತಕ್ಕ ಭೂಮಿಯನ್ನು ದೊರೆಕಿಸಿಕೊಡಬೇಕೆಂಬುದನ್ನು ಸರ್ಕಾರದವರು ತಮ್ಮ ತಲೆಗೆ ತೆಗೆದುಕೊಳ್ಳಬೇಕು. ಆದರೆ ಈ ದಿವಸ ಹೀಗೆ ಆಗದೆ ಯಾರಾದರೂ ಗ್ರಾಮ ಬಡಾವಣೆಗೆ ಜಾಗ ಕೇಳಿದರೆ ಸರ್ಕಾರದವರು ಆ ಜನರಿಗೆ ನೀವು ಮೊದಲು ತಹಶೀಲ್ದಾರರಿಗೆ ಅರ್ಜಿಕೊಡಿ, ಅವರು ಅದನ್ನು ಚೌಕಾಸಿಮಾಡಿ ಮೇಲೆ ಕಲೆಕ್ಟರ ಕಡೆಗೆ ಕಳುಹಿಸುತ್ತಾರೆ, ಅನಂತರ ಅದು ಮಂಜೂರಾಗುತ್ತದೆಯೆಂದು ಹೇಳುತ್ತಿರುವುದರಿಂದ ಹಳ್ಳಿಗಳಲ್ಲಿ ಈ ದಿವಸ ಅನೇಕ ರೀತಿಯಲ್ಲಿ ತೊಂದರೆಗಳಾಗಲಿಕ್ಕೆ ಹತ್ತಿದೆ. ಆದುದರಿಂದ ಈ ವಿಚಾರವನ್ನು ಸರಿಪಡಿಸಲು ಕೂಡಲೆ ಪ್ರಯತ್ನಗಳನ್ನು ನಡೆಸಬೇಕಾಗಿದೆ. ಇದಕ್ಕಾಗಿ ನಮ್ಮ ಜಿಲ್ಲೆಯಲ್ಲಿ ಸಾರ್ವಜನಿಕರಿಗೆ ಬಹಳ ಹಣ ಲುಕ್ಸಾನಾಗುತ್ತಿದೆ. ಸರ್ಕಾರಕ್ಕೂ ಬಹಳ ಹಣ ವ್ಯಯವಾಗುತ್ತಿದೆ. ಆದರೆ ಕೇವಲ ಸ್ವಲ್ಪ ಹಣದ ಖರ್ಚಿನಲ್ಲೇ ಈ ಕಾರ್ಯ ಸುಲಭವಾಗಿ ನೆರವೇರುವಂತೆ ನಾನು ಒಂದು ಸಲಹೆ ಮಾಡಬೇಕೆಂದಿದ್ದೇನೆ. ಈ ವಿಚಾರಕ್ಕೆ ಸರ್ಕಾರದವರು ಯಾವುದಾದರೊಂದು ಸಮಿತಿಯನ್ನು ಮೊದಲು ಏರ್ಪಾಡುಮಾಡಿ, ಇಲ್ಲವೇ ಒಂದು ಬೋರ್ಡನ್ನಾಗಲ ಏರ್ಪಾಡುಮಾಡಿ. ಆ ಬೋರ್ಡಿಗೆ ಇದೇ ಆದ್ಯ ಕರ್ತವ್ಯವೆಂದು ಹೇಳಿ, ಆ ಬೋರ್ಡಿಗೆ ಇಂತಿಷ್ಟು ಅಧಿಕಾರಗಳುಂಟೆಂದು ತೀರ್ಮಾನಮಾಡಿ. ಆ ಬೋರ್ಡಿನಲ್ಲಿ ಡೆಪ್ಯುಟಿ ಕಮಿಷನರಿದ್ದು ಅವರು ಈ ಆದ್ಯಕರ್ತವ್ಯದ ಬಗ್ಗೆ ನಿರ್ಣಯಮಾಡಲಿ. ಅವರ ಕೈಕೆಳಗೊಬ್ಬ ಸರ್ವೇಯರನ್ನು ಕೊಡಿ. ಆ ಬೋರ್ಡಿನವರು ಆಯಾಯಾ ಗ್ರಾಮಗಳನ್ನು ಪರಿಶೀಲನೆಮಾಡಿ ಅದರ ಜನಸಂಖ್ಯೆ ಯಾವ ಪ್ರಮಾಣದಲ್ಲಿ ಬೆಳೆದಿದೆ, ಅದಕ್ಕೆಷ್ಟು ಭೂಮಿ ಬೇಕು, ಅಲ್ಲಿ ಬಡಾವಣೆಗೆ ಯಾವ ಭೂಮಿ ಯೋಗ್ಯವಾದದ್ದು ಎನ್ನುವುದರ ಬಗ್ಗೆ ಒಂದು ರಿಪೋರ್ಟನ್ನು ಮಾಡಬೇಕು. ಅಂಥ ಆ ರಿಪೋರ್ಟನ್ನು ಮಾಡುವ ಕಮಿಟಿಯಲ್ಲಿ ಡೆಪ್ಯುಟಿ ಕಮಿಷನರೂ, ಇಂಜಿನಿಯರ್ ಅವರೂ, ಹೆಲ್ತ್ ಆಫೀಸರೂ, ಸ್ಥಳೀಯ M.L.A. ಗಳೂ ಅಥವಾ M.L.C. ಗಳೂ ಇರಬೇಕೆಂದು ನಿರ್ಣಯಮಾಡಿ. ಇಂಥ ಒಂದು ಸಮಿತಿಯವರು ಸ್ಥಳ ಪರಿಶೀಲನೆಮಾಡಿ ಗ್ರಾಮಕ್ಕೆ ಅತಿ ಸಮೀಪದಲ್ಲೋ ಅಥವಾ ಮತ್ತೆಲ್ಲೋ ಇಂಥ ಭೂಮಿ ಗ್ರಾಮ ವಿಸ್ತೀರ್ಣಕ್ಕೆ ಯೋಗ್ಯವಾಗಿದೆಯೆಂದು ಅವರೊಂದು ನಿರ್ಣಯವನ್ನು ಕೊಟ್ಟಮೇಲೆ ಸರ್ಕಾರದವರು ಆ ಸಂಬಂಧಪಟ್ಟ ಭೂಮಾಲೀಕನಿಗೆ

(ಶ್ರೀ ಎಂ. ಆರ್. ಪಾಟೀಲ್)

ಮತ್ತೊಂದು ಅಪೀಲ್ ವಗೈರೆ ಮಾಡಿಕೊಳ್ಳಲಿಕ್ಕೆ ಅವಕಾಶವಿರದಂತೆ ಒಂದು ಸರಿಯಾದ ಕಾಯಿದೆಯನ್ನು ಮಾಡಿ, ಇಲ್ಲವೇ ಇರತಕ್ಕ ಕಾಯಿದೆಗೆ ಈ ರೀತಿ ಒಂದು ತಿದ್ದುಪಡಿಯನ್ನಾದರೂ ಮಾಡಿ, ಇಷ್ಟೆಲ್ಲಾ ಅದನಂತರ ಆ ಸರ್ವೇಯರು ಆ ಸ್ಥಳದಲ್ಲಿ ಸರ್ವೇ ಪ್ಲಾನನ್ನು ಹಾಕಿ, ಪ್ಲಾಟುಗಳನ್ನು ವಿಂಗಡಿಸಿ ನಾಲ್ಕು ಕುಂಟೆಯೋ-ಆರು ಕುಂಟೆಯೋ ಎಂದು ಯಾವುದಾದರೂ ಒಂದು ಲೆಕ್ಕಾಚಾರದ ಮೇಲೆ ಒಂದೊಂದು ಪ್ಲಾಟನ್ನು ಮಾಡಿ, ಇಷ್ಟು ಎಕರೆ ಭೂಮಿ, ಇಂತಿಷ್ಟು ಪ್ಲಾಟು ಎಂದು ಮಾಡಿ, ಆ ಪ್ಲಾಟುಗಳನ್ನು ಎರಡು ವರ್ಷಗಳೊಳಗಾಗಿ ಆ ಭೂಮಿಯ ಮಾಲೀಕ ಯಾರಿದ್ದಾನೋ ಅವನು ಹರಾಜ್ ಅಥವಾ ಲೀಲಾವಿನಲ್ಲಿ ಆ ಪ್ಲಾಟುಗಳನ್ನು ಮಾರಾಟಮಾಡಲು ಆತನಿಗೇ ಕೊಡತಕ್ಕದ್ದು. ಹಾಗೊಂದು ವೇಳೆ ಆ ಮಾಲೀಕನು ಆ ಭೂಮಿಯನ್ನು ಎರಡು ವರ್ಷಗಳ ಮಾಯಿದೆಯೊಳಗೆ ಮಾರಾಟಮಾಡಿಕೊಳ್ಳದಿದ್ದಲ್ಲಿ ಆ ಭೂಮಿಯನ್ನು ಅವನು ಬೇಕಾಗಿಯೋ, ಬೇಡವಾಗಿಯೋ ನಿಲ್ಲಿಸಿದ್ದಕ್ಕಾಗಿ ಅವನಿಗೆ ಇಂತಿಷ್ಟು ಫೈನು ಕೊಡುವಂತೆ ಹೇಳಿ ಆ ಭೂಮಿಯಲ್ಲಿ ಯಾವ ಬೆಳೆಯನ್ನು ಬೆಳಸಲೂ ಅವಕಾಶ ಕೊಡದ ರೀತಿಯಲ್ಲಿ ಅದನ್ನು ಒಕ್ಕಲುತನದ ಉಪಯೋಗಕ್ಕಾಗಿ ವಶಪಡಿಸಿಕೊಳ್ಳಲಾಗಿದೆಯೆಂದು ಡೆಪ್ಯುಟೀ ಕಮಿಷನರ ಮೂಲಕ ಒಂದು ಹೇಳಿಕೆಯನ್ನು ಹೊರಡಿಸಿ ಆ ಜಮೀನನ್ನು ಲಿಲಾವಿನಲ್ಲೋ ಅಥವಾ ಹರಾಜಿನಲ್ಲೋ ಆ ಗ್ರಾಮದ ಜನಗಳಿಗೆ ಮಾರಾಟಮಾಡತಕ್ಕದ್ದು ಎಂಬುದಾಗಿ ಒಂದು ವ್ಯವಸ್ಥೆ ಮಾಡಿದರೆ ಆಗ ಜನರಿಗೆ ವಾಸಮಾಡಲು ಸ್ಥಳ ಸಿಕ್ಕುತ್ತದೆ. ಈ ರೀತಿಯಾದ ಒಂದು ಏರ್ಪಾಡನ್ನು ಮಾಡಬೇಕು. ಈ ರೀತಿಯ ಒಂದು ಪ್ರಯತ್ನ ಪ್ರತಿಯೊಂದು ಗ್ರಾಮಕ್ಕೂ ಅವಶ್ಯಕವಿದೆ. ಈ ವಿಚಾರ ತಮ್ಮ ತಲೆಯಲ್ಲಿ ತೆಗೆದುಕೊಳ್ಳಬೇಕು. ಅದಕ್ಕಾಗಿ ನಾನೀಗ ಸಲಹೆ ಮಾಡುವುದೇನೆಂದರೆ ಈ ವಿಚಾರಗಳನ್ನೆಲ್ಲಾ ಪರಿಶೀಲನೆ ಮಾಡಿ ಸರ್ಕಾರಕ್ಕೆ ಒಂದು ರಿಪೋರ್ಟ್ ಕೊಡಲು ಈ ಮಾನ್ಯ ಸಭೆಯು ನಾಲ್ಕು-ಎಂಟು-ಹತ್ತು ಜನರ ಒಂದು ಸಮಿತಿಯನ್ನು ಮಾಡತಕ್ಕದ್ದು; ಆ ಸಮಿತಿಯವರು ಆದಷ್ಟು ಜಾಗ್ರತೆ ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಪ್ರಯತ್ನಮಾಡಬೇಕು. ಹೀಗೆ ನಾವು ಏನಾದರೊಂದು ಮಾರ್ಗವನ್ನು ಹುಡುಕದಿದ್ದರೆ ನಾವೇ ನಮ್ಮ ಹಳ್ಳಿಗಳನ್ನು ಕೆಡಿಸಲಿಕ್ಕೆ ಒಂದು ದೊಡ್ಡ ಕಾರಣವಾಗಿ ನಿಲ್ಲುತ್ತೇವೆ. ಆದುದರಿಂದ ಸರ್ಕಾರದವರು ಈ ಸಮಸ್ಯೆಗಳನ್ನೆಲ್ಲಾ ಪರಿಹರಿಸಲು ಒಂದು ಸಮಿತಿಯನ್ನು ಏರ್ಪಾಡುಮಾಡಿ ಅದಕ್ಕೆ ಬೇಕಾದ ಸೌಕರ್ಯಗಳನ್ನೊದಗಿಸುವುದಲ್ಲದೆ ಈ ಬಗ್ಗೆ ಒಂದು ಸೂಕ್ತ ಕಾಯಿದೆಯನ್ನೂ ಸಹ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಇನ್ನು ಗ್ರಾಮಸ್ಥರ ಮತ್ತು ಸರ್ಕಾರಿ ಜನರ ಸಂಪರ್ಕ ಅಥವಾ ಒಂದು ಸಂಬಂಧ ಯಾವ ಪ್ರಕಾರ ನಡೆದುಕೊಂಡು ಬರುತ್ತಿದೆ ಎನ್ನುವುದರ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಡೆಪ್ಯುಟೀ ಕಮಿಷನರಿಂದ ಹಿಡಿದು ತಲಾಟಿವರೆಗೂ ಅವರವರಿಗೆ ಹಿಂದೆ ನಡೆಯುತ್ತಿದ್ದ ಒಂದು ಕಾಗದ ಪತ್ರಗಳ ವ್ಯವಹಾರದಿಂದಲೇ, ಹಳ್ಳಿಗಳಿಗೇನು ಅಮಲ್ದಾರರ ಒಂದು ಸಂಪರ್ಕವಿತ್ತೋ ಅದು ಒಂದರಿಂದಲೆ ಹಳ್ಳಿಯ ಜನರ ಸ್ಥಿತಿಗತಿಗಳೇನು, ಅವರ ತೊಂದರೆಗಳೇನು ಎನ್ನುವುದನ್ನು ಅಮಲ್ದಾರರು ಅವರ ನೌಕರರ ಮೂಲಕ ತಿಳಿದುಕೊಳ್ಳಲು ಒಂದು ಅವಕಾಶವಿತ್ತು. ಆದರೆ ಈ ದಿವಸ ಅಂಥ ಒಂದು ಸಂಪರ್ಕ ಬಿಟ್ಟುಹೋಗಿದೆ. ಯಾರೊಬ್ಬರಿಗಾಗಲಿ ಡೆಪ್ಯುಟೀ ಕಮಿಷನರಿಂದ ಹಿಡಿದು ಅಸಿಸ್ಟೆಂಟ್ ಕಮಿಷನರು, ತಹಶೀಲ್‌ದಾರ್, ತಲಾಟಿಯವರೆಗೂ ಒಬ್ಬರನ್ನೊಬ್ಬರು ಏನು ಚೆಕ್ ಮಾಡುತ್ತಿದ್ದಾರೆಂದರೆ ಯಾವಯಾವ ಗ್ರಾಮದಲ್ಲಿ ಸರ್ಕಾರಕ್ಕೆಷ್ಟೆಷ್ಟು ಬಾಕಿ ಬರಬೇಕಾಗಿದೆ, ಯಾರುಯಾರು ಎಷ್ಟುಬಾಕಿ ವಸೂಲ್ಮಾಡಿದ್ದಾರೆ, ವಸೂಲ್ಮಾಡದಿದ್ದರೆ ಇಂಥಿಂಥವರು ಇಷ್ಟು ಹಣವನ್ನು ಈ ಅವಧಿಯಲ್ಲಿ ವಸೂಲ್ಮಾಡಿಕೊಡಲೇಬೇಕು ಎಂಬ ಇಷ್ಟು ವಿಚಾರಗಳು ನಡೆಯುತ್ತಿವೆಯೇ ಹೊರತು ಗ್ರಾಮನಿವಾಸಿಗಳಿಗೇನು ತೊಂದರೆಯಿದೆ, ಅವರ ಪರಿಣಾಮವೇನು ಎನ್ನತಕ್ಕ ವಿಚಾರಗಳನ್ನೆಲ್ಲಾ ಈ ಅಧಿಕಾರಿಗಳು ಈಗ ಸಂಪೂರ್ಣವಾಗಿ ಬಿಟ್ಟುಬಿಟ್ಟಿದ್ದಾರೆ. ಅನೇಕರಿಗೆ ಈ ವಿಚಾರ ಹೇಳುವುದಕ್ಕೆ ಸಹ ಧೈರ್ಯವಿಲ್ಲದ್ದರಿಂದ ಆ ಸಂಪರ್ಕವಿನ್ನೂ ಬಿಟ್ಟುಹೋಗುತ್ತಿದೆ.

ಮೊದಲು ಡೆಪ್ಯುಟಿಕಮಿಷನರು ಮತ್ತು ಅಸಿಸ್ಟೆಂಟ್ ಕಮಿಷನರು ಹಳ್ಳಿಗಳಲ್ಲಿ ಒಂದು ರಾತ್ರಿ, ಎರಡು ರಾತ್ರಿ ಕ್ಯಾಂಪ್ ಮಾಡುತ್ತಿದ್ದರು. ತಹಸೀಲ್ದಾರರು ಎರಡು ಮೂರು ದಿವಸ ಕ್ಯಾಂಪ್ ಮಾಡುತ್ತಿದ್ದರು. ಈಚೆಗೆ ಅಧಿಕಾರಿಗಳು ಕ್ಯಾಂಪ್ ಮಾಡುವುದನ್ನೇ ನಾವು ನೋಡುತ್ತಿಲ್ಲ. ಒಬ್ಬ ತಹಸೀಲ್ದಾರ ಒಂದು ಗ್ರಾಮಕ್ಕೆ ಬಂದರೆ ಆತನು ಅವಸರದಲ್ಲಿ ಕೆಲವು ಕಾಗದಪತ್ರಗಳಿಗೆ ಸೈನ್ ಮಾಡಿ ಹೊರಟುಹೋಗುತ್ತಾನೆ. ಡೆಪ್ಯುಟಿ ಕಮೀಷನರು ಗ್ರಾಮಗಳಿಗೆ ಭೇಟಿಯನ್ನು ಕೊಡುತ್ತಿಲ್ಲ. ಗ್ರಾಮದ ಜನರ ಸಂಪರ್ಕ ಪೂರ್ಣ ಹೋಗಿದೆ. ಡೆಪ್ಯುಟಿ ಕಮೀಷನರು ಗ್ರಾಮಕ್ಕೆ ಬರುವುದೆಂದರೆ inauguration ceremony ಅಥವಾ ಯಾವುದಾದರೂ opening ceremony ಇಂಥದ್ದಕ್ಕೆ ಮಂತ್ರಿಗಳು ಬಂದ ಕಾಲದಲ್ಲಿ ಮಾತ್ರ. ಇತರ ವೇಳೆಗಳಲ್ಲಿ ಗ್ರಾಮಕ್ಕೆ ಭೇಟಿ ಕೊಟ್ಟು ಕ್ಯಾಂಪ್ ಹಾಕಿ ಅಲ್ಲಿನ ಜನರ ಅಡಚಣೆ, ಆಪತ್ತುಗಳನ್ನು ತಿಳಿದುಕೊಂಡು ಕೆಲಸ ಮಾಡುವುದು ವಿರಳ. ಇದಕ್ಕೆ ಅನೇಕ ಕಾರಣಗಳನ್ನು ಶ್ರೀ ಕೆ. ಪುಟ್ಟಸ್ವಾಮಿಯವರು ಹೇಳಿದರು. ಅದಕ್ಕೆ ಬಹುಮಟ್ಟಿಗೆ ನನ್ನ ಒಪ್ಪಿಗೆ ಇದೆ ಎಂದು ಹೇಳಬಯಸುತ್ತೇನೆ.

ತಹಸೀಲ್ದಾರ್, ಕಲೆಕ್ಟರ್ ಮತ್ತು ಉಳಿದ ಅಧಿಕಾರಿಗಳಿಗೆ, ಒಂದು ತಿಂಗಳೊಳಗೆ ಹದಿನೈದು ದಿವಸ ಕಮಿಟಿಯ ಕೆಲಸಗಳಿರುತ್ತವೆ. ಇದರಿಂದ ಇವರು ತಮ್ಮ ಕೆಲಸದ ಕಡೆಗೆ ಹೆಚ್ಚು ಲಕ್ಷ್ಯ ಕೊಡುವುದಕ್ಕೆ ಆಗುತ್ತಿಲ್ಲ. ಇದರ ಜೊತೆಗೆ ಯಾರೋ ಒಬ್ಬ ಮೇಲಿನ ಅಧಿಕಾರಿಗಳು, ಮತ್ತೊಬ್ಬರು ಬರುವವರಿರುತ್ತಾರೆ. ಸಾಮಾನ್ಯವಾಗಿ ಇವರು ತಮ್ಮ ಕಾಗದ ಪತ್ರಗಳಿಗೆ ಮೇಲಿಂದ ಮೇಲೆ ಸ್ವಲ್ಪ ಲಕ್ಷ್ಯ ಕೊಟ್ಟರೆಂದರೆ ಉಳಿದ ಗ್ರಾಮಾಂತರ ಪ್ರದೇಶದ ಜನರ ಕಡೆಗೆ, ಗ್ರಾಮದ ಜನರ ಅಡಚಣೆ ಆಪತ್ತಿನ ಕಡೆಗೆ ಲಕ್ಷ್ಯ ಕೊಡುವುದು ಕಡಮೆಯಾಗಿದೆ. ಇತ್ತಕಡೆ ಸರ್ಕಾರದವರು ಲಕ್ಷ್ಯಹಾಕಬೇಕು. ಇವರಿಗೆ ಒಬ್ಬ ಅಸಿಸ್ಟೆಂಟನ್ನು ಕೊಟ್ಟರೆ ಆಗ ಕೆಲಸವನ್ನು ನಿರ್ವಹಿಸಲಿಕ್ಕೆ ಬರುತ್ತದೆ. ಈ ಕಡೆಗೆ ಸರ್ಕಾರ ಲಕ್ಷ್ಯಕೊಡಬೇಕೆಂದು ನನ್ನ ವಿನಂತಿ ಇದೆ.

ಇನ್ನೊಂದು ವಿಷಯವೇನೆಂದರೆ, ಗ್ರಾಮಗಳಿಗಾಗಿ ಅನೇಕ ಯೋಜನೆಗಳನ್ನು ಮಾಡುತ್ತೀರಿ. ಆ ಯೋಜನೆಗಳು ಮೇಲಿನಿಂದ ಬಂದುವೇ ಆಗಲಿ, ಅಥವಾ ಇಲ್ಲಿಂದ ಆದದ್ದೇ ಆಗಲಿ, ಬಹುಮಟ್ಟಿಗೆ ಪಬ್ಲಿಕ್‌ವರ್ಕ್ಸ್ ಇಲಾಖೆಯ ನೀರಾವರಿಯಂಥ ದೊಡ್ಡ ವಿಷಯಗಳನ್ನು ಬಿಟ್ಟು ಸಣ್ಣ ಸಣ್ಣ ಯೋಜನೆಗಳಿಗೆ ಕೆಲವು ಹಣ ವ್ಯಯವಾಗುತ್ತಿದೆ. ಅದು ಸಪಾತ್ರದಲ್ಲಿ ಮುಟ್ಟುತ್ತದೆಯೇ ದುಷ್ಪಾತ್ರದಲ್ಲಿ

ಮುಟ್ಟುತ್ತದೆಯೋ ಎನ್ನುವ ಸಂಶಯ ಬರುತ್ತದೆ. ಈಗ basic schools ಎಂದು ತೆಗೆದರು. ಯಾವ ಗ್ರಾಮ ಪ್ರಾಮುಖ್ಯವಾಗಿ ಒಕ್ಕಲುತನದ ಗ್ರಾಮ ವಾಗಿದೆಯೋ ಅಲ್ಲಿ spinning and weaving ಇವುಗಳನ್ನು ಕಲಿಸಲು ಶಾಲೆಗಳನ್ನು ಮಾಡಲಿಕ್ಕೆ ಹತ್ತಿದ್ದಾರೆ. ಯಾವ ಗ್ರಾಮದಲ್ಲಿ ನೇಕಾರರು ಇದ್ದಾರೆಯೋ ಅಲ್ಲಿ Agricultural basic school ತೆಗೆಯುವುದೂ ಕಂಡುಬರುತ್ತದೆ. ನಮ್ಮಲ್ಲಿ ಒಕ್ಕಲುತನ ಪ್ರಾಮುಖ್ಯವಾಗಿ 26 ಗ್ರಾಮಗಳಲ್ಲಿದೆ. ಅಲ್ಲಿ ಏಕೆ ಒಕ್ಕಲುತನದ ಬೇಸಿಕ್ ಶಾಲೆಗಳನ್ನು ತೆಗೆಯುತ್ತಿಲ್ಲ? ಯಾವುದೇ ಹೋದರೂ ಈ ವಿಷಯ ತಿಳಿಯುತ್ತದೆ. ಅನೇಕ ಗ್ರಾಮಗಳಲ್ಲಿ ಗೋಡೌನ್‌ಗಳನ್ನು ಕಟ್ಟಲು ಹತ್ತು ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಇದನ್ನು ಏಕೆ ಕಟ್ಟಿಸಿಕೊಡುತ್ತಾರೆ? ಗ್ರಾಮಾಂತರದ ಜನರಿಗೆ ಇದರಿಂದ ಎಷ್ಟು ಉಪಯೋಗವಾಗುತ್ತದೆನ್ನುವುದು ಗೊತ್ತಿಲ್ಲ. ವಿಷಯಾಂತರವಾಗುತ್ತದೆಂದು ತಿಳಿದುಕೊಂಡು ಆ ಮಾತಿಗೆ ನಾನು ಹೋಗುವುದಿಲ್ಲ. ನಮಗೆ ಅವಶ್ಯವಾಗಿ ಏನು ಬೇಕಾಗಿದೆ ಅತ್ತಕಡೆ ನಮ್ಮ ಯೋಜನೆಗಳು ಹೊರಳದೆ, ಬೇಕಾಗಿಲ್ಲದೆ ಇರುವ ವಿಷಯಗಳಿಗೆ ನಮ್ಮ ಹಣ ವ್ಯಯವಾಗಲಿಕ್ಕೆ ಹತ್ತಿದೆ. ಸರ್ಕಾರದವರು ಗ್ರಾಮಾಂತರ ಪ್ರದೇಶಕ್ಕೆ ಏನು ಬೇಕೋ ಅದಕ್ಕೆ ಲಕ್ಷ್ಯ ಕೊಟ್ಟು ಗ್ರಾಮಾಂತರ ಪ್ರದೇಶದ ಜನರಿಗೆ ಅನುಕೂಲ ಮಾಡಿಕೊಡಬೇಕಾಗಿದೆ. ಅಲ್ಲದೆ ಗ್ರಾಮಾಂತರ ಪ್ರದೇಶಗಳಿಂದ ಬರುವಂಥವರಿಗೆ ಬೇಕಾದ ಮಾಹಿತಿ ಸಿಕ್ಕುವಂತೆ ಲಕ್ಷ್ಯ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

*ಶ್ರೀ ಎಂ. ಲಿಂಗೇಗೌಡ (ಕನಕಪುರ).—ಮಾನ್ಯ ಅಧ್ಯಕ್ಷರೇ, ಸಾಮಾನ್ಯ ಆಡಳಿತದ ಮೇಲೆ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿಟ್ಟಿರತಕ್ಕ ಡಿಮ್ಯಾಂಡ್‌ಗಳ ಪ್ರಕಾರ ಇಷ್ಟು ಹಣವನ್ನು ಕೊಡುವುದಕ್ಕೆ ಸಾಧ್ಯವಿಲ್ಲ ವೆನ್ನುವ ಉದ್ದೇಶದಿಂದ ನಾನು ಕೆಲವು ವಿಷಯಗಳನ್ನು ಸಭೆಯ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಮೊದಲನೆಯದಾಗಿ ಅಸೆಂಬ್ಲಿ ಬಾಬತ್ತಿಗೆ 8,00,600 ರೂಪಾಯಿಗಳನ್ನು ಕೇಳಿದ್ದಾರೆ ಇಷ್ಟೆಲ್ಲ ಹಣ ಸಿಕ್ಕಿದರೂ ಕೂಡ ಅಸೆಂಬ್ಲಿಯ ಘನತೆ ಗೌರವಗಳನ್ನು ಉಳಿಸುವ ಉದ್ದೇಶದಿಂದ ಅಧ್ಯಕ್ಷರಿಗೆ ನಿಗದಿಯಾದ ಡ್ರೆಸ್ ಕೊಡಲು ಏರ್ಪಾಡು ಮಾಡುವುದು ಒಳ್ಳೆಯದೆಂದು ನನಗೆ ಕಾಣುತ್ತದೆ. ಏಕೆಂದರೆ ಇಂಥ ಗೌರವ ಸ್ಥಾನ ಬಹು ಮುಖ್ಯವಾದುದು. ಆ ಗೌರವ ಸ್ಥಾನವನ್ನುಳಿಸಿಕೊಳ್ಳಬೇಕಾಗಿದ್ದರೆ ಡ್ರೆಸ್ ಕಾರಣ ಎಂದು ಹೇಳುವುದಿಲ್ಲ, ಆದರೆ ಅದಕ್ಕೆ ಪ್ರಾವಿಷನ್ ಮಾಡಬೇಕಾಗಿತ್ತು. ಅವರಿಗೆ ನಿಗದಿಯಾದ ಡ್ರೆಸ್ ಇರಬೇಕು. ಅವರು ಆ ಉಡುಪನ್ನು ಧರಿಸಬೇಕು.

ಉಪಾಧ್ಯಕ್ಷರು.—ಎಲ್ಲ ಲೆಜಿಸ್ಲೇಚರ್‌ಗಳಲ್ಲಿಯೂ ಇದೇ convention follow ಮಾಡುತ್ತಾರೆಯೇ ಎಂದು ಯೋಚನೆಮಾಡಿ.

ಶ್ರೀ ಎಂ. ಲಿಂಗೇಗೌಡ.—ಹಾಗೆ ಮಾಡಿದರೆ, ಆ ಉಡುಪನ್ನು ಹಾಕಿಕೊಂಡಲ್ಲಿ ಅಧ್ಯಕ್ಷಸ್ಥಾನದಿಂದ ಹೆಚ್ಚಿಗೆ ಮಾತನಾಡುವುದು ಕಡಮೆಯಾಗಬಹುದು ಎಂದು ನಾನು ಸಲಹೆ ಮಾಡುತ್ತೇನೆ.

ಉಪಾಧ್ಯಕ್ಷರು.—ಹಾಗೆಲ್ಲ ಮಾತನಾಡಬಾರದು.

ಶ್ರೀ ಎಂ. ಲಿಂಗೇಗೌಡ.—ಅಧ್ಯಕ್ಷರು ಹೆಚ್ಚಿಗೆ ಮಾತನಾಡುತ್ತಾರೆಂದು ಹೇಳುತ್ತಿಲ್ಲ. ಸಾಮಾನ್ಯವಾಗಿ ಗೊತ್ತಾದ ಉಡುಪು ಇದ್ದರೆ ಮಾತನಾಡುವುದು ಸ್ವಲ್ಪ ಕಡಮೆಯಾಗಬಹುದು ಎನ್ನುವ ಅಭಿಪ್ರಾಯದಿಂದ ಹೇಳುತ್ತಿದ್ದೇನೆ.

ಚುನಾವಣೆಗಳಿಗಾಗಿ 7,60,600 ರೂಪಾಯಿಗಳನ್ನು ಒದಗಿಸಿದ್ದಾರೆ. ಇಷ್ಟೆಲ್ಲ ಏಕೆಂದರೆ ವೋಟರ್ಸ್ ಲಿಸ್ಟ್ ತಯಾರು ಮಾಡಬೇಕು, ಅದು ಪ್ರಿಂಟ್ ಆಗಬೇಕು, ಅದಕ್ಕೆ ಬೇಕಾದ ಸಿಬ್ಬಂದಿಯನ್ನು ಕೊಡಬೇಕು. ವೋಟರುಗಳ ಪಟ್ಟಿ ತಯಾರಾಗುತ್ತದೆಂದರೆ ತಳಹದಿಯಲ್ಲಿಯೇ ಅದು ಕೆಟ್ಟುಹೋಗುತ್ತದೆ. ಶ್ಯಾನುಭೋಗರು ಪಹಣಿ ಫಾರಂ ಬರೆಯುತ್ತಾರೆ. ಅದೇ ರೀತಿಯಲ್ಲಿ ವೋಟರುಗಳ ಪಟ್ಟಿಯನ್ನೂ ಬರೆಯುತ್ತಾರೆ. ಅದರಲ್ಲಿ ಅನೇಕ ಹೆಸರುಗಳು ಬಿಟ್ಟುಹೋಗಿರುತ್ತವೆ, ಹೆಸರುಗಳಲ್ಲಿ ವಿಶೇಷ ತಪ್ಪುಗಳು ಇರುತ್ತವೆ. ಇದಕ್ಕೆ ಬಹಳ ನಿಗಾ ಕೊಟ್ಟು ವೋಟರುಗಳ ಪಟ್ಟಿಯನ್ನು ಸರಿಯಾಗಿ ತಯಾರಿಸಲು ಏರ್ಪಾಡು ಮಾಡಬೇಕು. ಈಗ ಮಾಡಿರತಕ್ಕದ್ದು ಸಾಲದು. ಅದನ್ನು ಸರಿಪಡಿಸಬೇಕೆಂದು ಸೂಚನೆಯನ್ನು ಕೊಡುತ್ತೇನೆ.

ಸಿವಿಲ್ ಸೆಕ್ರೆಟೇರಿಯಟ್ಟಿಗೆ ಒದಗಿಸಿರುವ ಹಣದ ವಿಷಯದಲ್ಲಿ ಹೇಳುವುದಾದರೆ ಶ್ರೀ ಎ. ಡಿ. ಗೋರ್ವಾಲಾ ಅವರ ರಿಪೋರ್ಟನ್ನು ಮುಂದೆ ಇಟ್ಟಿಲ್ಲ. ಅದನ್ನು ಸಭೆಯ ಮುಂದೆ ಇಟ್ಟಾಗ ಚರ್ಚೆಮಾಡಿ, ಸಭೆಯ ಅಭಿಪ್ರಾಯವನ್ನು ತೆಗೆದುಕೊಂಡು, ಅನಂತರ ಅವರ ಸಿಫಾರಸುಗಳನ್ನು implement, ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇತ್ತು ಎಂದು ಕಾಣುತ್ತದೆ. ಆದರೆ G.A.D. ಸರ್ಕ್ಯುಲರ್‌ನಲ್ಲಿ ಇವರ ಸಿಫಾರಸಿನಂತೆ ಹೊಸ ಪದ್ಧತಿಯನ್ನು ಜಾರಿಗೆ ತಂದು ಮೂರು ತಿಂಗಳ ಕಾಲದಲ್ಲಿ ಆ ಸರ್ಕ್ಯುಲರ್ ಹೇಗೆ ಕೆಲಸಮಾಡುತ್ತದೆಂಬುದನ್ನು ನೋಡಿಕೊಂಡು ಅದನ್ನು ರೆವ್ಯೂ ಮಾಡುತ್ತೇವೆಂದು ಸರ್ಕಾರದವರು ಪ್ರಾಮಿಸ್ ಮಾಡಿದ್ದರು. ಇಲ್ಲಿಯವರೆಗೂ ರೆವ್ಯೂ ಮಾಡಿಲ್ಲ. ಆದರೆ ಗೋರ್ವಾಲಾ ವರದಿಯನ್ನು ಅನೇಕ ಸಂದರ್ಭಗಳಲ್ಲಿ ಜಾರಿಗೆ ಕೊಡುತ್ತಿದ್ದಾರೆಂದು ನಮಗೆ ಗೊತ್ತಾಗುತ್ತದೆ. ಈ ವರದಿಯು ಚರ್ಚೆಯಾಗಿ, ಈ ಸಭೆಯ ಅಭಿಪ್ರಾಯವನ್ನು ತೆಗೆದುಕೊಂಡು, ಅನಂತರ ಜಾರಿಗೆ ಕೊಡುವುದರಲ್ಲಿ ನ್ಯಾಯವಿದೆ. ಅದರಲ್ಲಿ ಅನಾನುಕೂಲಗಳೇನಿವೆ ಎನ್ನುವುದನ್ನು ಈಗಿನ ಮಂತ್ರಿಮಂಡಳವು ಗೊತ್ತುಮಾಡಿಕೊಂಡಿದ್ದಾರೆಯೋ ಇಲ್ಲವೋ ಎಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ತಾವು G.A.D. Section ನ್ನಿನಲ್ಲಿ ಸಾದರಾದ ಅಕ್ಟೋಬರ್ ಎಂಟರ G.O. ಪ್ರಕಾರ ಮೂರು ತಿಂಗಳಿಗೊಂದು ಸಾರಿ "Review" ಮಾಡಬೇಕು ಎಂದು ಅದರಲ್ಲಿ ಬರೆದಿರುವಂತೆ ನಮಗೆ ಗೊತ್ತಾಗುತ್ತದೆ. ಆ ರೀತಿಯಲ್ಲಿ ಸಂಪೂರ್ಣವಾಗಿ ತಾವು ಇದನ್ನು ಜಾರಿಗೆ ಕೊಟ್ಟಿಲ್ಲ. ಆದರಿಂದಾಗಿ ನಾವು ಬಹುಮಟ್ಟಿಗೆ ಈ ವಿಷಯದಲ್ಲಿ ಸರಕಾರವನ್ನು ತೀವ್ರವಾಗಿ ವಿರೋಧ ಮಾಡಬೇಕಾಗಿದೆ.

5-30 P.M.

ನೌಕರಿಗಳನ್ನು ನೇಮಕ ಮಾಡುವ ಅಧಿಕಾರವನ್ನು ಈಗ ಚೀಫ್ ಸೆಕ್ರೆಟರಿಗಳಿಗೆ ಕೊಡಲಾಗಿದೆ. ಇವರು Public Service Commissioner ಅನ್ನು consult ಮಾಡದೆ ಮಾಡುತ್ತಿದ್ದಾರೆ. ಅಲ್ಲದೆ ಎಲ್ಲ ರೀತಿಯ Examination ಮತ್ತು ಪ್ರೈವವೋಸಿಗಳನ್ನು conduct ಮಾಡುತ್ತ ಇರುವವರು ಚೀಫ್ ಸೆಕ್ರೆಟರಿಗಳು. ಹೀಗೆ ಚೀಫ್ ಸೆಕ್ರೆಟರಿ ಒಬ್ಬರಿಗೇ ಎಲ್ಲ ಅಧಿಕಾರಗಳನ್ನು ಕೊಟ್ಟಿರುವುದರಿಂದ ಇದರಿಂದೇನೂ ಪ್ರಯೋಜನವಾಗುವುದಿಲ್ಲ. ಇದರಲ್ಲಿ dangers ಗಳಿವೆ. ತಾವು ತಕ್ಕಷ್ಟು safeguards ಮಾಡಬೇಕೆಂದು, ಸರ್ವಿಸ್ಸಿನಲ್ಲಿ Social justice ಇರಬೇಕೆಂದು ಹೇಳುತ್ತಿದ್ದೇನೆ....

ಶ್ರೀ ಟಿ. ಮರಿಯಪ್ಪ.–ಚೀಫ್ ಸೆಕ್ರೆಟರಿಯವರೇನೂ ವ್ಯೈವೋಓಸಿ ಯನ್ನು ಮಾಡುತ್ತಿಲ್ಲ. ಪಬ್ಲಿಕ್ ಸರ್ವಿಸ್ಸು ಕಮಿಷನ್ನಿಗೆ ಇವರನ್ನು co-opt ಮಾಡಿ ಕೊಂಡು observer ರೀತಿಯಂತೆ ಇದ್ದಾರೆ. ಅದ ಕ್ಕಿಂತ ಹೆಚ್ಚಿನ ಅಧಿಕಾರವೇನೂ ಇಲ್ಲ.

ಶ್ರೀ ಎಂ. ಲಿಂಗೇಗೌಡ.—ಈಗ ಶ್ರೀ ಗೋರವಾಲ ರವರು ಈ ರೀತಿಯಾದ ಕೆಲವು ಅಭಿಪ್ರಾಯಗಳನ್ನು ಹೇಳಿರುವುದನ್ನು ತಾವು ಒಪ್ಪಿಕೊಂಡು ಕೆಲವು ಕ್ರಮಗ ಳನ್ನು ತೆಗೆದುಕೊಳ್ಳಲಾಗಿದೆ ಎಂದು ತಿಳಿದುಬಂದಿದೆ. ಹೀಗೆ ಮಾಡುವಾಗ ಈ ಸಭೆಯ ಸದಸ್ಯರ ಅಭಿಪ್ರಾಯ ಗಳನ್ನು ತಿಳಿದುಕೊಳ್ಳದೆ ಈ ರೀತಿ ಮಾಡುವುದನ್ನು, ನಾವು ಒಪ್ಪುವುದಿಲ್ಲ.

ಶ್ರೀ ಟಿ. ಮರಿಯಪ್ಪ.—ಈಗ ನಾವು ಏನು ಮಾಡಿ ದ್ದೇವೆಂದರೆ, ಒಂದು trial ಆಗಿ ನೋಡೋಣವೆಂದು ಮೊದಲು ಫಸ್ಟು ಡಿವಿಜನ್ನು ಕ್ಲಾರ್ಕು ನೋಟನ್ನು ಹಾಕುತ್ತಿದ್ದುದಕ್ಕೆ ಬದಲಾಗಿ ಈಗ ಅಂಡರ್ ಸೆಕ್ರೆಟರಿಗಳು ನೋಟನ್ನು ಹಾಕಬಹುದು ಎಂದು ಮತ್ತು ಶ್ರೀ ಮಲ್ಲಾರಾಧ್ಯರವರು ಹೇಳಿದ ಹಾಗೆ ಡೆಪ್ಯುಟೀ ಸೆಕ್ರೆಟರಿಗಳು ಸರಿಯಾದ ಕೇಸುಗಳನ್ನು work up ಮಾಡುವುದಿಲ್ಲ, ಎನ್ನುವ ದೃಷ್ಟಿಯಿಂದ ಈಗ ಡೆಪ್ಯುಟಿ ಸೆಕ್ರೆಟರಿಗಳಿಗೆ, ಅಂಡರ್ ಸೆಕ್ರೆಟರಿಗಳಿಗೆ Steno-Typists ಗಳನ್ನು ಕೊಟ್ಟು ಅವರಿಗೆ ನೋಟುಗಳನ್ನು dictate ಮಾಡಬೇಕೆಂದು ಮಾಡ ಲಾಗಿದೆ. ಫಸ್ಟು ಡಿವಿಜನ್ನು ಕ್ಲಾರ್ಕುಗಳು ಬರೀ ಪೇಪರುಗಳನ್ನು ತೆಗೆದುಕೊಡಬೇಕು. They should not waste time. The First Division Clerk's duty is to put up references and leave it to the Under Secretary to study and immediately dictate Notes. ಟೈಮು ಲ್ಯಾಗ್ ಆಗದ ಹಾಗೆ ಈ work ಹೇಗೆ ಆಗುತ್ತದೆ ಎನ್ನುವುದನ್ನು ನೋಡೋಣ ಎಂದು G.A.D. Section ನಲ್ಲಿ ಮತ್ತು ರೆವೆನ್ಯೂ ಸೆಕ್ರೆಟೇರಿ ಯಟ್ಟಿನಲ್ಲಿ introduce ಮಾಡಿದ್ದೇವೆ. ಈ ರೀತಿಯಾಗಿ ಕೆಲಸವನ್ನು ನಮ್ಮ ನೌಕರರೆಲ್ಲರೂ ಮಾಡುತ್ತಿದ್ದಾರೆ. ಇದರಲ್ಲಿ ಯಾವ ರೀತಿ ಸಹಾಯವಾಗುವುದು ಎನ್ನುವ ಪ್ರಶ್ನೆಯನ್ನು ಮುಂದೆ ನೋಡಬೇಕಾಗಿದೆ.

ಶ್ರೀ ಎಂ. ಲಿಂಗೇಗೌಡ.—ತಾವು ಹೇಳಿದುದನ್ನು ಒಪ್ಪಿಕೊಳ್ಳುತ್ತೇನೆ. ಈಗ ಯಾವ ಯಾವ ಇಲಾಖೆ ಹೇಗೆ ಕೆಲಸ ಮಾಡುತ್ತಿದೆ ಎನ್ನುವ ಬಗ್ಗೆ ಈ ಮೂರು ತಿಂಗಳೊಳಗೆ Review ಮಾಡುತ್ತೇವೆಂದು ಹೇಳಿದ್ದನ್ನು ಏಕೆ ಮಾಡಲಿಲ್ಲ ?

ಶ್ರೀ ಟಿ. ಮರಿಯಪ್ಪ.—ಹೀಗೆ ರಿವ್ಯೂ ಮಾಡ ಬೇಕೆಂದೇ ಈಗ ರೆವಿನ್ಯು ಸೆಕ್ರೆಟೇರಿಯೆಟ್ಟಿಗೆ ಈ ರೀತಿ ಕೆಲಸವಾಗಲು ಇನ್ನೂ ಎಷ್ಟು ಜನ ಬೇಕಾಗು ತ್ತದೆ, ಎನ್ನುವುದನ್ನೆಲ್ಲ ಪರಿಶೀಲಿಸಲಾಗುತ್ತಿದೆ.

ಶ್ರೀ ಎಂ. ಲಿಂಗೇಗೌಡ.—ತಾವು ಈಗ ಮಾಡಿರು ವಂತೆ ಒಂದು ದಿನಕ್ಕೆ 35 ಪೇಪರುಗಳನ್ನು dispose ಮಾಡಬೇಕೆನ್ನುವುದು ಸರಿಯಾಗಿದೆಯೇ ? Is it correct ? Will he go through every paper and pass orders ?

ಶ್ರೀ ಟಿ. ಮರಿಯಪ್ಪ.—ಶಕ್ತಿ ಇದ್ದರೆ ಮಾಡಲಿ. ಇಲ್ಲದಿದ್ದರೆ ಆಗುವುದಿಲ್ಲ ಎನ್ನುವುದನ್ನಾದರೂ ತಿಳಿ ಯೋಣ.

ಶ್ರೀ ಎಂ. ಲಿಂಗೇಗೌಡ.—ನೀವು ಬೇಗ dispose ಮಾಡುವುದಕ್ಕೆ ಪ್ರಯತ್ನವಾಡಿ ಎಂದು ಹೇಳುತ್ತಿ ದ್ದೀರಿ. ನಾವು correct ಆಗಿ ಕೆಲಸ ಮಾಡುತ್ತೇವೆಂದು ಹೇಳುತ್ತಾರೆ. ಈ ರೀತಿ ತಾಪತ್ರಯ ಪಟ್ಟು ಕೊಂಡು ಇದನ್ನೇಕೆ ಇಲ್ಲಿಗೆ ತರಬೇಕು ?

ನಮ್ಮ ಬಡ್ಜೆಟ್ಟು inelastic ಆಗಿರಬೇಕೆಂದು ಹಣ ಖೋತಾ ಆಗುವುದಕ್ಕೆ ಕಾರ್ಯಕ್ರಮ ತೆಗೆದು ಕೊಂಡರೆ ಇದರಿಂದ ಜಾಸ್ತಿಯಾಗುತ್ತಿದೆ. ಒಂದುಕಡೆ ಹಣವಿಲ್ಲ ನಮ್ಮ ಬಡ್ಜೆಟ್ಟು inelastic ಆಗಿಹೋಗಿದೆ ಎಂದು ಹೇಳುತ್ತಾ ಖೋತಾ ಕಡೆಗೆ ಏಕೆ ನಿಗಾ ಕೊಟ್ಟಿಲ್ಲ? ಈಗ ಗೋರವಾಲ ರಿಪೋರ್ಟು ಪ್ರಕಾರ ಸಿಬ್ಬಂದಿಗಾಗಿ ಇನ್ನು ಹತ್ತು ಲಕ್ಷ ರೂಪಾಯಿಗಳಷ್ಟು ಕೊಡಬೇಕಾಗುತ್ತದೆ. ಕಡಮೆ ಆಗಬೇಕೆಂದು ಅಪೇಕ್ಷಿ ಸುತ್ತಿರುವಾಗ ಇಲ್ಲಿ ಜಾಸ್ತಿಯಾಗುತ್ತದೆ ಎಂದು ತೋರುತ್ತದೆ. ಇದು ಎಷ್ಟು efficient ಆಗಿದೆ ಎಂಬುದನ್ನು ತಾವು ಈಗ practical ಆಗಿ revenue ಶಾಖೆಯಲ್ಲಿ review ಮಾಡಿ ಅದರ ಪರಿಣಾಮವನ್ನು ನಮಗೆ ತಿಳಿಸಬೇಕು. ಇಂತಹ ಗೋರವಾಲರವರು ಎಲ್ಲ statistics ಕೊಟ್ಟಿದ್ದರೆ ಹೇಳುತ್ತಿದ್ದರೆಂದು ಹೇಳುವುದಿಲ್ಲ. ಇದರಲ್ಲಿ danger ಗಳಿವೆ.

ಈ ಗೋರವಾಲ ರಿಪೋರ್ಟನ್ನು '' ಬೈಬಲ್ಲು '' ಎನ್ನುತ್ತಾ ನೀವು ಒಪ್ಪಬೇಕಾಗಿದೆ.

ಶ್ರೀ ಟಿ. ಮರಿಯಪ್ಪ.—ನಮಗಂತೂ ಯಾವ ''ಬೈಬಲ್ಲೂ'' ಇಲ್ಲ.

ಶ್ರೀ ಎಂ. ಲಿಂಗೇಗೌಡ.—ಕಾರಣ ನಾನು ಹೇಳು ತ್ತೇನೆ. ಈಗ ಹಣ ಕಡಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಸದಸ್ಯರು ಬಹಳ ಒಳ್ಳೆಯ ಮತ್ತು ಚೆನ್ನಾಗಿರುವ ಸಲಹೆಗಳನ್ನು ತಮಗೆ ಕೊಟ್ಟಿ ದ್ದಾರೆ. ಈ Divisional Commissionerಗಳ ಆಫೀಸುಗಳನ್ನು ಮತ್ತು Sub-Division Officer ಗಳನ್ನು ತೆಗೆಯಬೇಕೆಂದು ಹೇಳಿದ್ದಾರೆ. ಇವು post officeನಂತಿರುವ ಆಫೀಸುಗಳಾಗಿರುವುದರಿಂದ ಇದ ರಿಂದ ಖಂಡಿತವಾಗಿಯೂ ಏನೂ ಪ್ರಯೋಜನವಾಗು ವುದಿಲ್ಲ ಎಂದು ಹೇಳುತ್ತೇವೆ. ಹಾಗೆಯೇ ಎನ್.ಇ.ಎಸ್. ಬ್ಲಾಕುಗಳಲ್ಲಿ Project Officersಗಳೆಂದಿದ್ದಾರೆ. ಇವರ ಬದಲು ತಾಲ್ಲೂಕಿನಲ್ಲಿರುವ ಅಮಲ್ದಾರರು ಗಳಿಗೆ ಸ್ವಲ್ಪ ಹೆಚ್ಚಿನ powers ಕೊಟ್ಟು ಈ ಹುದ್ದೆಗಳನ್ನು ಏಕೆ ತೆಗೆಯಬಾರದು ? ನೀವು ಅವನ್ನೆಲ್ಲ ನೋಡಿ ಕಡಮೆ ಮಾಡುವುದಕ್ಕೆ ಪ್ರಯತ್ನಪಟ್ಟಂತೆ ತೋರಲಿಲ್ಲ.

ಇನ್ನು ಕೆಲವು ಕ್ಷೇತ್ರಗಳಲ್ಲಿ ಲಾಗಾಯ್ತಿನಿಂದ ಲಂಚ ಗುಳಿತನ ಇರುವುದನ್ನು ತಡೆಯುವುದಕ್ಕಾಗಿ, ಎಷ್ಟು efficient ಆಗಿದೆ ಎನ್ನುವುದನ್ನು ಆಲೋಚನೆ ಮಾಡುವುದಕ್ಕಾಗಿ ಮತ್ತು ಸರಿಪಡಿಸಲು ಎರಡು ಸಲಹೆಗಳನ್ನು ಕೊಡುತ್ತೇನೆ. ಪ್ರತಿಯೊಂದು ತಾಲ್ಲೂಕು ಮತ್ತು ಡಿಸ್ಟ್ರಿಕ್ಟಿನ ಹೆಡ್ ಕ್ವಾರ್ಟರುಗಳ ಆಫೀಸು ಗಳನ್ನು ಇಟ್ಟುಕೊಂಡಿದ್ದೀರಿ. ಈ ಆಫೀಸುಗಳಲ್ಲಿ ಸ್ಥಳದ ಜನ ಎಷ್ಟು ಕಾಲದಿಂದ ಕೆಲಸ ಮಾಡುತ್ತಿದ್ದಾರೆ ಎನ್ನುವುದನ್ನು ನೋಡಿ ಮೊದಲು ಅವರನ್ನು ಅಲ್ಲಿಂದ ತೆಗೆಯಬೇಕು. ಇದರಿಂದ ಈಗ administration loose ಆಗಿದೆ. ಹೀಗೆ ಮುಕ್ಕಾಲುಭಾಗ ಜನರು ಅಲ್ಲಿಯೇ ಇದ್ದಾರೆ. ನೀವೇನೋ ಈಗ ಮೂರು ವರ್ಷಗಳಿಗೆ ಮೇಲ್ಪಟ್ಟಿರುವವರನ್ನು ಒಂದೇ ಜಾಗದಲ್ಲಿ ರಕೂಡದೆಂದು ಮಾಡಿದ್ದರೂ, ಇವರುಗಳೆಲ್ಲ ಹೊರಕ್ಕೆ ಹೋದರೂ ಪುನಃ ಅಲ್ಲಿಗೇ ಬರುತ್ತಾರೆ. ಈ ರೀತಿ ಪ್ರತಿ ತಾಲ್ಲೂಕು ಮತ್ತು ಡಿಸ್ಟ್ರಿಕ್ಟಿನ ಹೆಡ್ ಕ್ವಾರ್ಟರು ಗಳಲ್ಲಿ ಆಗುತ್ತಿದೆ.

ಶ್ರೀ ಟಿ. ಮರಿಯಪ್ಪ.—ತಾಲ್ಲೂಕಿನವರು ಅದೇ ತಾಲ್ಲೂಕಿನಲ್ಲಿ, ಡಿಸ್ಟ್ರಿಕ್ಟಿನವರು ಅದೇ ಡಿಸ್ಟ್ರಿಕ್ಟಿನಲ್ಲಿರ ಕೂಡದೆಂದು ಹೇಳುತ್ತಿದ್ದೀರಾ ?

ಶ್ರೀ ಎಂ. ಲಿಂಗೇಗೌಡ.—ನಾನು ಬದಲಾವಣೆ ಮಾಡಬೇಕೆಂದು ಹೇಳಿದರೆ ನೀವು ಮಾಡುವುದಿಲ್ಲ. ಏಕೆಂದರೆ ಸ್ಥಳವಂದಿಗರ recommendation ನಿಮಗೆ ಬೇಕಾಗಿರುವುದರಿಂದ ತಕ್ಷಣ ಆರ್ಡರು ಮಾಡಿರುವುದನ್ನೂ ಕ್ಯಾನ್ಸಲ್ಲು ಮಾಡುತ್ತೀರಿ. ನಿವು ಹೀಗೆ ಮಾಡುವಂತೆ ಅಧಿಕಾರಿಗಳೂ ಮಾಡುತ್ತಿದ್ದಾರೆ. ಈ ಮನೋಭಾವ ಹೋಗಬೇಕು.

ಇನ್ನೊಂದು Anti-Corruption ಇಲಾಖೆ ಬಗ್ಗೆ ಸ್ವಲ್ಪ ಹೇಳಬೇಕಾಗಿದೆ. ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ದೇಶದ ಜವಾಬ್ದಾರಿಯನ್ನು ವಹಿಸಿರುವ ಇವರೇ ಲಂಚವನ್ನು ತೆಗೆದುಕೊಂಡರೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ? ಅದರಿಂದ ಇಲ್ಲಿನ Sub-Inspectorಗಳನ್ನು ತಾವು Police Departmentನಿಂದ draft ಮಾಡಿ ಕೆಲಸಕ್ಕೆ ಹಾಕಬೇಕಾದುದು ಅವಶ್ಯಕ ಎಂದು ಹಾಕಿದ್ದೀರಿ. ಹೀಗೆ ಮಾಡಿದರೆ ಇವರೂ ಸರಿಯಾಗಿ ಕೆಲಸಗಳನ್ನು ಮಾಡದಿದ್ದರೆ ಇದರಿಂದೇನು ಸುಖವಾಗುತ್ತದೆ ? ಈ ಕಾರಣ ಈ ಇಲಾಖೆಯನ್ನು ಪ್ರತ್ಯೇಕವಾಗಿಯೇ ಇಟ್ಟು, ಇನ್ನೂ ಸ್ವಲ್ಪ ಹಣಕೊಟ್ಟರೂ ಚಿಂತೆಯಿಲ್ಲ, ಇದಕ್ಕೆ ತಕ್ಕ ಅನುಕೂಲಗಳನ್ನು ಕೊಟ್ಟು ಕೆಲಸ ಮಾಡಬೇಕಾದ ಅಗತ್ಯವಿದೆ ಎನ್ನುವ ಸಲಹೆಯನ್ನು ಕೊಡುತ್ತೇನೆ.

ಇನ್ನು ಆಡಳಿತದಲ್ಲಿ ದಕ್ಷತೆ ಕಡಿಮೆಯಾಗುತ್ತಿದೆ ಮತ್ತು ಇದಕ್ಕೆ ಮಂತ್ರಿಗಳ ಟೂರುಗಳೇ ಮುಖ್ಯ ಕಾರಣವಾಗಿದೆ ಎನ್ನುವುದನ್ನು ತಿಳಿಸಬೇಕಾಗಿದೆ. ನೀವು ಪ್ರವಾಸ ಮಾಡುವಾಗ ಒಂದು ಪದ್ಧತಿ ಮಾಡಿಕೊಂಡಿದ್ದೀರಿ. ಒಂದು ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ಗೆ ವಿಸಿಟ್ಟು ಮಾಡಿದರೆ ಮೊದಲು ನಿಮ್ಮ ಕಾಂಗ್ರೆಸ್ಸು ಆಫೀಸಿಗೆ ಹೋಗುತ್ತೀರಿ. ಆಫೀಸಿನಲ್ಲಿ ಆ ಊರಿನಲ್ಲಿ ಎರಡು ಪಾರ್ಟಿಗಳಿದ್ದರೆ, ಒಂದು ಇನ್ನೊಂದು ಪಾರ್ಟಿಯಮೇಲೆ ಆಕ್ಷೇಪಣೆ ಮಾಡುವುದು, ಅಧಿಕಾರಿಗಳ ಮೇಲೆ ಆಕ್ಷೇಪಣೆ ಮಾಡುವುದು, ಹೀಗಾಗಿ ಇವರಿಗೆ ಉತ್ತರ ಹೇಳುವುದಕ್ಕೆ ಸಾಧ್ಯವಿಲ್ಲದೆ ಹೋಗುತ್ತದೆ. ಅವರು ಉತ್ತರ ಹೇಳದೆ ಇದ್ದರೆ ಬಿಡುವಂತಿಲ್ಲ. ಹೀಗೆ ಈ ರೀತಿ ಪೊಂಡಾಟವಾಗಿರುವ ಸನ್ನಿವೇಶಗಳಿವೆ. ನಮ್ಮ ಕನಕಪುರದ ಕಡೆಗೆ ಬಂದಿರುವ ಮಂತ್ರಿಗಳಿಗೆ ಬಹುಶಃ ಇದರ ಅನುಭವ ಚೆನ್ನಾಗಿದೆ. ಕಾಂಗ್ರೆಸ್ಸಿನ ಆಫೀಸಿಗೆ ಮೊದಲು ಕಪ್ಲೇಂಟು ಬರುತ್ತದೆ. ಅಮಲ್ದಾರ್ ಮತ್ತು ಇನ್ಸ್‌ಪೆಕ್ಟರು ಇವರುಗಳ ಮೇಲೆ ಕೆಲವರು ಮಂತ್ರಿಗಳ ಹತ್ತಿರ closeಆಗಿ move ಮಾಡುವವರು ಕಂಪ್ಲೆಂಟ' ಹೇಳುತ್ತಾರೆ. ಹೀಗೆಲ್ಲಾ ಆಗಿ ದಕ್ಷತೆ ಬಹಳ ಕಡಿಮೆಯಾಗುತ್ತದೆ.

ಶ್ರೀ ಟಿ. ಮರಿಯಪ್ಪ.—ಆ ತರಹ ಹೇಳುವುದು ಸರಿಯಲ್ಲ.

ಶ್ರೀ ಎಂ. ಲಿಂಗೇಗೌಡ.—ಆರ್ಥಿಕ ಸಚಿವರು ಟೂರ್‌ಮಾಡುವ ಅವಕಾಶವಿರುವುದಿಲ್ಲ. ಅದು ಗೊತ್ತಿಲ್ಲವೆಂದು ಕಾಣುತ್ತದೆ. ಶ್ರೀ ಮರಿಯಪ್ಪನವರು ಸ್ಥಳಕ್ಕೆ ಹೋಗಬೇಕಾಗಿಲ್ಲ. ಅವರು ಹಳಬರು ಇದ್ದುದರಿಂದ ಇದ್ದ ಕಡೆಯೇ ಕೇಳುವಶಕ್ತಿ ಅವರಿಗೆ ಇದೆ. ಆದಕಾರಣ ದಯವಿಟ್ಟು ಟೂರ್‌ಮಾಡುವಾಗ ಕಾಂಗ್ರೆಸ್ ಆಫೀಸಿಗೆ ಹೋಗಿ ಕಂಪ್ಲೆಂಟ್ ಕೇಳುವುದನ್ನು ಬಿಟ್ಟು ಕನ್‌ಸ್ಟ್ರಕ್ಟಿವ್ ಸಜೆಷನ್ಸ್ ಇದ್ದರೆ ಕೊಡಿ ಎಂದು ಹೇಳಿ. ಪಾರ್ಟಿಯವರು ಮೊದಲಿನಿಂದ ಕೊನೆಯವರೆಗೂ ಸುಳ್ಳು ಹೇಳಿದರೆ ಎಲ್ಲಿ ನಿಸ್ಪೃಹತೆ ಇರುವುದಕ್ಕೆ ಸಾಧ್ಯವಾಗುತ್ತದೆ ? ಅದನ್ನು ಚೆಕ್ ಮಾಡುವುದು ನಿಮ್ಮ ಕೈಯ್ಯಲ್ಲಿದೆ. ಚೆಕ್ ಮಾಡಬೇಕು. ಅದನ್ನು ಬಿಟ್ಟರೆ ಬಾಕಿ ವಿಷಯದಲ್ಲಿ ಹೆಚ್ಚಿಗೆ ಹೇಳುವುದಕ್ಕೆ ತಯಾರು ಇಲ್ಲ. ಹೇಳಿದ್ದನ್ನೇ ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ.

*Sri T. MARIAPPA.—Mr. Speaker, Sir, it was more surprising that my Hon'ble friend Sri Mallaradhya should have spoken in that strain. He was no doubt very constructive. But unfortunately he was very sweeping in his remarks.

Sri U. M. MADAPPA.—On a point of order. I want to know whether it is a reply or intervention.

Mr. DEPUTY SPEAKER.—He is replying.

Sri U. M. MADAPPA.—The House is in a vacuum. How can he reply?

Sri T. MARIAPPA.—It is an intervention in the debate. Final reply is that of the Chief Minister. As a member of the House I can speak. Sir, this procedure is so well-known in all legislatures that a Minister often intervenes. It is not a reply.

Sri U. M. MADAPPA.—He cannot intervene in a vacuum.

Sri T. MARIAPPA.—I have seen in the Assembly that Ministers and Deputy Ministers had intervened in the debate and they were allowed to clarify certain points.

Sri U. M. MADAPPA.—If somebody is on his legs, then the Hon'ble Minister can intervene.

Sri C. J. MUCKANNAPPA.—If it is the intention of the Chief Minister to lessen his burden of replying, we do not come in the way.

Sri Y. VEERAPPA.—If a member is on his legs, then the Hon'ble Minister can intervene and clarify.

Sri T. MARIAPPA.—I have got as much right as any Member of the Legislative Assembly to participate in the discussion. I only request the Hon'ble Members to bear with me and understand me. Sri Mallaradhya is a man of wide experience and if he had bestowed only a little thought to understand the difficulties that had confronted the new State, he would not have made the remarks in the manner he has done. I only make a special appeal to him because he can understand both the points of view. When

(SRI T. MARIAPPA)

the State was formed, five disperate units came together and there was so much of confusion that things had to be arranged from carpet, furniture onwards and people had to be settled down to work. Therefore, if he now says that there is a lot of inefficiency and corruption, if he had only bestowed a little thought, he would have understood what difficulties we had in the beginning for months and years. We have surmounted all those difficulties; we have set these things in motion; we have brought order out of chaos. In spite of all these things, we were able to unify all the laws so far as taxation measures were concerned. We have to unify one or two other laws. All this can be said to the credit of the House. I do not want to take the credit. The House has to take the credit which is legitimately due to it because it assisted us in bringing order out of chaos. If I say that, it is an effective answer to the criticism that there is a lot of inefficiency. We almost receive 3,000 papers every day. Let him look into the disposals. In fact, the disposals are also up to the mark. He was speaking of the days when he was in the Secretariat. He was one of the energetic secretaries and in those days he could dispose of papers quickly also. I was in the Opposition in those days. But is there any proportion to the number of papers we receive and the number of papers that they were receiving? In those days the people had not the courage to approach the Secretary or the Under Secretary or even the First Division Clerk. But now, almost 3,000 papers we receive every day. The people are awake and they ventilate their grievances. Many people come to Vidhana Soudha for the redressal of their grievances. If he had only viewed things from the background of the present conditions and not from the background of bureaucratic days when people would not even go to a Secretary or an Under Secretary, he would have said at least some good words about the enormous amount of work that the present Government is shouldering and the present Secretariat is shouldering. Sir, Hon'ble Members have stated that there was indiscriminate touring. Sir, the Ministers of those days had practically no need to keep in touch with the public. Even then, they were touring. Now, what is the position? The position has entirely altered and the Ministers have to tour; they have to explain new policies. Moreover, they have to keep in touch with the people. It is a popular Government that is functioning. Therefore, considered from any point of view, the Ministers are bound to tour. They must be in daily contact with the people. They cannot be in daily contact with the people if they merely stay at the Secretariat. Therefore, there is justification for the Ministers to tour. Being a Finance Minister, I am against indiscriminate touring; I am against unplanned touring; I am against excessive touring. Therefore, you can kindly consider the number of days which a Minister has toured; broadly speaking, as a whole, we have not been given to excessive touring or indiscriminate touring. Some criticism was levelled against some of the Secretaries. It is better it is left unsaid. After all, they are not here to defend themselves and we have to defend them. When they are not here t defend themselves, it is not open......

Sri Y. VEERAPPA.—We have every right to point out the defects.

Sri T. MARIAPPA.—You cannot criticise them in the manner you did. Sri Mallaradhya did it better than others. Sir, I would only make a special appeal to the members. They must say, even if there is criticism against a Secretary, in a manner which will not demoralise them. I am making a special appeal. After all, you and I are both interested in keeping the administrative structure intact. We do not want the administrative structure demoralised. Either it is the Congress Government or any other Government, so long as democracy exists and democracy functions, we have to make use of this administrative machinery. Therefore, it is no good disparaging it; it is no good calling it by names. But you are entitled to say that it requires toning up and that it should be placed on a

higher pedestal. All that is good no doubt. But to say this in season and out of season, I would only make a special appeal, it won't bring the desired effect. (*Interruption*) It looks to be so because you want to see through a coloured glass. I intervened when they in one breath said that these officers were at the mercy of power mad Ministers and in the other breath they said that the Ministers were merely led by them. One cancels the other. I really ask whether they have examined this question, whether we are merely nose-led or whether the Secretaries are merely our tools. It is not so. We are complementary to each other. We lay down particular policies and we don't want to interfere with the day-to-day administration. Sri Mallaradhya wanted decentralisation. When there is delegation of powers, it evidently means that Ministers should not ordinarily interfere, unless something is amiss. Therefore, we observe that rule: Most of us are in public life for so many years You are not new to us and we are not new to you. Therefore, you should not claim to arrogate things to yourselves only. That is the irony of it. If both of us stand on the same footing, if one does not claim monopoly of wisdom to oneself, then perhaps you will be able to understand better how the machinery functions. There may be a jerk here and there, a little misfit here and there, black sheep here and there, but all that could be rectified. Steps are being taken to rectify them. We are making experiments to expedite it, but I want you to see the oth r side of the question and appreciate what little has been done so far. Sri Mallaradhya cited a few instances. It is very unfortunate that in regard to those instances Government have not been able to do things quickly. For example, selection of a site for cricket. He wanted test matches to be played here, but what about the reply he received ?

Sri J. B. MALLARADHYA.—I will have test matches played here if I live to see that day.

Sri T. MARIAPPA.—But nevertheless we recognise the necessity.

Sri T. SUBRAMANYA.—I hope India will win the test match.

Sri T. MARIAPPA.—I had a discussion with the Chief Minister. We have recognised the necessity for having a first class ground and we will see that this question is settled very early.

There was also a criticism with regard to the Mysore Public Service Commission Consultation Regulations, 1958. If they had only seen the previous regulation and compared it with the present, they could not have picked up this quarrel at all. Our idea is not to exclude all the jobs. Only a few jobs are excluded and particularly they want to exclude class IV appointments. No-where in India it is like that. We want to follow the precedents of other States and we do not want to burden the Public Service Commission with the question of appointing.........

Sri M. C. NARASIMHAN.—Kerala has included class IV also.

Sri T. MARIAPPA.—Kerala has a lot of its own, including class IV servants. Any way they are tampering with class IV servants.

Sri M. C. NARASIMHAN.—I have stated that so far as the Public Service Commission is concerned.

Sri T. MARIAPPA.—Even in the previous regime it has not been included. For example, servants, conductors and even drivers were not included before. You consult any officer who has some knowledge of the working of the department. He will say whether the Public Service Commission is to recruit class IV servants. Therefore, Heads of departments are empowered to appoint these people. In fact, Sri Mallaradhya was Secretary to the Recruitment Board. I have studied his report. I have gone through the Report of the Backward Classes Commission. There are a few technical new jobs which are not included. Otherwise, all the jobs are included. Therefore it does not require much answer.

Sri G. N. PUTTANNA.—You said something about the pay of Reporters. What is the Andhra scale ?

Sri T. MARIAPPA.—Why talk only about Reporters? I would only request my friend to devote a little more time. I have got the entire Andhra scales with me; I have got the latest report also. Our scales compare very favourably with Andhra scales. In some cases they are much better and perhaps in one or two cases they may be on our level. Even in regard to the rate of increment, we give Rs. 10 as increment; they give only Rs. 7½. You can even look into the very recently sanctioned scales of Andhra. Our scales are much better. As a matter of fact, take the First Division Clerks and Second Division Clerks and Stenographers as well. Our maximum is much higher.

Sri Venkatai Gowda raised a question about veterinary compounders. I am examining that question. Obviously if they are technically trained, they cannot get the same salary. I will have it examined.

Sri Linge Gowda is not here. The question he has raised does not bear scrutiny and particularly I think it is out of place to make references to the Ministers' visit to the Congress office. After all, it is a party Government and if by chance, by luck, the Praja Socialist Party come to power, let them go to their office. There is no reason to raise such a question on the floor of the House. After all, we are entitled to visit our party office. You cannot possibly take exception to this when party Government is functioning. The Minister's first and foremost duty is to go to party office and even discuss policies; I think he can even consult them. Only when the policy goes against the accepted policy of the Government, then you can find fault. You say when they go there they call the officers to admit tenders by party members. I will tell you no sane man will do it and no sane man will criticise it like that.

Sri V. SRINIVAS SHETTY (Coondapur).—I think the point is this, that the members of the Cabinet should not utilise the position for the purpose of party propaganda. It is not our intention to say that he should not visit the Congress office. The point is, the Minister's position should not be exploited for the purpose of party propaganda.

Sri T. MARIAPPA.—Sir, we have been very old here. Even before we became Ministers, we knew that the position should not be used for party propaganda, but we are entitled to consult about broad policies. These are the policies accepted by Government. If you consider that we go beyond this, you can take us to task. Simply you see a Congress member just coming to the Congress office and taking counsel with other members of the party, and you criticize I do not think your criticism will be justified. I hope this is the last time that such criticisms should be ventilated. I thank you, Mr. Speaker, for having given me an opportunity to speak.

6 P.M.

Sri U. M. MADAPPA.—On a point of order. When the Minister has replied to the debate concerning the Demand, is there any scope for any member to speak on it?

Mr. DEPUTY SPEAKER.—It is not a reply.

An HON'BLE MEMBER.—It is almost a reply.

Sri C. J. MUCKANNAPPA.—Is it not with an authority that he is replying?

Mr. DEPUTY SPEAKER.—Both as member and a Minister he is entitled to reply.

ಶ್ರೀ ಟಿ. ಎಸ್. ಮೂಡಲಗಿರಿಗೌಡ (ಕುಣಿಗಲ್).—ಮಾನ್ಯ ಅಧ್ಯಕ್ಷರೆ, ಈ ಜನರಲ್ ಅಡ್ಮಿನಿಸ್ಟ್ರೇಷನ್ನಿಗೆ ಸಂಬಂಧಪಟ್ಟ ಡಿಮ್ಯಾಂಡನ್ನು ಸಂಪೂರ್ಣವಾಗಿ ನಾನು ಅನುಮೋದಿಸುತ್ತ, ಒಂದೆರಡು ವಿಷಯಗಳನ್ನು ಪ್ರಸ್ತಾಪಮಾಡಬೇಕೆಂದು ಇಚ್ಛೆಪಡುತ್ತೇನೆ. ಈಗಾಗಲೇ ಕೆಲವು ವಿಷಯಗಳ ಮೇಲೆ ಹಣಕಾಸಿನ ಮಂತ್ರಿಗಳಾದ ಮಾನ್ಯ ಮರಿಯಪ್ಪನವರು ಪ್ರಸ್ತಾಪ ಮಾಡಿರುವುದರಿಂದ, ಆ ವಿಷಯಗಳನ್ನು ಮತ್ತೆ ನಾನು ಹೇಳುವುದಿಲ್ಲ. ವಿರೋಧಪಕ್ಷದವರು ಏನು ವಿಷಯಗಳನ್ನು ಎತ್ತಿದ್ದಾರೋ, ಅವುಗಳಿಗೆ ಉತ್ತರವನ್ನಾಗಲಿ ಅಥವ ಅವರ ಭಾಷೆ ಸರಿಯಲ್ಲವೆಂದಾಗಲಿ ಹೇಳುವುದು ಉಚಿತವಲ್ಲ. ಶ್ರೀ ಮರಿಯಪ್ಪನವರು, ಮಲ್ಲಾರಾಧ್ಯರು ಎರಡು ವಾದಗಳನ್ನು ನಮ್ಮ ಮುಂದಿಟ್ಟಿದ್ದಾರೆಂದು ಹೇಳಿದರ . ನಾನು ಮಲ್ಲಾರಾಧ್ಯರ ವಾದವನ್ನು ಸಾಮಾನ್ಯವಾಗಿ ಗುರುತು ಹಾಕಿಕೊಂಡೆ. ಒಂದುಕಡೆ ಸೆಕ್ರೆಟೆರಿಯವರು ಮಂತ್ರಿಗಳು ಹೇಳಿದ ಹಾಗೆ ನಡೆಯುತ್ತಾರೆ ಎಂದು ಒಂದು ವಾದವನ್ನು ಮಾಡಿದರು. ಇನ್ನೊಂದುಕಡೆ ಸೆಕ್ರೆಟೆರಿಗಳೇ ಗವರ್ನ್‌ಮೆಂಟ್ ಆಗಿದ್ದಾರೆಂದು ಹೇಳಿದರು. ಅವರು

ಸೆಕ್ರೆಟರಿಯಾಗಿದ್ದವರು. ಸೆಕ್ರೆಟೇರಿಯಟ್ ಅನುಭವ ಪಡೆದು ಬಂದಿರುತ್ತಾರೆ. ಆದ್ದರಿಂದ ಅವರು ಅಲ್ಲಿರುವ ಲೋಪದೋಷಗಳನ್ನು ಹೇಳಿದರೆ ಸರಿಯೆಂದು ಒಪ್ಪಿಕೊಳ್ಳುತ್ತೇನೆ. ಆದರೆ ಅವರ ಎರಡು ವಾದಗಳನ್ನು ಹೇಳಿರುವುದರಿಂದ, ಇದರಲ್ಲಿ ಯಾವುದು ಸರಿಯಾದುದು ಎಂದು ಹೇಳುವುದು ಸ್ವಲ್ಪ ಕಷ್ಟವಾಗಿದೆ. ಶ್ರೀ ಮಲ್ಲಾರಾಧ್ಯರು ಹೇಳಿದಹಾಗೆ, 1956ನೆಯ ಇಸವಿಯಲ್ಲಿ ಐದು ಪ್ರಾಂತ್ಯಗಳ ಪ್ರದೇಶಗಳು ಒಂದುಕಡೆ ಸೇರಿದುವು. ಅವು ಇಂಟೆಗ್ರೇಟ್ ಆಗಿ ಹೊಸ ಮೈಸೂರು ರಾಜ್ಯವಾದಮೇಲೆ ಒದಗಿರತಕ್ಕಂಥ ತೊಡಕುಗಳನ್ನು ಅವರೇ ವಿಸ್ತಾರವಾಗಿ ತಿಳಿಸಿದರು. ಏನು ಸರ್ಕಾರದ ಯಂತ್ರ ನಿಂತು ಹೋಗಿದೆ, ನಡೆಯುವುದಿಲ್ಲ ಎನ್ನುವ ಒಂದು ಪರಿಸ್ಥಿತಿಗೆ ಬಂದಿತ್ತೇ? ಇಂಟೆಗ್ರೇಷನ್ ಆದ ಮೇಲೆ 1958-59 ರಿಂದ ಸುಧಾರಿಸುತ್ತಾ ಬಂದು, ಸರ್ಕಾರದ ಒಂದು ಯಂತ್ರ ಸುಗಮವಾಗಿ, ಯಶಸ್ವಿಯಾಗಿ ನಡೆಯುತ್ತಿದೆ.

Sri J. B. MALLARADHYA.—By way of personal explanation. What I said in the beginning was that it was freely talked all over the State that the Ministers were the hand-maids of the Secretaries. I said the Secretaries were the authorised agents of power mad Ministers.

ಯಾವಕಡೆಹೋದರೂ ಮಂತ್ರಿವರ್ಯರುಗಳು ಸೆಕ್ರೆಟರಿಗಳ ಕೈಗೊಂಬೆಗಳಾಗಿದ್ದಾರೆ, ಅವರು ಇವರ ಹತೋಟಿಯಲ್ಲಿದ್ದಾರೆ, ಮೂಗುದಾರ ಹಿಡಿದುಕೊಂಡು ಸೂತ್ರದ ಬೊಂಬೆಯಂತೆ ಆಡಿಸ ಹತ್ತಿದ್ದಾರೆ ಎಂದು ಹೇಳುವುದು ಜನಜನಿತವಾಗಿದೆ ಎಂದು ಹೇಳಿದೆ. ಇದು ನನ್ನ ಸ್ವಂತ ಅಭಿಪ್ರಾಯ. ಇದರಲ್ಲಿ ವಿರೋಧಾಭಾಸವೇನು?

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಶ್ರೀ ಮಲ್ಲಾರಾಧ್ಯರು ಹೇಳಿರತಕ್ಕಂಥ ವಾದವನ್ನ ತಿಳಿದುಕೊಂಡೆ, ಬಹಳ ಬುದ್ಧಿವಂತಿಕೆಯಿಂದ ಹೇಳಿದ್ದಾರೆಂದು ಹೇಳಬಹುದು. ಒಂದು ವಾದವನ್ನು ಜನತೆಯ ಮೇಲೆ ಇಟ್ಟಿದ್ದಾರೆ. ಒಂದು ವಾದವನ್ನು ತಾವೇ ಇಟ್ಟುಕೊಂಡಿದ್ದಾರೆ. ಆದರೆ ಎರಡು ವಾದವೂ ಅವರಲ್ಲದೆಯೆಂದು ಅರ್ಥವಾಗುತ್ತದೆ. ಅದು ಹೇಗಾದರೂ ಇರಲಿ. ಒಟ್ಟಿನಲ್ಲಿ ಸರ್ಕಾರದ ಯಂತ್ರ ಬಹಳ ಇಂಪ್ರೂ ಆಗಿದೆ. ಸರ್ಕಾರ ಬಹಳ ಬಗಿಯಾಗಿ ಮತ್ತು ದಕ್ಷತೆಯಿಂದ ಆಡಳಿತವನ್ನು ನಡೆಸಿಕೊಂಡು ಬರುತ್ತಿರುವುದನ್ನು ಒಪ್ಪಿಕೊಳ್ಳಬೇಕು. ಕೆಲವು ಮಾನ್ಯ ಅಪೋಸಿಷನ್ ಸದಸ್ಯರು ಈ ಡಿಮ್ಯಾಂಡನ್ನು ಒಪ್ಪುವುದಕ್ಕಾಗುವುದಿಲ್ಲ, ಮನ್ನಣೆ ಕೊಡುವುದಕ್ಕಾಗುವುದಿಲ್ಲ, ವಿರೋಧಿಸುತ್ತೇವೆಂದು ಹೇಳಿದರು. ಇವರ ಸ್ಯಾಲರಿಯೂ ಈ ಡಿಮ್ಯಾಂಡಿನಲ್ಲಿ ಸೇರಿಕೊಂಡಿದೆ. ಡಿಮ್ಯಾಂಡಿಗೆ ಒಪ್ಪಿಗೆ ಕೊಡುವುದಿಲ್ಲವೆಂದು ಹೇಳಿದರೆ, ಸ್ಯಾಲರಿಗೆ ಒಪ್ಪಿಗೆ ಕೊಡುವುದಿಲ್ಲವೇ?

Sri C. J. MUCKANNAPPA.—ಅದೂ ಬೇಕಾಗಿಲ್ಲ. Nobody is very anxious to have salary.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇದರಲ್ಲಿ ಕೆಲವು ವಿಷಯಗಳನ್ನು ಅವರು ಒಪ್ಪುವುದಕ್ಕೆ ಸಾಧ್ಯವಿದ್ದರೂ ಕೂಡ ವಿರೋಧಾಭಾಸದಿಂದ ಒಪ್ಪುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಸೆಕ್ರೆಟರಿಗಳ ಲೆವಲ್ಲಿನಲ್ಲಿರತಕ್ಕಂಥ ವಿಷಯಗಳನ್ನು ಶ್ರೀ ಮಲ್ಲಾರಾಧ್ಯರು ಹೇಳಿದ ವಾದದಲ್ಲಿ ಚರ್ಚೆಮಾಡಿದ್ದರೆ ಚೆನ್ನಾಗಿತ್ತು. ಶ್ರೀ ಮರಿಯಪ್ಪನವರು ಹೇಳಿದರೂ ಕೂಡ, ಮಾನ್ಯ ಸದಸ್ಯರು "ಜನತೆ ಹೀಗೆ ಹೇಳಿಕೊಳ್ಳುತ್ತಿದ್ದಾರೆ. ಜನತೆಯ ಅಭಿಪ್ರಾಯ ಹೀಗಾಗಿದೆ" ಎಂದು ಹೇಳಿದ್ದಾರೆ. ಒಂದುಕಡೆ ಪಿ. ಎಸ್. ಸಿ. ಯವರು ರೂಲುಗಳನ್ನು ಮಾಡಿದ್ದಾರೆ. ಅವುಗಳ ಸ್ಯಾಂಕ್ಟಿಟಿಯನ್ನು ಕೂಡ ಗೌರವಿಸತಕ್ಕಂಥವರೂ ನಾವೇ ಆಗಿದ್ದೇವೆ. ಒಂದುಪಕ್ಷ ಆ ರೂಲ್ಸಿಗೆ ವಿರುದ್ಧವಾಗಿದ್ದರೆ, ಪಿ.ಎಸ್.ಸಿ. ಯವರು ಮಾಡಿದ ತೀರ್ಮಾನಗಳಿಗೆ ಏನಾದರೂ ವಿರೋಧವಾಗಿದ್ದರೂ, ಸರ್ಕಾರಕ್ಕೆ ನೇರವಾಗಿ ತಿಳಿಸಬಹುದು. ಅದನ್ನು ಸರಿಪಡಿಸಬಹುದು. ಸರ್ಕಾರಕ್ಕೆ ಆ ಅಧಿಕಾರವಿದೆ. ಮುಖ್ಯಮಂತ್ರಿಗಳು "ಯಾರ ಆರ್ಡರುಗಳು ಆಗಿದ್ದರೂ ಕೂಡ, ಅವುಗಳು ಕ್ಯಾಬಿನೆಟ್ ಲೆವಲ್ಲಿನಲ್ಲಿ ತೀರ್ಮಾನವಾದ, ಆರ್ಡರುಗಳಾಗಿರುತ್ತವೆ. ಯಾವ ಸೆಕ್ರೆಟೆರಿಯೂ ಕೂಡ ಸರ್ಕಾರದ ಒಪ್ಪಿಗೆ ಇಲ್ಲದೆ ಯಾವ ರೀತಿಯ ಗವರ್ನ್‌ಮೆಂಟ್ ಆರ್ಡರನ್ನೂ ಮಾಡುವುದಕ್ಕೆ ಅವಕಾಶವಿಲ್ಲ" ಎಂದು ಹೇಳಿದರು. ಸಹಜ. ಮುಖ್ಯಮಂತ್ರಿಗಳಾದವರು ಹಾಗೆಯೇ ಹೇಳಬೇಕಾದದ್ದು ನ್ಯಾಯ. ಈ ರೀತಿಯಾಗಿದ್ದರೂ ಕೂಡ, ಅದನ್ನು ಸೆಕ್ರೆಟರಿಗಳು ಮಾಡಿದ್ದಾರೆ, ನಾವು ಮಾಡಿಲ್ಲವೆಂದು ಹೇಳುವುದು ಸರಿಯಲ್ಲ. ಬಂದಿರತಕ್ಕಂಥ ವಿಷಯ, ಹೀಗೆ ನಡೆದಿದೆ ಎಂದು ಹೇಳಿದರೆ, ಮುಖ್ಯ ಮಂತ್ರಿಗಳಾಗಲಿ, ಫೈನಾನ್ಸ್ ಮಿನಿಸ್ಟರಾಗಲಿ, ಅದನ್ನು ಪರಿಶೋಧನೆ ಮಾಡತಕ್ಕಂಥದ್ದು ಅವರ ಕರ್ತವ್ಯ. ಸೆಕೆಂಡ್ ಮತ್ತು ಫಸ್ಟ್‌ಗ್ರೇಡ್ ಕ್ಲಾರ್ಕುಗಳ ಒಂದು ಪಟ್ಟಿಯನ್ನು ಪಿ.ಎಸ್.ಸಿ. ಯವರು ಕಳುಹಿಸಿದ್ದರೂ, ಅದನ್ನ ಎಫೆಕ್ಟಿಗೆ ಕೊಡದೆ, ಈಗಿರತಕ್ಕಂಥ ಲೋಕಲ್ ಕ್ಯಾಂಡಿಡೇಟ್‌ಗಳನ್ನು ಖಾಯಂ ಮಾಡಬೇಕೆಂದು ಒಂದು ಆರ್ಡರ್ ಮಾಡಿದೆ ಎಂದು ಹೇಳುವಾಗ, ಆ ಇನ್‌ಸ್ಟ್ರಕ್ಷನ್ನನ್ನು ಡಿಪಾರ್ಟ್‌ಮೆಂಟ್ ಹೆಡ್ಡುಗಳು ಎಫೆಕ್ಟಿಗೆ ಕೊಟ್ಟಿದ್ದಾರೆಯೇ? ಪಿ.ಎಸ್.ಸಿ. ಕೊಟ್ಟಿರತಕ್ಕಂಥ ಫಸ್ಟ್ ಅಂಡ್ ಸೆಕೆಂಡ್ ಡಿವಿಜನ್ ಕ್ಲಾರ್ಕುಗಳ ಲಿಸ್ಟನ್ನ ಯಾವಾಗ ಕಳುಹಿಸಿ ಕೊಟ್ಟರಿ? ಈ ಆರ್ಡರನ್ನು ಎಫೆಕ್ಟಿಗೆ ಇದುವರೆಗೂ ಕೊಟ್ಟಿಲ್ಲವೆಂದು ತಿಳಿಸಿಬಿಟ್ಟರೆ ಆಯಿತು. ಯಾರೇ ಮಾಡಿರಲಿ, ಯಾವ ಸೆಕ್ರೆಟೆರಿ ಮಾಡಿದ್ದರೂ ಕೂಡ ಸರ್ಕಾರ ಮಾಡಿದೆ ಎನ್ನುವ ಅಭಿಪ್ರಾಯ ಬರುತ್ತದೆ.

ಶ್ರೀ ಟಿ. ಮರಿಯಪ್ಪ.—ಡೆಲಿಗೇಟ್ ಮಾಡಿದ್ದರೂ, ಸೆಕ್ರೆಟೆರಿಯೇ ಆಗಲಿ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಆಗಲಿ, ಯಾರೇ ಮಾಡಿದ್ದರೂಕೂಡ, we are going to take the responsibility. We cannot shift the responsibility. ತಮಗೆ Constitutional practice ಗೊತ್ತಿದೆಯಲ್ಲಾ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಅದಕ್ಕೆ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಇನ್ನೊಂದು ವಿಚಾರ. ಪ್ರೊಮೋಷನ್, ಇನ್‌ಕ್ರಿಮೆಂಟ್‌ಗಳನ್ನು ಕೊಡುವಾಗ ಎಷ್ಟೋ ಡಿಫೆಕ್ಟಿವ್ ಆರ್ಡರ್ಸ್ ಆಗಿವೆ. ಆಗ ಅಫಿಷಿಯಲ್ಸ್ ತಮ್ಮ ಮೇಲಧಿಕಾರಿಗಳನ್ನು ಅಪ್ರೋಚ್ ಮಾಡುವುದಕ್ಕೆ ಮತ್ತು ಅವರ ಇಂಕ್ರಿಮೆಂಟ್, ಸೀನಿಯಾರಿಟಿ ಬಗ್ಗೆ ಕೇಳುವುದಕ್ಕೆ ಸಾಧ್ಯವಿಲ್ಲದೆ ಇರುವ ರೀತಿಯಲ್ಲಿ ಸೆಕ್ರೆಟೇರಿಯಟ್ ಲೆವಲ್ಲಿನಲ್ಲಿ ನಡೆಯುತ್ತಿವೆ. ಅದನ್ನು ತಪ್ಪಿಸಬೇಕು. ಏಕೆಂದರೆ ಅವನಿಗೆ ಏನಾದರೂ ಅನ್ಯಾಯವಾಗಿದ್ದರೆ ಅಥವಾ ಅವನಿಗೆ ಇನ್‌ಕ್ರಿಮೆಂಟ್ ಅನ್ಯಾಯವಾಗಿ ಬರಬೇಕಾದುದು ದೊರೆಯದೇ ಹೋದರೆ ಅದಕ್ಕೆ ಡಿಫೆಕ್ಟಿವ್ ಆರ್ಡರ್ಸ್ ಆಗಿದ್ದರೆ

(ಶ್ರೀ ಟಿ. ಎಚ್. ಮೂಡಲಗಿರಿಗೌಡ)

ಅವನಿಗೆ ನೇರವಾಗಿ ಅಪೀಲು ಮಾಡುವುದಕ್ಕೆ ಅವಕಾಶ ವಿರಬೇಕು. ಅಂತಹ ಸಂದರ್ಭಗಳಲ್ಲಿ ಅನ್ಯಾಯ ವಾಗಬಾರದೆಂದು ನನ್ನ ಅಭಿಪ್ರಾಯ.

ಇನ್ನು ಐ.ಸಿ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳ ವಿಷಯದಲ್ಲಿ ಕೆಲವು ಮಾತುಗಳನ್ನು ಹೇಳ ಬಯಸುತ್ತೇನೆ. ಅದನ್ನು ಶ್ರೀ ಮಾರ ಮರಿಯಪ್ಪನವರು ಗಮನಿಸಬೇಕು. ಈಗಾಗಲೇ ಆ ವಿಷಯ ಬಹಳವಾಗಿ ಚರ್ಚೆಯಾಗಿದೆ. ನಾನು ಅದನ್ನೇ ವಿಶೇಷವಾಗಿ ಚರ್ಚೆ ಮಾಡಲು ಹೋಗುವುದಿಲ್ಲ. ಇಷ್ಟು ಮಾತ್ರ ತಮ್ಮ ಮುಂದಿಡುತ್ತೇನೆ. ನಿನ್ನೆದಿವಸ ಮಂತ್ರಿಗಳು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಎಲ್ಲಾ ಸೆಕ್ಷನ್‌ಗಳಿಗೂ ಮತ್ತು ಬ್ಯಾಕ್‌ವರ್ಡ್ ಷೆಡ್ಯೂಲ್ಡ್ ಕ್ಯಾಸ್ಟ್‌ಗಳಿಗೂ ಕಾನ್ಸ್ಟಿಟ್ಯೂಷನ್ನಿನಲ್ಲಿ ಏನೇನು ಸೌಕರ್ಯಗಳನ್ನೊದಗಿಸಬೇಕೆಂದು ಹೇಳಿದೆಯೋ ಅವೆಲ್ಲವನ್ನೂ ಸೇಫ್‌ಗಾರ್ಡ್ ಮಾಡುತ್ತೇವೆಂದು ಸರ್ಕಾರದವರು ಹೇಳುತ್ತಿದ್ದಾರೆ. ಆದರೆ ಪ್ರಾಕ್ಟಿಕಲ್ಲಾಗಿ ಏನಾಗುತ್ತಿದೆ ಎಂಬುದನ್ನು ಅವರು ಗಮನಿಸಿದ್ದಾರೆಯೇ? ಅದನ್ನು ಪ್ರೊಟೆಕ್ಟ್ ಮಾಡಿದ್ದಾರೆಯೇ? ಅದು ಏತಕ್ಕೆ ಆಗಲಿಲ್ಲವೆಂಬುದನ್ನು ತಮ್ಮ ಮುಂದಿಡುತ್ತೇನೆ. ಆರೀತಿ ಅನ್ಯಾಯವಾಗಿದ್ದರೆ ಅದು ಕಾನ್ಸ್ಟಿಟ್ಯೂಷನ್ನಿಗಾಗಲೀ ಅಥವಾ ಸರ್ಕಾರದ ಒಂದು ಪಾಲಿಸಿಗಾಗಲಿ ವಿರೋಧವಾಗಿದೆ.

ಶ್ರೀ ಟಿ. ಮರಿಯಪ್ಪ.—ತಮ್ಮ ಚರ್ಚೆ ಈ ಬಗ್ಗೆ ಕಡಿಮೆಯಾಗಲಿ ಎಂದು ಒಂದು ಮಾತು ಹೇಳುತ್ತೇನೆ. ಐ.ಸಿ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿ ಗಳೆಲ್ಲಾ ಕಾನ್ಸ್ಟಿಟ್ಯೂಷನ್ನಿಗನುಸಾರವಾಗಿ ನೇಮಕವಾಗಿದ್ದಾರೆ. ಅವರದು ಆಲ್ ಇಂಡಿಯಾ ಸರ್ವಿಸ್. ಸೀನಿಯರ್ ಆಫೀಸರ್‌ಗಳನ್ನೂ ಸಹ ನೇಮಕ ಮಾಡ ಬೇಕೆಂಬ ಆದೇಶ ಕೇಂದ್ರ ಸರ್ಕಾರದಿಂದ ಬಂದಿರುವ ಕಾರಣ ಈ ಪ್ರಾಂತ ಸರ್ಕಾರದಲ್ಲೂ ಆರೀತಿ ನೇಮಕವಾಗಿದ್ದಾರೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಅವರನ್ನು ನೀವು ಸೆಲೆಕ್ಟ್ ಮಾಡುವಾಗ ಮತ್ತು ಪ್ರೊಮೋಟ್ ಮಾಡುವಾಗ ಯಾವ ವಯಸ್ಸು ಮತ್ತು ಯಾವ ಸರ್ವಿಸ್ ಆಗಿರುವವರನ್ನು ಐ.ಎ.ಎಸ್. ಮತ್ತು ಐ.ಪಿ.ಎಸ್. ಗೆ ನೇಮಕ ಮಾಡಬೇಕೆಂದಿದ್ದೀರಿ? ಇದು ಕೊನೆಗೆ ಏನಾಗುತ್ತದೆಯೆಂದರೆ ಸರ್ಕಾರದಲ್ಲಿ ಯಾವ ಪಾರ್ಟಿಯೇ ಆಳಿತ ಪಕ್ಷದಲ್ಲಿರಲಿ, ಜನತೆಗೂ ಸರ್ಕಾರಕ್ಕೂ ಕ್ಲ್ಯಾಷ್ ಬಂದು ಸರ್ಕಾರದ ಯಂತ್ರಕ್ಕೆ ಧಕ್ಕೆ ಬರುವ ಪರಿಸ್ಥಿತಿಯುಂಟಾಗುತ್ತದೆ. ವಿಶೇಷವಾಗಿ ಆಂದೋಳನವಾಗುತ್ತದೆ. ಇಂಥ ಸಾಮಾನ್ಯವಾದ ವಿಷಯಗಳಲ್ಲಿ ಸರ್ಕಾರದಿಂದ ನ್ಯಾಯ ದೊರೆಯಲಿಲ್ಲವೆಂದು ಹೇಳಿದರೆ ಉಳಿದ ವಿಷಯಗಳಲ್ಲಿ ಸರ್ಕಾರ ಇನ್ನೆಷ್ಟರಮಟ್ಟಿಗೆ ನ್ಯಾಯವನ್ನು ದೊರಕಿಸಿ ಕೊಡುತ್ತದೆಂಬ ಭಾವನೆ ಜನಗಳಿಗೆ ಬರುತ್ತದೆ. ಅಂಥಾದ್ದಕ್ಕೆ ಅವಕಾಶವನ್ನು ಕೊಡಕೂಡದೆಂದು ನಾನು ಹೇಳುತ್ತೇನೆ.

ಇನು ಡಿವಿಜನಲ್ ಕಮಿಷನರುಗಳ ಆಫೀಸು ವಿಷಯದಲ್ಲಿ ಕೆಲವರು ಅವನ್ನು ಅನಾವಶ್ಯಕವಾದಂಥ ಆಫೀಸುಗಳು ಎಂದು ಹೇಳಿದ್ದಾರೆ. ನಾನೂ ಅದೇ ಭಾವನೆಯುಳ್ಳವನಾದರೂ ಕೂಡ ಅದು ಅನಾವಶ್ಯಕವೆಂದು ಹೇಳುವುದಿಲ್ಲ. ಒಂದೊಂದು ಸಂದರ್ಭದಲ್ಲಿ ಬಡ್ಜೆಟ್ ಅಂಕಿ ಅಂಶಗಳನ್ನು ನೋಡಿದರೆ ಒಂದು ಆಫೀಸು ಅಡ್ಮಿನಿಸ್ಟ್ರೇಷನ್ನಿಗೆ ಎಷ್ಟು ಖರ್ಚಾಗುತ್ತದೆಯೋ ಅಷ್ಟೇ ಡಿವಿಜನಲ್ ಆಫೀಸಿಗೂ ಖರ್ಚಾಗುತ್ತದೆ. ಆದರೆ ಅಲ್ಲಿನ ಕೆಲಸ ಎಷ್ಟರಮಟ್ಟಿಗೆ ಆಗುತ್ತದೆಯೋ ಗೊತ್ತಿಲ್ಲ. ಈಗ ಜಿಲ್ಲೆಯ ಎಲ್ಲಾ ಅಡ್ಮಿನಿಸ್ಟ್ರೇಷನ್ ಕಾಗದಪತ್ರಗಳು ಅವರ ಮೂಲಕವೇ ಬರಬೇಕು. ಅದು ಒಂದು ಪೋಸ್ಟ್ ಆಫೀಸ್ ಇದ್ದಂತೆ ಇರುತ್ತದೆ ಎಂದು ಕೆಲವರು ಹೇಳಿದರು. ಅವರ ಜವಾಬ್ದಾರಿಯೇನು? ಅಲ್ಲಿನ ಅಡ್ಮಿನಿಸ್ಟ್ರೇಷನ್ ಎಷ್ಟರವಟ್ಟಿಗೆ ಪುಲ್ ಅಪ್ ಮಾಡಿದ್ದಾರೆ, ಡಿವಿಜನಲ್ ಕಮಿಷನರುಗಳು ಟೂರ್ಸ್ ಮಾಡುತ್ತಿದ್ದಾರೆ. ಅದರಿಂದ ಏನು ಪ್ರತಿಫಲ ದೊರೆತಿದೆ, ಅವರೇನಾದರೂ ಡಿಸ್ಟ್ರಿಕ್ಟ್ ಆಫೀಸ್, ತಾಲ್ಲೂಕ್ ಆಫೀಸ್‌ಗಳನ್ನು ಇನ್‌ಸ್ಪೆಕ್ಟ್ ಮಾಡುತ್ತಾರೆಯೇ, ಅದರಿಂದ ಅಲ್ಲಿನ ಅಡ್ಮಿನಿಸ್ಟ್ರೇಷನ್ ಚುರುಕಾಗುತ್ತಿದೆಯೇ, ಪಬ್ಲಿಕ್ಕಿಗೂ ಮತ್ತು ಅಡ್ಮಿನಿಸ್ಟ್ರೇಷನ್ನಿಗೂ, ಅಧಿಕಾರವರ್ಗಕ್ಕೂ ಏನೊಂದು ವಿಶ್ವಾಸವನ್ನು ಒಂದು ಮಿಳಿತವನ್ನುಂಟುಮಾಡಿ ಆಡಳಿತದಲ್ಲಿರತಕ್ಕ ಲೋಪದೋಷಗಳನ್ನು ಸರಿತೂಗಿಸುವುದಕ್ಕೆ ಅವರೇನಾದರೂ ಪ್ರಯತ್ನ ಮಾಡುತ್ತಿದ್ದಾರೆಯೇ ಎಂಬುದನ್ನು ಸರ್ಕಾರ ಏತಕ್ಕೆ ಗಮನಿಸಲಿಲ್ಲ? ಇದರಿಂದ ಸರ್ಕಾರ ಡಿವಿಜನಲ್ ಕಮಿಷನರ್ ಆಫೀಸಿಗೆ ಗಮನ ಕೊಡುತ್ತಿಲ್ಲ ಎಂದು ಭಾಸವಾಗುತ್ತದೆ. ಮುಖ್ಯವಾಗಿ ಡಿವಿಜನಲ್ ಕಮಿಷನರ್ ಆಫೀಸನ್ನು ಪುಲಪ್ ಮಾಡಬೇಕು. ಅಂತಹ ಅಧಿಕಾರಿಗಳನ್ನು ಒಂದೇಕಡೆ ಇಡುವುದು ಸರಿಯಲ್ಲ. ಡಿವಿಜನ್ನಿನಿಂದ ಡಿವಿಜನ್ನಿಗೆ ಬದಲಾಯಿಸಬೇಕು. ಡಿವಿಜನಲ್ ಕಮಿಷನರ್ ಟೂರ್ ಬಂದಾಗ್ಗೆ ಲೆಜಿಸ್ಲೇಟರ್ಸ್, ಅಫಿಷಿಯಲ್ಸ್ ಸಹ ಇರುತ್ತಾರೆ. ಆಗ ಅವರು ಆಯಾ ಜಿಲ್ಲೆಯ ಸಬ್ಜೆಕ್ಟ್‌ಗಳನ್ನು ನಮ್ಮ ಮುಂದಿಟ್ಟು ಅವನ್ನು ಹೆಚ್ಚಿಗೆ ಪರಿಶೀಲಿಸಿ ಅಲ್ಲಿರತಕ್ಕ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಇವರಿಗೆ ಏನು ಕಷ್ಟವಾಗುತ್ತದೆ? ಹಾಗಿಲ್ಲದೆ ಹೋದರೆ ಸರ್ಕಾರದಲ್ಲಿ ಅವರ ಅವಶ್ಯಕತೆ ಏನು? ಗ್ರಾಂಟು ಕೊಡುವಾಗ ಫೈನಾನ್ಶಿಯಲ್ ಪೊಜಿಷನ್ ಏನೆಂಬುದನ್ನು ಪರಿಶೀಲಿಸುವುದಿಲ್ಲವೇ?

Sri T. MARIAPPA.—We are very sorry if they are not doing it. They are expected to do it. They must go and see how things are done. In fact we did not want to have Divisional Officers. We had to adopt that system for the reasons that five different units came to us, and some of the far-flung units would otherwise feel isolated. That is why we are experimenting with this system. We have not made them permanent.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ನೀವು ಪರ್ಮನೆಂಟಾಗಿ ಇಡದೆ ಹೋದರೆ ಅದನ್ನು ಯಾವರೀತಿ ಸುಧಾರಿಸಬೇಕೆಂಬುದನ್ನು ಆಲೋಚನೆ ಮಾಡಿ. ಅದನ್ನು ಸುಧಾರಿಸದೆ ಹೋದರೆ ಅದರಿಂದ ಪ್ರಯೋಜನವಿಲ್ಲ. ಹೆಚ್ಚಿಗೆ ಅವರ ಮೇಲೆ ಕಾಮೆಂಟ್ ಮಾಡುವುದಕ್ಕೆ ಹೋಗುವುದಿಲ್ಲ. ಅವರು ಮಾಡುವ ಕೆಲಸ ಕಾರ್ಯಗಳ ವಿಷಯದಲ್ಲಿ ಮಾತ್ರ ಸೂಚನೆ ಮಾಡುತ್ತೇನೆ.

ಇನ್ನು ಮಂತ್ರಿಗಳ ಪ್ರವಾಸದ ವಿಷಯ. ಅಧ್ಯಕ್ಷರು ಅಪ್ಪಣೆ ಕೊಟ್ಟರೆ ವಿರೋಧಪಕ್ಷದ ಸದಸ್ಯರಿಗೆ ಒಂದೆರಡು ವಿಚಾರಗಳನ್ನು ತಿಳಿಸ ಬಯಸುತ್ತೇನೆ. ಎಷ್ಟೋ ಹಣವನ್ನು ಈ ಬಾಬಿಗೆ ಸರ್ಕಾರದವರು ಒದಗಿಸುತ್ತಿದ್ದಾರೆ ಆ ಹಣಕ್ಕಿಂತಲೂ ಮಿಗಿಲಾಗಿ ಏನಾದರೂ ಮಂತ್ರಿಗಳು ಪ್ರವಾಸ ಮಾಡಿದ್ದಾರೆಯೇ ಎಂಬುದನ್ನು ಯೋಚನೆ ಮಾಡಬೇಕು. ಆ ಹಣದ ಮಿತಿಯೊಳಗೆ ಮಂತ್ರಿಗಳು

ಪ್ರವಾಸ ಮಾಡಿದ್ದಾರೆಯೇ ಎಂಬುದು ಈಗ ನಮ್ಮಲ್ಲಿರುವ ವಿಷಯ. ಅನಾವಶ್ಯಕವಾಗಿ ಪದೇಪದೇ ಮಂತ್ರಿಗಳು ಪ್ರವಾಸ ಮಾಡುತ್ತಿದ್ದಾರೆಂದು ಕಾಮೆಂಟನ್ನು ಮಾಡಬಹುದು. ಇದಕ್ಕೆ ಉತ್ತರ ಕೊಡುವುದಾದರೆ ಮಂತ್ರಿಗಳು ಹೆಚ್ಚು ಪ್ರವಾಸ ಮಾಡುವುದರಿಂದ ಏನೂ ಪ್ರಯೋಜನವಿಲ್ಲ. ದೇಶಕ್ಕೆ ಉಪಯೋಗಕರವಾಗುವ ಹಾಗೆ, ಸರಿಯಾದಂಥ ಪ್ರವಾಸಗಳನ್ನು ಕೈಗೊಳ್ಳಬೇಕೆಂದು ನಾನು ಹೇಳುತ್ತೇನೆ. ಯಾವ ಮಂತ್ರಿಗಳೇ ಆಗಲೀ ಒಂದು ತಾಲ್ಲೂಕಿಗೋ ಡಿಸ್ಟ್ರಿಕ್ಟಿಗೋ ಪ್ರವಾಸ ಬಂದಾಗ ಅಲ್ಲಿನ ಅಫಿಷಿಯಲ್ಸ್ ಮತ್ತು ಲೆಜಿಸ್ಲೇಟರ್‌ಗಳ ಒಂದು ಸಭೆಯನ್ನು ಕರೆದು ಏನೇನು ಸಮಸ್ಯೆಗಳನ್ನು ಬಗೆಹರಿಸಬೇಕೆಂಬುದನ್ನು ವಿಚಾರ ಮಾಡಬೇಕು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಯಾವರೀತಿ ವ್ಯವಸ್ಥೆಯನ್ನು ಈ ಬಗ್ಗೆ ಮಾಡುತ್ತಿದ್ದರು ಎಂಬುದು ನಮ್ಮ ಅರ್ಥಿಕ ಮಂತ್ರಿಗಳಿಗೆ ಗೊತ್ತಿದೆ. ಅದನ್ನು ಪ್ರಾಕ್ಟಿಕಲ್ಲಾಗಿ ತೆಗೆದುಕೊಂಡು ಬನ್ನಿ. ಆ ಅಭ್ಯಾಸವನ್ನು ಏಕೆ ಕೈ ಬಿಟ್ಟಿದ್ದೀರಿ? ಯಾರಾದರೂ ಒಂದು ಓಪನಿಂಗ್ ಸೆರಮನಿಗೆ ಬರಬೇಕು ಎಂದು ಕರೆದುಬಿಟ್ಟರೆ ಸಾಕು. ನೂರಾರು ಮೈಲಿಗಳು ಸುಮ್ಮನೆ ಹೋಗಿಬರುವುದು ಸಾಧುವಾದುದಲ್ಲ. ಯಾರ ಟೀಕೆಗೂ ನಾನು ಒಪ್ಪುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಸರಿಯಾದ ರೀತಿಯಲ್ಲಿ ಟೀಕೆಮಾಡಿದರೆ ಒಪ್ಪಿಕೊಳ್ಳೋಣ.

ಶ್ರೀ ಟಿ. ಮರಿಯಪ್ಪ.—ನೀವು ಕನ್‌ಸ್ಟ್ರಕ್ಟಿವ್ ಆಗಿ ಸಲಹೆಮಾಡಿದರೆ ನಾವು ಒಪ್ಪಿಕೊಳ್ಳುತ್ತೇವೆಂದು ಅವರು ಹೇಳುವುದು.

ಶ್ರೀ ಯು. ಎಂ. ಮಾದಪ್ಪ.—ಏಳು ವರ್ಷಗಳಿಂದ ಹೇಳುತ್ತಿದ್ದೇವೆ. ಈಗಲೂ ಅದನ್ನೇ ಹೇಳುತ್ತೇವೆ.

ಶ್ರೀ ಟಿ. ಎಸ್. ಮುಡಲಗಿರಿಗೌಡ.—ಮುಖ್ಯಮಂತ್ರಿಗಳಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಮಂತ್ರಿಗಳ ಪ್ರವಾಸದ ವಿಷಯದಲ್ಲಿ ಒಂದು ಪಾಲಿಸಿಯನ್ನು ಹಾಕಿಕೊಳ್ಳಿ. ಈಗ ಸರ್ಕಾರದವರು 50 ಸಾವಿರ ರೂಪಾಯಿಗಳನ್ನು ಆ ಬಾಬಿಗೆ ಒದಗಿಸಿದ್ದಾರೆ. ಆ ಹಣವನ್ನು ಖರ್ಚುಮಾಡುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಮಂತ್ರಿಗಳು ಪ್ರವಾಸ ಬಂದಂಥ ಕಾಲದಲ್ಲಿ ಒಂದೆರಡು ಗ್ರಾಮಗಳನ್ನು ವಿಜಿಟ್ ಮಾಡಿ. ಮೊದಲೇ ಟೂರ್ ಪ್ರೋಗ್ರಾಮನ್ನು ಕಳುಹಿಸಬೇಡಿ. ಯಾವ ತಾಲ್ಲೂಕಿಗೆ ಯಾವ ಜಿಲ್ಲೆಯನ್ನು ವಿಜಿಟ್ ಮಾಡುತ್ತೀರೋ ಅಲ್ಲಿಗೆ ಬಂದು ನಿಮ್ಮ ಪ್ರೋಗ್ರಾಮನ್ನು ತಿಳಿಸಿ. ಎಷ್ಟೋ ಎನ್.ಇ.ಎಸ್. ಬ್ಲಾಕುಗಳಿವೆ. ಯಾವುದಾದರೂ ಒಂದೆರಡು ಗ್ರಾಮಗಳಿಗೆ ಹೋಗಿಬನ್ನಿ. ಸರ್ಕಾರೀ ಅಧಿಕಾರಿಗಳ ವಿಷಯದಲ್ಲಿ, ಅವರ ಕೆಲಸ ಕಾರ್ಯಗಳ ವಿಷಯದಲ್ಲಿ ಜನಾಭಿಪ್ರಾಯ ಹೇಗಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಒಂದು ಅವಕಾಶವಾಗುತ್ತದೆ. ಜನತೆಯ ಅವಶ್ಯಕತೆ ಏನೆಂಬುದನ್ನು ತಿಳಿದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಹಾಗಿಲ್ಲದೆ ಸರ್ಕಾರೀ ಅಧಿಕಾರಿಗಳೇ ಏರ್ಪಾಡು ಮಾಡಿರತಕ್ಕ ಟೂರ್ ಪ್ರೋಗ್ರಾಂಗಳಿಗೆ ಮಂತ್ರಿಗಳು ಸಿಕ್ಕಿಕೊಂಡು ಜನತೆಯ ಅಭಿಪ್ರಾಯವೇನಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಅವಕಾಶವಿಲ್ಲದ ಪ್ರವಾಸಗಳನ್ನು ಏರ್ಪಾಡುಮಾಡಬೇಡಿ ಎಂದು ತಮ್ಮ ಮೂಲಕ ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಆದರೆ ತಾಲ್ಲೂಕ್, ಸಬ್ ಡಿವಿಜನ್ ಮತ್ತು ಡಿಸ್ಟ್ರಿಕ್ಟ್ ಆಫೀಸುಗಳ ವಿಚಾರಗಳನ್ನು ಪರಿಶೀಲಿಸುವುದಕ್ಕೆ ನಾನೀಗ ಹೋಗುವುದಿಲ್ಲ; ಅವುಗಳ ವಿಚಾರವನ್ನೂ ಸಹ ನಾನೀಗ ಹೇಳುತ್ತಿಲ್ಲ. ಈ ಸಂಬಂಧದಲ್ಲಿ S.D.O. ಆಫೀಸು ಬೇಡ ಎಂದು ಹೇಳತಕ್ಕ ಒಂದು ವಿಚಾರ ಸಾಕಾಗಿದೆ. ಈ ಆಫೀಸು ಇದ್ದರೆ ಕೆಲಸಗಳು ಎಷ್ಟು ಚುರುಕಾಗಿ ನಡೆಯುತ್ತವೆ, ಅಥವಾ ಈ ಆಫೀಸಿಲ್ಲದಿದ್ದರೆ ಆಗ ಕೆಲಸಗಳೆಷ್ಟು ಚುರುಕಾಗಿ ನಡೆಯುತ್ತವೆ ಎನ್ನುವುದನ್ನು ನೋಡಬೇಕಾಗಿದೆ. ಆದರೆ ಇಲ್ಲಿಯವರೆಗೂ ತಾಲ್ಲೂಕು ಕಛೇರಿಗಳ ಅಭಿವೃದ್ಧಿಗಾಗಿ ಏನಾದರೂ ಒಂದು ಸ್ಕೀಮನ್ನು ಆ ಕಛೇರಿಗಳಲ್ಲಿ ಆಗತಕ್ಕ ಕೆಲಸ ಕಾರ್ಯಗಳ ತೀವ್ರಕ್ರಮದ ಬಗ್ಗೆ ಏನಾದರೊಂದು ಮಾರ್ಗವನ್ನು ಹುಡುಕಲಿಲ್ಲ. ಎಲ್ಲಿ ಕೈಹಾಕಿದರೆ......

Sri J. B. MALLARADHYA.—There was a system of intensive inspection of Hoblies by the Revenue Sub-Division Officers and the Revenue Commissioner used to review these reports. If we will only bring the system back, I think there will be some distinct improvement in the Taluk Administration.

ಶ್ರೀ ಟಿ. ಎಸ್. ಮುಡಲಗಿರಿಗೌಡ.—ಸ್ವಾಮಿ, ಮಲ್ಲಾರಾಧ್ಯರೇ, ಆ ಪ್ರಾಕ್ಟೀಸು ಈಗಲೂ ಜಾರಿಯಲ್ಲಿದ್ದೇ ಇದೆ. ಆದರೆ ಈ ದಿವಸ ಕೆಳಗಿನ ಅಧಿಕಾರಿಗಳಿಂದ ಹಿಡಿದು ತೀರಾ ಮೇಲಿನ ಅಧಿಕಾರಿವರೆಗೂ, ಜಿಲ್ಲಾಧಿಕಾರಿಗಳನ್ನೊಳಗೊಂಡು, ಇವರು ಹಳ್ಳಿಗಳಿಗೆ ಭೇಟಿಕೊಡಲು ಅವಕಾಶವೇ ಇಲ್ಲ. ಆದರೆ ಈ ತಹಶೀಲ್‌ದಾರರುಗಳಾದರೂ ಹಳ್ಳಿಗಳಿಗೆ ವಿಜಿಟ್ ಮಾಡುವಂತೆ ಆದ ಪಕ್ಷಕ್ಕೆ ಅಲ್ಲಿಯ ಅಭಿವೃದ್ಧಿ ಕಾರ್ಯಗಳ ಬಗ್ಗೆ ಹಣವನ್ನು ಖರ್ಚುಮಾಡಲು ಒಂದು ಅವಕಾಶವಾದರೂ ಆದೀತೇನೋ, ಅದರಿಂದಲಾದರೂ ಹಳ್ಳಿಯ ಜನರಿಗೊಂದು ಅನುಕೂಲವಾದೀತೇನೋ ಎಂದು ಹೇಳೋಣವೆಂದರೆ ಈ ದಿವಸ ರೆವಿನ್ಯೂ ಇನ್ಸ್‌ಪೆಕ್ಟರುಗಳಿಗೆ ಪ್ರಮೋಷನ್ ಕೊಟ್ಟು ಅವರನ್ನು ತಹಶೀಲ್‌ದಾರರನ್ನಾಗಿ ಮಾಡಿದ್ದಾರೆ. ಆದರೆ ಇವರಿಗೆ ಮೊದಲು ಆ ತಾಲ್ಲೂಕ್ ಛಾರ್ಜನ್ನು ಕೊಡದೆ ಇನ್ನಾವುದಾದರೂ ಒಂದು ಸಣ್ಣ ಛಾರ್ಜನ್ನು ಅವರಿಗೆ ಕೊಟ್ಟು ಅಲ್ಲಿ ಅವರು ಸ್ವಲ್ಪ ಅನುಭವ ಪಡೆದನಂತರ ಆಮೇಲೆ ಅವರನ್ನು ತಾಲ್ಲೂಕ್ ಛಾರ್ಜಿಗೆ ಬರುವಂತೆ ಏರ್ಪಾಡು ಮಾಡಿದರೆ ಆಗೇನಾದರೂ ಸ್ವಲ್ಪ ಅನುಕೂಲವಾಗಬಹುದು. ಈ ತಹಶೀಲ್‌ದಾರರುಗಳ ದಕ್ಷತೆಯೇನಿದೆ ಯೆಂಬುದು ಮಾನ್ಯ ಹಣಕಾಸಿನ ಸಚಿವರಿಗೆ ಚೆನ್ನಾಗಿ ಗೊತ್ತಿದೆ, ಇವರ ದಕ್ಷತೆಯನ್ನು ಇನ್ನೂ ಇಂಪ್ರೂವ್ ಮಾಡಬೇಕಾಗಿದೆ. ಹಿಂದೆ ಅಸಿಸ್ಟೆಂಟ್ ಕಮಿಷನರಗಳನ್ನು ಮತ್ತು ತಹಶೀಲ್‌ದಾರರುಗಳನ್ನು ಪ್ರೊಬೇಷನರ್ಸ್‌ಆಗಿ ತೆಗೆದುಕೊಂಡ ನಂತರ ಅವರಿಗೆ ಪ್ರತಿಯೊಂದು ಇಲಾಖೆಯಲ್ಲೂ ಪ್ರಾಕ್ಟೀಸ್‌ಕೊಟ್ಟು ಅವರು ತಮ್ಮ ಛಾರ್ಜನ್ನು ವಹಿಸಿಕೊಳ್ಳುವ ಮುನ್ನ ಅವರಿಗೆ ಕೆಲಸದ ಮಾಹಿತಿ ದೊರೆಯುವಂತೆ ಮಾಡತಕ್ಕ ಒಂದು ಪದ್ಧತಿ ಇತ್ತು. ಆದರೆ ಈ ದಿವಸ ಆ ಪ್ರೊಬೇಷನರುಗಳನ್ನು ನೇರವಾಗಿ ತಾಲ್ಲೂಕ್ ಛಾರ್ಜಿಗೆ ನೇಮಿಸಲಾಗುತ್ತಿರುವುದರಿಂದ ಇನ್ನು ಮುಂದಕ್ಕೆ ದಯವಿಟ್ಟು ಇಂಥ ಪ್ರೊಬೇಷನರಿಗಳನ್ನು ತೆಗೆದುಕೊಳ್ಳಬಾರದೆಂದು ಹೇಳುತ್ತೇನೆ. ಇವರನ್ನು ಇಂಥ ದೊಡ್ಡ ದೊಡ್ಡ ಛಾರ್ಜುಗಳಿಗೆ ನೇರವಾಗಿ ಹಾಕುತ್ತಿರುವುದರಿಂದ ಈ ದಿವಸ ತಾಲ್ಲೂಕ್ ಅಡ್ಮಿನಿಸ್ಟ್ರೇಷನ್ ಬಹಳ ಕೆಳಮಟ್ಟಕ್ಕಿಳಿದಿದೆ. ಇನ್ನು ಮುಂದಕ್ಕಾದರೂ ಇದನ್ನು ಮಾಡದಂತೆ ನೋಡಿಕೊಳ್ಳಬೇಕಾದದ್ದು ಅತ್ಯಗತ್ಯ. ಈ ದಿವಸ ಅಮಲ್ದಾರರುಗಳಿಗೆ ಟೆನೆನ್ಸಿ ಕೇಸುಗಳನ್ನು ವಿಚಾರಣೆ

(ಶ್ರೀ ಟಿ. ಎಸ್. ಮೂಡಲಗಿರಿಗೌಡ)

ಮಾಡತಕ್ಕ ಅಧಿಕಾರವನ್ನು ಬೇರೆ ಕೊಡಲಾಗಿದೆ. ಈ ಒಂದು ಕೆಲಸವನ್ನು ಅವರಿಗೆ ವಹಿಸಿರುವುದರಿಂದ ಈ ದಿವಸ ತಾಲ್ಲೂಕಿನ ಇನ್ನುಳಿದ ಎಲ್ಲ ಅಭಿವೃದ್ಧಿಕಾರ್ಯಗಳೂ ಕೆಲಸಗಳೂ ನಿಂತುಹೋಗಿವೆ. ಆದುದರಿಂದ ದಯವಿಟ್ಟು ಸರ್ಕಾರದವರು ಟೆನೆನ್ಸಿ ಕೇಸುಗಳನ್ನು ಇನ್ನು ಮೇಲೆ ಕೋರ್ಟುಗಳಿಗೆ ವರ್ಗಾಯಿಸುವುದು ಅನುಕೂಲವೆಂದು ಹೇಳುತ್ತೇನೆ. ಈ ಟೆನೆನ್ಸಿ ಕಾನೂನನ್ನು ಹೇಗೆ ಅರ್ಥಮಾಡಿಕೊಳ್ಳಬೇಕೆಂಬುದೇ ಅನೇಕ ಅಮಲ್ದಾರರುಗಳಿಗೆ ಈ ದಿವಸ ಗೊತ್ತಿಲ್ಲ. ಹೀಗಾಗಿ ಈ ಟೆನೆನ್ಸಿ ಕೇಸುಗಳನ್ನು ಡಿಲೇ ಮಾಡುವುದೇ ಅವರಿಗೆಲ್ಲ ಒಂದು ದೊಡ್ಡ ಕೆಲಸವಾಗಿಬಿಟ್ಟಿದೆ. ಇದರಿಂದ ಅವರನ್ನು ಈ ದಿವಸ ಅನೇಕರೀತಿಯ ಲಂಚ, ಕರಪ್ಷನ್‌ಗಳಿಗೆ ಗುರಿಮಾಡಲು ಅವಕಾಶವಾದಹಾಗಾಗಿದೆ. ಅವರಿಗೆ ಈಗ ಈ ಒಂದು ರಿಲೀಫನ್ನು ಕೊಡಬೇಕೆಂದು ಸರ್ಕಾರದವರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ವಿಲೇಜ್ ಆಫೀಸರುಗಳ ಒಂದು ಪ್ರಾಬ್ಲೆಂ ಏನಿದೆ ಅದನ್ನು ಹೇಗಾದರೂಮಾಡಿ ಸರ್ಕಾರದವರು ಟ್ಯಾಕಲ್ ಮಾಡಲೇ ಬೇಕು. ಚಿಕ್ಕ ಮೈಸೂರಿನಲ್ಲಿ ಇದರ ಅಗತ್ಯ ಬಹಳವಾಗಿದೆ. ಆದರೆ ದೊಡ್ಡ ಮೈಸೂರಿನ ಅನೇಕ ಭಾಗಗಳಲ್ಲಿ ಇಂಥ ಒಂದು ಪರಿಸ್ಥಿತಿಯಿಲ್ಲ. ಟೆನೆನ್ಸಿ ಕೇಸುಗಳ ಬಗ್ಗೆ ಅಗತ್ಯವಾಗಿ ಬರೆಯಬೇಕಾದಂಥ ಪಹಣಿ ಇತ್ಯಾದಿ ಬಾವಣಿಗೆಗಳನ್ನು ಮಾಡಲು ಅನುಕೂಲವಿಲ್ಲದೆ ಇದೊಂದು ದೊಡ್ಡ ವ್ಯಾಧಿಯಾಗಿ ಪರಿಣಮಿಸಿದೆ. ಈ ಕೆಲಸವನ್ನು ಇನ್ನುಮೇಲೆ ಒಂದು ಸರಿಯಾದ ಸಂಬಳ ಸಾರಿಗೆ ಮೇಲೆ ನಿಗದಿ ಮಾಡದಿದ್ದರೆ ಅದರಿಂದ ತುಂಬ ಅನಾನುಕೂಲವಾಗುತ್ತದೆ. ಈ ಕಾರ್ಯವನ್ನು ದಕ್ಷತೆಯಿಂದ ನಡೆಸಲು ನೂರು ರೂಪಾಯಿಗಳ ಸಂಬಳ ಕೊಟ್ಟರೂ ಚಿಂತೆಯಿಲ್ಲ ಈ ವ್ಯವಹಾರದಲ್ಲಿರತಕ್ಕ ಇದರಿಂದ ಉದ್ಭವವಾಗತಕ್ಕ ತಕರಾರುಗಳನ್ನು ಕಡಮೆ ಮಾಡದಿದ್ದರೆ ದೇಶದಲ್ಲಿ ಸರ್ಕಾರದವರು ಏನೊಂದು ಅಭಿವೃದ್ಧಿ ಕಾರ್ಯವನ್ನೂ ಸಹ ಮಾಡಲು ಸಾಧ್ಯವಿರುವುದಿಲ್ಲ. ಅದಕ್ಕಾಗಿ ಮೊದಲು ದೇಶದಲ್ಲಿ ಈ ಲಟಿಗೇಷನ್‌ಗಳು ಕಡಮೆ ಆಗಬೇಕು. ಅದನ್ನು ಕಡಮೆ ಮಾಡಲು ಯಾವ ಒಂದು ಪ್ರಯತ್ನವನ್ನೂ ನಡೆಸುತ್ತಿಲ್ಲವಾದ್ದರಿಂದ ಈ ದಿವಸ ಜನತೆಯಲ್ಲಿ ಬಹಳ ಅಸಮಾಧಾನ ಮೂಡುತ್ತಿದೆ. ಈ ದಿವಸ 100 ಕ್ಕೆ 98 ಕೇಸುಗಳಲ್ಲಿ ನನ್ನ ಕಿವಿಗೆ ಬಿದ್ದುದರಲ್ಲಿ ಗ್ರಾಮಾಧಿಕಾರಿಗಳಿಗೊಂದು ಸರಿಯಾದ ಸಂಭಾವನೆಯಿಲ್ಲದ್ದೇ ಇದಕ್ಕೆಲ್ಲ ಕಾರಣವೆಂದು ಕೇಳಿಬರುತ್ತಿದೆ. ಆದುದರಿಂದ ಸರ್ಕಾರದವರು ಕೂಡಲೆ ಈ ಕಾರ್ಯದಲ್ಲೂ ಕೂಡ ಸೂಕ್ತ ಪರಿಶೀಲನೆ ಮಾಡತಕ್ಕದ್ದು ಅತ್ಯಗತ್ಯ. ಏನಾದರೂ ಮಾಡಿ ಈ ಸಮಸ್ಯೆಯನ್ನು ಬಗೆಹರಿಸಲೇ ಬೇಕೆಂದು ಹೇಳುತ್ತೇನೆ.

ಆದರೆ ನಮ್ಮ ವಿರೋಧಪಕ್ಷದ ಮಾನ್ಯ ಸದಸ್ಯರು ಏಷ್ಟೋ ಟೀಕೆಗಳನ್ನು ಮಾಡಿದ್ದಾರೆ. ಆದರೆ ಅದರಲ್ಲಿ ತೀರ ಅಸಹ್ಯಕರವಾದಂಥ ಒಂದು ವಿಚಾರವನ್ನು ಹೇಳಿದ್ದಾರೆ. ಕಾಂಗ್ರೆಸ್ಸಿನವರು ಜನರಿಗೆ ಹೆಂಡ ಕುಡಿಸಿ ಅವರನ್ನು ಜನರಲ್ ಎಲೆಕ್ಷನ್ನಿನಲ್ಲಿ ಭಾಗ ವಹಿಸುವಂತೆ ಮಾಡಿದ್ದರೆಂದು ಒಂದು ಮಾತನ್ನು ಹೇಳಿದ್ದಾರೆ.

ಶ್ರೀ ಟಿ. ಮರಿಯಪ್ಪ.—ಯಾರೋ ಮೊಸರನ್ನ ತಿಂದು ಬೇರೆಯವರ ಬಾಯಿಗೆ ಕೈಯನ್ನು ಒರೆಸಿದಂತಿದೆ ಅದು.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಸ್ವಾಮಿ, ನಾನು P.S.P. ಪಾರ್ಟಿಯವರು ಹೆಂಡವನ್ನು ಲಾರಿಯಲ್ಲಿ ಹೇರಿಕೊಂಡು ಹೋಗುತ್ತಿದ್ದುದನ್ನು...

Sri G. N. PUTTANNA.—I rise to a point of order. The Hon'ble gentleman was in the car and while distributing, I caught him.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಸ್ವಾಮಿ, ನಾನೂ ಇನ್ನೂ ನನ್ನ ಕೆಲವು ಸ್ನೇಹಿತರೂ ತುಮಕೂರಿನಲ್ಲಿ ಹರಿಜನರ ಕೇರಿಗೆ ಕ್ಯಾನ್‌ವಾಸಿಗಾಗಿ ಹೋಗಿದ್ದ ಕಾಲದಲ್ಲಿ ನಾವು ಕ್ಯಾನ್‌ವಾಸ್ ಮುಗಿಸಿಕೊಂಡು ಮನೆಗೆ ಬರಲು ನಮ್ಮ ಪ್ರಾಣಗಳು ಉಳಿದಾವೇ ಎನ್ನುವಂಥ ಪ್ರಸಂಗ ಒದಗಿತು. ಅಂಥ ಪರಿಸ್ಥಿತಿಯಿರುವಾಗ ನಾವು ಏನಾದರೂ ಮಾಡಿ ಆಗಿನ ಹೋಂಮಿನಿಸ್ಟರ ಮನೆಗಾದರೂ ಹೋಗೋಣವೆಂದು ಓಡಿದೆವು.

ಶ್ರೀ ಜಿ. ಎನ್. ಪುಟ್ಟಣ್ಣ.—ಆ ಹೋಂಮಿನಿಸ್ಟರ ಮನೆಯಲ್ಲೇ ಹೆಂಡವಿದ್ದದ್ದು.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ನಿಜವಾಗಿಯೂ ಒಂದು ಮಾತನ್ನು ಹೇಳುವುದಾದರೆ ಇದು ಸತ್ಯವನ್ನೇ ಕೊಲೆಮಾಡತಕ್ಕ ಮಾತೆಂದು ಹೇಳಬೇಕಾಗಿದೆ. ಆ ದಿವಸ ನಾವು ಅಲ್ಲಿಂದ ಪ್ರಾಣಗಳನ್ನು ಉಳಿಸಿಕೊಂಡು ಬರುವುದೇ ಬಹಳ ಕಷ್ಟವಾಯಿತು. ಆ ದಿವಸ ನಾವು ನಮ್ಮ ಪ್ರಾಣಗಳು ಉಳಿದರೆ ಸಾಕಪ್ಪ ನಮ್ಮ ಮನೆಗಳಿಗಾದರೂ ಹೋಗಿಬಿಡೋಣವೆನ್ನುವಷ್ಟರ ಮಟ್ಟಿಗೆ ಅಲ್ಲಿಯ ಪ್ರಸಂಗ ಭಯಂಕರವಾಗಿತ್ತು. ಆದರೆ ಎದುರು ಪಕ್ಷದವರು ಈಗ ಮಾಡಿರತಕ್ಕ ವಾದ "ಕೋತಿ ಮೊಸರನ್ನ ತಿಂದು ಮೇಕೆಬಾಯಿಗೆ ಒರೆಸಿದಂತಿದೆ" ಎಂದುಕೊಂಡು ನಾವು ಅವರು ಹೇಳಿದಂಥ ಅನೇಕ ವಿಚಾರಗಳನ್ನು ಇಗ್ನೋರ್ ಮಾಡಿಕೊಂಡು ಹೋಗುತ್ತಿದ್ದೇವೆ.

6-30 P.M.

ಕೃಷ್ಣರಾಜಸಾಗರ ರೆಸ್ಟೋರೆಂಟ್. ಇದಕ್ಕೆ ಕೆಲವು ಲಕ್ಷ ಹಣವನ್ನು ಪ್ರೊವೈಡ್ ಮಾಡಿದ್ದಾರೆ. ನಾನು ನೀತಿಯ ದೃಷ್ಟಿಯಿಂದ ಹೇಳುತ್ತಿದ್ದೇನೆ. ಒಳ್ಳೆಯ ಇನ್‌ಕಂ ಬರದಿರಬಹುದು; ಇನ್‌ಕಂ ಮತ್ತು ಎಸ್ಟ್ಯಾಬ್ಲಿಷ್‌ಮೆಂಟ್ ವಿಷಯದಲ್ಲಿ ನಾನು ಹೇಳುತ್ತಾ ಇಲ್ಲ. ಆದರೆ ಇಂಥ ಸಂಸ್ಥೆಗಳನ್ನು ಏತಕ್ಕೆ ಸರ್ಕಾರ ಆಡಳಿತದಲ್ಲಿ ಇಟ್ಟುಕೊಂಡಿರಬೇಕು? ಅದನ್ನು ಬೇರೆಯವರಿಗೆ ಇಂಥ ಕಂಡೀಷನ್ಸಿನಲ್ಲಿ ರನ್‌ಮಾಡಬೇಕು ಎಂದು ರೂಲ್ಸ್ ಫ್ರೇಮ್ ಮಾಡಿಕೊಡುವುದು ಉತ್ತಮವಲ್ಲವೇ? ಹೊರಗಡೆಯಿಂದ ಬರತಕ್ಕವರ ಸೌಕರ್ಯಕ್ಕೋಸ್ಕರ ಇಟ್ಟಿರಬಹುದು, ಆದರೆ ಶ್ರೀ ಮರಿಯಪ್ಪನವರು ಬೇರೆ ಕಡೆ ಏನು ಮಾಡುತ್ತಾರೆಂದು ನೋಡುವುದಾದರೆ ಪ್ರೈಮ್‌ಮಿನಿಸ್ಟರಾಗಲಿ ಅಥವಾ ಬೇರೆ ಯಾರೇ ಆಗಲಿ ಬಂದರೆ ಹೊಟೇಲುಗಳಲ್ಲಿ ಇಳಿದುಕೊಳ್ಳುತ್ತಾರೆ. ಮಿನಿಸ್ಟರುಗಳು ಬರುತ್ತಾರೆ.

ಶ್ರೀ ಟಿ. ಮರಿಯಪ್ಪ.—ಹೊರಗಡೆಯಿಂದ ಬಂದವರಿಗೆ ಪ್ರೊವೈಡ್ ಮಾಡಬೇಕು ಎನ್ನುವ ಉದ್ದೇಶವಲ್ಲ. ಸರಿಯಾದ ಸ್ಟ್ಯಾಂಡರ್ಡ್, ಕನ್‌ವೀನಿಯನ್ಸ್ ಒದಗಿಸಬೇಕು ಎಂದು ಉದ್ದೇಶ ಇದೆ. ಪ್ರೈವೇಟ್ ಜನರಿಗೆ ಕೊಟ್ಟು ಅವರು ಮಿಸ್‌ಯೂಸ್‌ಮಾಡಿ ಎಕ್ಸ್‌ಪ್ಲಾಯಿಟ್ ಮಾಡಿದಮೇಲೆ ವಾಪಸ್ಸು ತೆಗೆದುಕೊಂಡಿದ್ದೇವೆ. ಡಿಲ್ಲಿಯೊಳಗೆ ಅಶೋಕ ಹೋಟೇಲ್, ಜನತಾ ಹೋಟೇಲ್ ಇದೆ. They keep up the Indian

standards. ಆರ್ಡಿನರಿಯಾಗಿ ಏನೂ ಮಾಡಬೇಕಾಗಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಒಳ್ಳೆಯದು ಇರಬಹುದು. ಒಳ್ಳೆಯದು ಇದ್ದರೆ ಒಪ್ಪಿಕೊಳ್ಳುತ್ತೇನೆ. ಆದರೆ ಇದು ಸರಿಯಲ್ಲ. ಪ್ರಿನ್ಸಿಪಲ್‌ಗೆ ವಿರುದ್ಧವಾಗಿದೆ. ಇಷ್ಟು ಹೇಳಿಬಿಟ್ಟು ಅದಕ್ಕೆ ಒದಗಿಸಿರತಕ್ಕ ಹಣಕ್ಕೆ ನನ್ನ ಒಪ್ಪಿಗೆ ಇದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸ್ವಾಮಿ, ಸಾಮಾನ್ಯ ಆಡಳಿತದ ಬೇಡಿಕೆಗೆ ವಿರೋಧವಾಗಿ ಆಡಳಿತ ಸಾಮಾನ್ಯವಾಗಿದೆ ಎಂದು ಹೊಸ ಹೆಸರನ್ನು ಕೊಡಬೇಕು ಎಂದು ಇದ್ದೇನೆ. ಮಂತ್ರಿಗಳು ಟೂರ್‌ಮಾಡುವ ವಿಷಯದಲ್ಲಿ ಬಹಳ ಜನ ವಿರೋಧಿಸಿದರು. ಮತ್ತೆ ಕೆಲವರು ಪರವಾಗಿ ಮಾತನಾಡಿದರು. ಪ್ರಜಾ ಸರ್ಕಾರದ ಆಡಳಿತದಲ್ಲಿ ಮತ್ತು ಪ್ರಜಾಪ್ರಭುತ್ವದಲ್ಲಿ ಮಂತ್ರಿಗಳು ಪ್ರವಾಸ ಮಾಡಲೇಬೇಕಾಗುತ್ತದೆ ಎನ್ನುವುದನ್ನು ಎಲ್ಲರೂ ಕೂಡ ಸಾಮಾನ್ಯವಾಗಿ ಒಪ್ಪಿಕೊಳ್ಳುತ್ತೇವೆ. ಆದರೆ ಮಂತ್ರಿಗಳು ಬಿಜಾಪುರದಿಂದ ಹೈದರಾಬಾದ್, ಹೈದರಾಬಾದಿನಿಂದ ಗುಲ್ಬರ್ಗಕ್ಕೆ ಹೋದಾಕ್ಷಣಕ್ಕೆ ಏನೂ ಮಾಡಿದಂತೆ ಆಗುವುದಿಲ್ಲ. ಮಂತ್ರಿಗಳು ಯಾವುದಾದರೂ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ಗೆ ಹೋದಾಗ ಅಲ್ಲಿ ಸ್ಥಳದ ಮುಖಂಡರನ್ನು ಯಾರನ್ನಾದರೂ ಕರೆಸಿ ಎಂ.ಎಲ್.ಏಗಳನ್ನು ಕರೆಸಿ ಮಾತನಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ (ರೆವೆನ್ಯೂ ಸಚಿವರು).—ನಾನು ನಿಮ್ಮ ಕ್ಷೇತ್ರಕ್ಕೆ ಪ್ರವಾಸ ಬಂದಿದ್ದಾಗ ನಾನೇ ಮೀಟಿಂಗ್ ಕರೆದಿದ್ದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಒಪ್ಪಿಕೊಳ್ಳುತ್ತೇನೆ. ಶ್ರೀ ಕಡಿದಾಳ್ ಮಂಜಪ್ಪನವರು ಮತ್ತು ಶ್ರೀ ಲಿಂಗಾರೆಡ್ಡಿಯವರು ಡಿಸ್ಟ್ರಿಕ್ಟ್‌ಲೆವೆಲ್ ನಲ್ಲಿ ಮೀಟಿಂಗ್ ಕರೆದು ಜನಗಳ ಕುಂದು ಕೊರತೆಗಳನ್ನು ಕೇಳಿದರು. ಅವು ಕಾರ್ಯಗತವಾಗಿಲ್ಲ. ಕಾರ್ಯಗತವಾಗದಿದ್ದರೂ ಚಿಂತೆಯಿಲ್ಲ. ಅವರಿಗೆ ನನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತೇನೆ. ನನ್ನ ತಾಲ್ಲೂಕಿಗೆ 12 ಜನಕ್ಕೆ ಕಡಿಮೆ ಇಲ್ಲದ ಮಂತ್ರಿಗಳು ಪ್ರವಾಸ ಬಂದಿದ್ದಾರೆ. ಒಬ್ಬರೇ ಒಬ್ಬರು ಮಂತ್ರಿಗಳು ಸುಮಾರು 13 ಸಾರಿ ನಮ್ಮ ಕ್ಷೇತ್ರಕ್ಕೆ ಪ್ರವಾಸ ಬಂದಿದ್ದರೂ ತಿಪಟೂರಿನಲ್ಲಿ ಅಳಿಯನ ಮನೆಯಲ್ಲಿ ಇಳಿದುಕೊಂಡು ಪ್ರತಿಯೊಬ್ಬ ಆಫೀಸರನ್ನು ಕೂಡ ಅಳಿಯನ ಮನೆಗೆ ಕರೆಸಿ ಕೊಂಡು ಮಾತನಾಡಿದ್ದಾರೆ. ಯಾರಾದರೂ ಅಫಿಷಿಯಲ್‌ಗಳನು ಅವರು ಅಳಿಯನ ಮನೆಗೆ ಕರೆಸಲಿಲ್ಲ ಎಂದರೆ ನಾನು ನನ್ನ ಈ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಡಲಿಕ್ಕೆ ಸಿದ್ಧವಾಗಿದ್ದೇನೆ. ಅಳಿಯನ ಮನೆಗೆ ಆಫೀಸರನ್ನು ಕರೆಸಿ ಕೊಂಡು ಮಾತನಾಡುವುದು ಸರಿಯಲ್ಲ. ಮಂತ್ರಿಗಳು ಟೂರ್ ಹೋಗಬಾರದು ಎಂದು ನಾನು ಹೇಳುವುದಿಲ್ಲ. ಮಿಕ್ಕ ಮಂತ್ರಿಗಳಲ್ಲಿ ನನಗೆ ಯಾರ ಮೇಲೂ ದ್ವೇಷಾಸೂಯೆ ಇಲ್ಲ. ಇವರೊಬ್ಬರ ಮೇಲೆ ಮಾತ್ರ ನಾನು ದ್ವೇಷಾಸೂಯೆಯನ್ನು ವ್ಯಕ್ತಪಡಿಸುತ್ತೇನೆ. ಮಂತ್ರಿಗಳು ಕಾಂಗ್ರೆಸ್ ಆಫೀಸಿಗೆ ಹೋಗಬಾರದು ಎಂದು ನಾನು ಹೇಳುವುದಿಲ್ಲ. ಮಂತ್ರಿಗಳು ಟೂರ್ ಮಾಡಬೇಕು, ಜನಗಳ ಕಷ್ಟ ಸುಖಗಳನ್ನು ತಿಳಿದು ಕೊಳ್ಳಬೇಕು. ಯಾವ ಹಳ್ಳಿಗೂ ಹೋಗಿಲ್ಲ. ತಾಲ್ಲೂಕು ಹೆಡ್‌ಕ್ವಾರ್ಟರ್‌ಗಳಿಗೂ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್‌ಗಳಿಗೂ ಹೋಗುವುದು. ಜನಗಳು ಬಂದು ಹುಮ್ಮಸ್ಸು ಮಾಡುತ್ತಾರೆ. ಒಳ್ಳೆಯ ಕೊಟ್ಟಿಗೆ ಮನೆ ಕಟ್ಟಿಸುತ್ತೇವೆ ಫೌಂಡೇಷನ್ ಹಾಕಬೇಕು, ಬಸ್ ಲೈನ್ ಹಾಕಿದ್ದೇವೆ ಪ್ರಾರಂಭೋತ್ಸವ ಮಾಡಬೇಕು ಎಂದು ಕರೆದುಕೊಂಡು ಹೋಗಿ ಹಾರ ಹಾಕಿ ಮಂತ್ರಿಗಳಿಂದ ಕೆಲಸ ಮಾಡಿಸಿಕೊಳ್ಳುವುದು ಸರಿಯಲ್ಲ. ಸತ್ಯವಾಗಿ ದೇಶಸೇವೆ ಮಾಡಬೇಕು. ಸತ್ಯ ಯಾವುದು ಅಸತ್ಯ ಯಾವುದು ಎಂದು ತಿಳಿದುಕೊಳ್ಳದೆ ಚಾಡಿ ಮಾತು ಕೇಳಿಕೊಂಡು ಸ್ನೇಹಿತರ ಮನೆಗೆ ನೆಂಟರ ಮನೆಗೆ ಹೋಗಿ ಇಳಿದುಕೊಳ್ಳುವುದು ಸರಿಯಲ್ಲ. ಟಿ. ಬಿ. ಯಲ್ಲಿ ಇಳಿದು ಕೊಳ್ಳಿ. ನೆಂಟರ ಮನೆಗೆ ಹೋಗಿ ಇಳಿದು ಕೊಳ್ಳಬೇಡಿ. M.A., LL.B. ಓದಿ ಅಡ್ವೋಕೇಟ್ ಆಗಿ ತನ್ನ ಕ್ಲೈಂಟ್ಸ್ 16 ಜನ ಮರ್ಡರ್ ಮಾಡಿದರೂ ಅಪರಾಧಿ ನಿರಪರಾಧಿ ಎಂದು ವಾದ ಮಾಡುತ್ತಾರೆ. ಆ ವಾದ ಎಲ್ಲಿ ಹಿಡಿಯುತ್ತದೆ? ನ್ಯಾಯವಾಗಿ ಏನು ಮಾಡಬೇಕು ಎನ್ನುವುದನ್ನು ಯೋಚನೆಮಾಡಬೇಕು. ತಾಲ್ಲೂಕಿನಲ್ಲಿ ಎಂ.ಎಲ್.ಎ. ಇದ್ದರೂ ಕೂಡ ಅವನಿಗೆ ತಿಳಿಸದೆ ಹಾಗೆ ಟೂರ್‌ಮಾಡಿ ಡೆಪ್ಯುಟಿ ಕಮೀಷನರ್ ಮತ್ತು ಅಫಿಷಿಯಲ್ಸ್ ಬಂದು ನಮ್ಮನ್ನು ನೋಡಬೇಕು ಎಂದು ಟೆಲಿಗ್ರಾಮ್ ಕೊಟ್ಟು ಮಗಳ ಮನೆಯಲ್ಲಿ ಕುಳಿತು ಟಿ.ಬಿ.ಯ ಹತ್ತಿರ ಬರುವುದಕ್ಕೆ ಆಗುವುದಿಲ್ಲ ಎಂದು ಹೇಳುವುದು. ಮನೆಯ ಹತ್ತಿರ ಮೂರುಸಾರ್ತಿ ಹೋದರೂ ಮಾತನಾಡಿಸದೆ ಈಗ ಎದುರಿಗೆ ಕುಳಿತುಕೊಂಡು ನಿಮ್ಮ ತಾಲ್ಲೂಕಿಗೆ ಏನು ರೋಡು ಆಗಬೇಕು ಎಂದು ಕೇಳುತ್ತಿದ್ದಾರೆ. ನಾನು ವಾಸ್ತವಾಂಶವನ್ನು ಹೇಳುತ್ತಿದ್ದೇನೆ. ಅದನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಳ್ಳಬೇಕು. ಇದೇ ರೀತಿ ತಾವೇನಾದರೂ ಮುಂದುವರಿಸಿದ್ದೇ ಆದರೆ ನಿಜವಾಗಿಯೂ ಕಪ್ಪು ಬಾವುಟ ಪ್ರದರ್ಶನ ಮಾಡಲೇಬೇಕು. ಕಪ್ಪು ಬಾವುಟವನ್ನು ಹೊಸದಾಗಿ ಹೊಲಿಸುವುದಕ್ಕೆ ನಮಗೆ ಸಾಧ್ಯವಿಲ್ಲ. ಕಪ್ಪು ಸೀರೆಯ ಬಾವುಟ ಪ್ರದರ್ಶನ ಮಾಡುತ್ತೇವೆ. ಪ್ರಜಾಪ್ರಭುತ್ವದಲ್ಲಿ ಯಾವ ರೀತಿ ಅವಮಾನ ಮಾಡುವುದಕ್ಕೆ ಸಾಧ್ಯವಿದೆಯೋ ಆ ರೀತಿ ಮಾಡುತ್ತೇವೆ.

ಶ್ರೀ ಟಿ. ಮರಿಯಪ್ಪ.—ಇಷ್ಟೊಂದು ಉಗ್ರವಾದ ಮಾತುಗಳು ಏಕೆ ?

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನನ್ನ ಮನಸ್ಸು ನೊಂದಿದೆ ನನ್ನ ಎದುರಿಗೇ ಬೇರೆಯವರನ್ನು ಕೂರಿಸಿಕೊಂಡು ಹೋಗಬೇಕಾದರೆ ಹೇಗೆ? ಪ್ರಜಾಪ್ರಭುತ್ವದಲ್ಲಿ ಅಧಿಕಾರ ಬಂದಿರತಕ್ಕ ಮಂತ್ರಿಗಳು foundation stone ಹಾಕಲು, ಅಥವ ಯಾವುದಾದರೂ ಕಾರ್ಯದ ಅಧ್ಯಕ್ಷತೆಯನ್ನು ವಹಿಸಲು ಬರುತ್ತಾರೆ. ಅಲ್ಲಿಯ ಕೆಲವರು, ಮಂತ್ರಿಗಳು ಬಂದಿದ್ದಾರೆ, ಇವರಿಂದ ಬೇಕಾದ ಕೆಲಸ ಮಾಡಿಸಿಕೊಳ್ಳಬಹುದು ಎಂದು ಮುಂದೆ ಬರುತ್ತಾರೆ. ಮಂತ್ರಿಗಳು ಪ್ರವಾಸ ಬಂದಾಗ ವ್ಯಕ್ತಿಗಳಲ್ಲ ಭೇದಭಾವವಿಲ್ಲದೆ, ಪಕ್ಷದಲ್ಲಿ ಭೇದಭಾವವಿಲ್ಲದೆ ಇರಬೇಕು. ಮುಖ್ಯಮಂತ್ರಿಗಳು ತಮ್ಮ ಸಹಪಾಠಿಗಳನ್ನು ಯಾವ ರೀತಿ ಇಟ್ಟುಕೊಳ್ಳಬೇಕು, ಯಾವ ರೀತಿ ಅವರಿಗೆ ಸೂಚನೆಗಳನ್ನು ಕೊಡಬೇಕು ಎನ್ನುವುದರಲ್ಲಿ ವಿಫಲರಾಗಿದ್ದಾರೆ ಎಂದು ಹೇಳಬಹುದು. ಆಡಳಿತದ ದಕ್ಷತೆಯ ವಿಷಯದಲ್ಲಿ ಹೇಳಬೇಕಾದರೆ ಮುಖ್ಯಮಂತ್ರಿಗಳು ನನ್ನ ಚುನಾವಣಾ ಕ್ಷೇತ್ರಕ್ಕೆ ಒಂದುಸಲ ಬಂದಿದ್ದರು. ನಾನೂ ಸಹ ಅವರೊಡನೆ ಟೂರ್‌ಮಾಡಿದೆ. ಅವರಿಗೆ ವಿಪರೀತ ಅರ್ಜಿಗಳು ಬಂದವು. ಯಾವುದಾದರೂ ಪ್ರಾರಂಭೋತ್ಸವಕ್ಕೆ ಅಥವಾ ಬೇರೆ ಕಾರ್ಯಕ್ಕಾಗಿ ಮಂತ್ರಿಗಳನ್ನು ಕರೆದುಕೊಂಡು ಹೋಗಿ ನಮಗೆ ಸ್ಕೂಲು ಕೊಡಿ, ಆಸ್ಪತ್ರೆ ಕೊಡಿ ಎಂದು ಕೇಳುವ ಪದ್ಧತಿ ಮೊದಲಿನಿಂದಲೂ ಇತ್ತು. ಈ ಅರ್ಜಿಗಳನ್ನು ವಿಲೇವಾರಿ ಮಾಡಬೇಕಾದರೆ, ಜನರಿಗೆ ಸರಿಯಾದ ಅನುಕೂಲಗಳನ್ನು

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ಮಾಡಿಕೊಡಬೇಕಾದರೆ, ಅಧಿಕಾರವನ್ನು ಕೇಂದ್ರೀಕರಣ ಮಾಡದೆ ವಿಕೇಂದ್ರೀಕರಣ ಮಾಡಬೇಕು. 350 ರೂಪಾಯಿಗಳವರೆಗೂ ತಹಸೀಲ್ದಾರರಿಗೆ, 500 ರೂಪಾಯಿಗಳವರೆಗೂ ಸಬ್ ಡಿವಿಜನ್ ಅಧಿಕಾರಿಗಳಿಗೆ, ಎರಡು ಸಾವಿರ ರೂಪಾಯಿಗಳವರೆಗೂ ಡೆಪ್ಯುಟಿ ಕಮೀಷನರಿಗೆ, ಈ ರೀತಿ ಏನಾದರೂ ಒಂದು ಅಧಿಕಾರವನ್ನು ಅಧಿಕಾರಿಗಳಿಗೆ ಕೊಡಿ. ಇದರ ಮೇಲ್ಪಟ್ಟ ಅಧಿಕಾರ ಸರ್ಕಾರಕ್ಕೆ ಇದ್ದೇ ಇರುತ್ತದೆ.

ಶ್ರೀ ಟಿ. ಮರಿಯಪ್ಪ.—ಸೇಲ್ಸ್ ಟ್ಯಾಕ್ಸ್ ಆಕ್ಟಿನಲ್ಲಿ ಸರ್ಕಾರಕ್ಕೆ ಪವರ್ಸ್ ಇಲ್ಲ......

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಾನು ಎಲ್ಲರಿಗೂ yield ಆಗುತ್ತೇನೆ. ಮಂತ್ರಿಗಳಾಗಿದ್ದರೂ ಕೂಡ, ಎಲ್ಲ ಅಧಿಕಾರವಿದ್ದರೂ ಕೂಡ yield ಆಗುವುದಿಲ್ಲವೆಂದು ಹೇಳುತ್ತೀರಿ. ನಾವು ಆ ರೀತಿ ಹೇಳುವುದಿಲ್ಲ. ಈ ಸಭೆಯಲ್ಲಿರುವ ಪ್ರತಿಯೊಬ್ಬ ಸದಸ್ಯರಿಗೂ ಕೂಡ yield ಆಗುತ್ತೇನೆ. ದಯವಿಟ್ಟು ನನಗೆ ಸ್ವಲ್ಪ ಕಾಲ ಹೆಚ್ಚಾಗಿ ಕೊಡಬೇಕು. ಅತಿ ಕಡಮೆ ಖರ್ಚುಮಾಡಿ ಚುನಾವಣೆಯಲ್ಲಿ ಬಂದಿರುವ ಮನುಷ್ಯನಾದ ನನಗೆ ತಾಲ್ಲೂಕಿನ ಕಷ್ಟ ಸುಖಗಳನ್ನು ಹೇಳಲು ಹೆಚ್ಚು ಕಾಲಾವಕಾಶ ಕೊಡಿ. ಆಡಳಿತದಲ್ಲಿರುವ ಕಳೆಯನ್ನು ಕಿತ್ತು ಪೈರು ನೆಟ್ಟಗೆ ಮಾಡುವುದು ನನ್ನ ಕರ್ತವ್ಯ. ಹಾಗೆ ಮಾಡಬೇಕಾಗಿದೆ. ವಿರೋಧಪಕ್ಷದವರಿಗೆ ಹೆಚ್ಚು ಕಾಲವನ್ನು ಕೊಡಬೇಕು. ಒಬ್ಬ ಮಂತ್ರಿಗಳಿಗೆ ಬಹಳ ಅವಕಾಶವನ್ನು ಕೊಟ್ಟಿದ್ದೀರಿ. ನಾವು ಅವರನ್ನು ತಿದ್ದುವವರು, ಆದುದರಿಂದ ವಿರೋಧಪಕ್ಷದವರಿಗೆ ಹೆಚ್ಚುಕಾಲ ಕೊಡಬೇಕು. ಹದಿನೈದು ನಿಮಿಷವಾಯಿತು, ನಿಲ್ಲಿಸಿ ಎಂದರೆ ನಿಲ್ಲಿಸುತ್ತೇನೆ.

ಈಗ ಎಲ್ಲ ಕೊಟ್ಟಿದ್ದೇವೆಂದು ಹೇಳುತ್ತಾರೆ. ಒಂದು ಭಾವಿ ತೆಗೆಯುವುದಕ್ಕೆ ಸಬ್ ಓವರ್ಸೀಯರು ಒಂದು ಸಾವಿರ ರೂಪಾಯಿಗೆ ಎಸ್ಟಿಮೇಟ್ ಮಾಡುತ್ತಾರೆ. ಬಾವಿ ತೆಗೆಯಲು ಮರಳು ಇದೆಯೋ, ಕಲ್ಲು ಇದೆಯೋ ಯಾರಿಗೆ ಗೊತ್ತಾಗುತ್ತದೆ? ಕೆಲಸ ನಡೆದಂತೆ ಕೆಲವು ವೇಳೆ ರಿವೈಸ್ಡ್ ಎಸ್ಟಿಮೇಟುಗಳನ್ನು ಮಾಡಬೇಕಾಗುತ್ತದೆ. ನಾನು ಕಡಿದಾಳ್ ಮಂಜಪ್ಪನವರಿಗೂ, ಮುಖ್ಯ ಮಂತ್ರಿಗಳಿಗೂ ಹೇಳಿದ್ದೇನೆ. ಇಂಥ ಸಂದರ್ಭಗಳಲ್ಲಿ ಪುನರ್ವಿಮರ್ಶಿತ ಅಂದಾಜುಗಳು ಬೇಗ ಮಂಜೂರಾಗಿ ಕೆಲಸಗಳು ನಡೆಯುವಂತಾಗಬೇಕು. ಇವನ್ನು ಸರಿಪಡಿಸಬೇಕಾದದ್ದು ಮುಖ್ಯಮಂತ್ರಿಗಳ ಕರ್ತವ್ಯವೆಂದು ತಿಳಿದುಕೊಂಡಿದ್ದೇನೆ. ಇವೊತ್ತು ನಮ್ಮ ಸ್ಕೂಲು ಕಟ್ಟಡದ ಗ್ರಾಂಟಿನಲ್ಲಿ ಒಂದು ಕಾಸು ಕೂಡ ಖರ್ಚಾಗಿಲ್ಲ. ಕಾರಣವೇನು? ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸುತ್ತಾರೆ. ಆದರೆ ಅದನ್ನು ಖರ್ಚುಮಾಡುತ್ತಿಲ್ಲ. ತಿಪಟೂರು ತಾಲ್ಲೂಕಿಗೆ ಸಂಬಂಧಪಟ್ಟಂತೆ ಕೆಲವು ಗ್ರಾಮಗಳಲ್ಲಿನ ಕೆಲಸಗಳು, ಅವಕ್ಕೆ ಬಡ್ಜೆಟ್ಟಿನಲ್ಲಿ ಹಣ ಒದಗಿಸಿದ್ದರೂ, ಆಗಿಲ್ಲ. ಬಡ್ಜೆಟ್ಟಿನಲ್ಲಿ ಒದಗಿಸಿರುವುದು ಖರ್ಚಾಗದೆ ಇರುವುದಕ್ಕೆ ಕಾರಣವೇನು? ಇದನ್ನು ಯಾರಾದರೂ ಮಂತ್ರಿಗಳು ತಿಳಿದುಕೊಳ್ಳುತ್ತಾರೆಯೇ? ಇದಕ್ಕೆ ಗಮನ ಕೊಡುವುದೇ ಇಲ್ಲ. ನಾನು ಹೇಗೆ ಆಡಳಿತ ಸ್ಥಾನಕ್ಕೆ ಬರಬೇಕು, ಹೇಗೆ ಮುಖ್ಯಮಂತ್ರಿಯಾಗಬೇಕು ಎಂದು ಯೋಚಿಸುತ್ತಾ ಇರುತ್ತಾರೆ. ಹಿಂದಿನ ಮಂತ್ರಿಮಂಡಲ ಹೋಗಿ ಈಗಿನ ಮಂತ್ರಿಮಂಡಲ ಬಂತು. ಈ ವ್ಯಾಧಿ ಇವರನ್ನೂ ಬಿಟ್ಟಿಲ್ಲ. ನಿಮ್ಮಲ್ಲಿ ಆಗುವ ಬದಲಾವಣೆಯಿಂದ ತಲೆನೋವು ಆಗುತ್ತದೆ. ಅರ್ಥತಲೆ ಕೆಟ್ಟಿದೆ. ಹಿಂದಿನವರ ಹತ್ತಿರ ಬಡಿದುಕೊಂಡದ್ದಾಯಿತು. ನಿಮ್ಮ ಹತ್ತಿರ ಬಡಿದುಕೊಂಡದ್ದಾಯಿತು. ಒಂದು ಕೆಲಸವೂ ಆಗಿಲ್ಲ. ಯಾರು ಬಂದರೂ ಅವರ ಮುಂದೆಲ್ಲ ಬಡಿದುಕೊಳ್ಳಬೇಕಾಗುತ್ತದೆ. ಇದೆಲ್ಲ ಬೇಡ. ಬಾವಿ ಅಂದಾಜನ್ನು 1,500 ರೂಪಾಯಿಗಳಿಗೆ ರಿವೈಸ್ ಮಾಡುತ್ತಾರೆ. ಅದು ಸಬ್‌ಡಿವಿಜನ್ ಅಧಿಕಾರಿಗಳ ಹತ್ತಿರ ಹೋದರೆ ಒಂದು ವರ್ಷವಾದರೂ ಈಚೆಗೇ ಬರುವುದಿಲ್ಲ. ಹೀಗಾದರೆ ಕೆಲಸ ಹೇಗೆ ಆಗಬೇಕು? ಎಸ್ಟಿಮೇಟ್ ಮಂಜೂರಾಗುವುದರೊಳಗಾಗಿ ಬಾವಿ ಕುಸಿದು ಬೀಳುತ್ತದೆ ಈ ದುಡ್ಡನ್ನು ಯಾರು ಕೊಡುವವರು? ತಹಸೀಲ್ದಾರರಿಗೆ 50 ರೂಪಾಯಿ ಅಥವ 100 ರೂಪಾಯಿ ಹೆಚ್ಚಾದರೂ ಅದನ್ನು ಮಂಜೂರು ಮಾಡುವುದಕ್ಕೆ ಅವಕಾಶವಿಲ್ಲ. ಇದರಿಂದ ಬಾವಿ ಕೆಲಸ ಮುಗಿಯಲು ಸಾಧ್ಯವಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಸಬ್‌ಡಿವಿಷನ್ ಆಫೀಸರಿಗೆ ಅಧಿಕಾರವಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಒಂದು ವರ್ಷವಾದರೂ ಎಸ್ಟಿಮೇಟನ್ನು ವಾಪಸು ಕಳಿಸುವುದಿಲ್ಲ. 100-200 ರೂಪಾಯಿಗಳಿಗೆ ತಹಶೀಲ್ದಾರರನ್ನು ನಂಬುವುದಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಫೈನಾನ್ಸ್ ವಿಷಯಗಳಲ್ಲಿ ನಮ್ಮ ಪಕ್ಷದವರು, ನಿಮ್ಮ ಪಕ್ಷದವರು ಎಂಬ ಭೇದವಿಲ್ಲ. ಸಾರ್ವಜನಿಕರಿಗೆ ಸಂಬಂಧಪಟ್ಟಂಥ ಹಣದ ವಿಷಯದಲ್ಲಿ ಸ್ವಲ್ಪ safeguards ಇರಬೇಕು. ಅಮಲ್ದಾರರು ಮಾಡಿದ ಎಸ್ಟಿಮೇಟಿಗಿಂತ ಜಾಸ್ತಿ ಆದರೆ ಸಬ್‌ಡಿವಿಷನ್ ಅಧಿಕಾರಿಗಳಿಗೆ ಅಪ್ರೂವಲ್‌ಗೆ ಕಳುಹಿಸಿಕೊಡಬೇಕು. ಇದು ತಪ್ಪು ಎಂದರೆ ಹೇಗೆ ಎನ್ನುವುದು ಅರ್ಥವಾಗುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಎನ್.ಇ.ಎಸ್.ನಲ್ಲಿ ಸಹ ಇದೇರೀತಿ ಸಂಪ್ರದಾಯವನ್ನು ಸೇರಿಸಿದ್ದೀರಿ. ಅಡ್ವೈಸರಿ ಸಮಿತಿಯಲ್ಲಿ ಬರೀ ಸಬ್ ಡಿವಿಷನ್ ಆಫೀಸರನ್ನು ಹಾಕುತ್ತಿದ್ದೀರಿ. ಒಬ್ಬ ತಹಸೀಲ್ದಾರನನ್ನು ನಂಬದೆ ಇದ್ದರೆ ಅವರನ್ನು ಇಟ್ಟುಕೊಳ್ಳುವುದಕ್ಕೆ ಕಾರಣವೇನು?

ಶ್ರೀ ಕಡಿದಾಳ್ ಮಂಜಪ್ಪ.—ತಾವು ಹೇಳಬೇಕಾದದ್ದೇ. ಶ್ರೀ ಮಲ್ಲಾರಾಧ್ಯರಿಗೆ ಪ್ರಾಕ್ಟಿಕಲ್ ಆಗಿ ಗೊತ್ತಿದೆ. ಎಸ್ಟಿಮೇಟ್ ಮಂಜೂರಾಗಿದ್ದು, ಅದಕ್ಕಿಂತ ಹೆಚ್ಚಾಗಿ ಕೊಡಬೇಕಾದರೆ ಮೇಲ್ಪಟ್ಟ ಅಧಿಕಾರಿಗಳ ಅನುಮತಿ ಬೇಕಾಗುತ್ತದೆ.

ಶ್ರೀ ಎಂ. ಕೆ. ಬೊಮ್ಮೇಗೌಡ (ಕೃಷ್ಣರಾಜಪೇಟೆ).—ಜನರಲ್ ಅಡ್ಮಿನಿಸ್ಟ್ರೇಷನ್ ಮೇಲೆ ಮಾತನಾಡುತ್ತಿದ್ದಾರೋ ಅಥವಾ ರೂರಲ್ ಡೆವಲಪ್‌ಮೆಂಟ್ ಮೇಲೆ ಮಾತನಾಡುತ್ತಿದ್ದಾರೋ?

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಜನರಲ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಬರುತ್ತದೆ ಎಂದು ಹೇಳುತ್ತೇನೆ.

ಸ್ಕೂಲ್ ಬಿಲ್ಡಿಂಗ್ ಗ್ರಾಂಟ್ಸ್‌ನಲ್ಲಿ ಒಂದು ಕಾಸೂ ಖರ್ಚಾಗಿಲ್ಲ. ಬೊಮ್ಮಲಾಪುರದಲ್ಲಿ ಜಮೀನ್ ಅಕ್ವೈರ್ ಆಗಿಲ್ಲ, ತಿಮ್ಮಲಾಪುರದಲ್ಲಿ ಜಮೀನು ಅಕ್ವೈರ್ ಆಗಿಲ್ಲವೆಂದರೆ ಯಾವ ಯಾವ ಕಡೆ ಕಟ್ಟಡಗಳನ್ನು ಕಟ್ಟಿಸಿದ್ದೀರಿ? ಕಟ್ಟಡಗಳಿಗೆ ಒಂದು ಕಾಸೂ ಖರ್ಚಾಗಿಲ್ಲ. ಈ ರೀತಿ ಬಡ್ಜೆಟ್ಟಿನಲ್ಲ ಪ್ರತಿಯೊಂದು ಬಾಬಿನಲ್ಲಿಯೂ ಉಳಿಸಿಕೊಂಡು ಹೋಗುತ್ತಿದ್ದೀರಿ.

ಎನ್.ಇ.ಎಸ್. ಬ್ಲಾಕುಗಳ ವಿಚಾರ ತೆಗೆದುಕೊಂಡರೆ ಒಂದು ಕಡೆ ತುರುವೇಕೆರೆ ತಾಲ್ಲೂಕಿಗೂ, ಮತ್ತೊಂದು ಕಡೆ ಚಿಕ್ಕನಾಯ್ಕನಹಳ್ಳಿ ತಾಲ್ಲೂಕಿಗೂ ಕೊಟ್ಟಿದ್ದೀರಿ ಹೊಸ ಹೊಸದಾಗಿ ಬ್ಲಾಕುಗಳನ್ನು ಕೊಡುತ್ತಿದ್ದೀರಿ. ತಿಪಟೂರಿಗೆ ಕೊಡದೆ ಇರುವುದಕ್ಕೆ ಕಾರಣವೇನು? ಅದರಿಂದ ಖರ್ಚು ಕಡಮೆಯಾಗುತ್ತದೆಯೋ ಅಥವಾ

ಜಾಸ್ತಿಯಾಗುತ್ತದೆಯೇ? ಮಾನ್ಯ ಕಡಿದಾಳ್ ಮಂಜಪ್ಪನವರು ತಿಪಟೂರನ್ನು ಚೆನ್ನಾಗಿ ನೋಡಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪ.—ತಿಪಟೂರಿನಲ್ಲಿ ತೆಂಗಿನ ತೋಟ ಹೆಚ್ಚಾಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಚಿಪ್ಪುಬಿಟ್ಟು ಕೊಬ್ಬರಿಎಲ್ಲ ತೆಗೆದುಕೊಂಡು ಹೋಗುತ್ತಾರೆ ಸ್ವಾಮಿ! ಸಬ್ ಡಿವಿಷನ್ ಅಧಿಕಾರಿಗಳು ತುರುವೇಕೆರೆ ಮತ್ತು ಚಿಕ್ಕನಾಯ್ಕನಹಳ್ಳಿ ಬ್ಲಾಕುಗಳಿಗೆ ಹೋಗುವಾಗ ಎರಡೆರಡು ಸಲ ನಮ್ಮ ತಾಲ್ಲೂಕಿನಲ್ಲಿ ಹಾದುಹೋಗುತ್ತಾರೆ. ಆದರೂ ಸಹ ನಮ್ಮ ತಿಪಟೂರು ತಾಲ್ಲೂಕಿಗೆ ಎನ್.ಇ.ಎಸ್. ಬ್ಲಾಕ್ ಕೊಡದಿರುವುದಕ್ಕೆ ಕಾರಣ ವೇನು?

ಶ್ರೀ ಟಿ. ಮರಿಯಪ್ಪ.—ನಮ್ಮ ತಾಲ್ಲೂಕಿಗೂ ಕೊಟ್ಟಿಲ್ಲ. ನಾಗಮಂಗಲ ತಾಲ್ಲೂಕು ತೀರ ಹಿಂದುಳಿದ ತಾಲ್ಲೂಕಾಗಿದೆ.

